
ಸಂಪುಟ: 05 ಸಂಚಿಕೆ: 354 ಪುಟಗಳು: 08 ಭಾನುವಾರ 08 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಸಾಧನೆ ಇಲ್ಲದೆ ಸತ್ತರೆ
ಸಾವಿಗೆ ಅವಮಾನ,
ಆದರ್ಶ ಇಲ್ಲದೆ
ಬದುಕಿದರೆ ಬದುಕಿಗೆ
ಅವಮಾನ..!

# ಉದಯ ವಾಹಿನಿ
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ
#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

## ಸಮಾಜ ಒಡೆಯುವ ಪ್ರಯತ್ನಗಳ ಬಗ್ಗೆ ಜಾಗೃತರಾಗಿರಿ

• ಉದಯವಾಹಿನಿ, ಬೆಂಗಳೂರು

'ಜಾತಿ ಧರ್ಮಗಳ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಪ್ರಯತ್ನಗಳ ಬಗ್ಗೆ ಜನರು ಜಾಗೃತರಾಗಿರಬೇಕು' ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಶಿರಮಹಳ್ಳಿಯಲ್ಲಿ ಲಕ್ಷ್ಮಿದೇವಿ ಅಮ್ಮನವರ ನೂತನ ದೇವಾಲಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಎಚ್.ಡಿ. ಕೋಟೆಯ ಶಿರಮಹಳ್ಳಿಯ ಜನರು ದೈವಭಕ್ತರು. ದೇಗುಲದಲ್ಲಿ ಸ್ಥಾಪಿಸುವ ಪ್ರತಿಮೆಯಲ್ಲಿ ದೇವರನ್ನು ಕಾಣುವುದು ನಮ್ಮ ನಂಬಿಕೆ. ಬಸವಾದಿ ಶರಣರು, ದೇವರು ಎಲ್ಲೆಡೆಯೂ, ಎಲ್ಲರಲ್ಲಿಯೂ ಇದ್ದಾನೆ ಎಂದಿದ್ದಾರೆ.

ನಮ್ಮ ಪ್ರಾರ್ಥನೆಯಲ್ಲಿ ಇತರರಿಗೆ ಒಳಿತನ್ನೂ ಕೇಳಬೇಕು. ಮನುಷ್ಯನನ್ನು ಮನುಷ್ಯನನ್ನಾಗಿ ಕಾಣಬೇಕು' ಎಂದರು. 'ದೇವರೆಂಬ ನಂಬಿಕೆಯು ಜಾತಿ ಧರ್ಮಗಳನ್ನು ಮೀರಿದ್ದು, ಜಾತಿ ಧರ್ಮಗಳನ್ನು ಮರೆತು ಜನರು ಒಗ್ಗಟ್ಟಾಗಬೇಕು. ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ಜಾತಿ ವ್ಯವಸ್ಥೆ ಹಾಗೂ ಅಸಮಾನತೆಗಳನ್ನು ಬೆಂಬಲಿಸುತ್ತವೆ. ಇದನ್ನು ಧಿಕ್ಕರಿಸಬೇಕು. ಜಾತಿ ಧರ್ಮಗಳ ಬೇಧ ಮರೆದು ಜನರು ಒಗ್ಗಟ್ಟಾಗುವ ಅಗತ್ಯ ಹಿಂದಿಂದೆಗಿಂತಲೂ ಈಗ ಹೆಚ್ಚಿದೆ' ಎಂದು ತಿಳಿಸಿದರು. 'ಜನರ ಆಶೀರ್ವಾದದಿಂದಾಗಿ ನಾನು ಹೆಚ್ಚು ಬಜೆಟ್ ಗಳನ್ನು ಮಂಡಿಸಿದ್ದೇನೆ. ಶಿರಮಳ್ಳಿ ಗ್ರಾಮ ಸೇರಿದಂತೆ ಈ ಭಾಗದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಈ ತಾಲ್ಲೂಕಿಗೆ ಏನೇ ಅಭಿವೃದ್ಧಿ ಕೆಲಸ ಕೇಳಿದರೂ ಮಂಜೂರು ಮಾಡುತ್ತೇನೆ. ಕ್ಷೇತ್ರದ ಅಭಿವೃದ್ಧಿಗೆ ನಾನೂ ಸಹಕಾರ ನೀಡುತ್ತೇನೆ' ಎಂದು ತಿಳಿಸಿದರು. 'ತಾಲ್ಲೂಕಿನ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾವಿರಾರು ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದಾರೆ. ತಾಲ್ಲೂಕಿನಲ್ಲಿ ಕಾರ್ಮಿಕ ಇಲಾಖೆಯ ಹಾಸ್ಟೆಲ್ ಸ್ಥಾಪನೆ ಬಗ್ಗೆ ಘೋಷಿಸಿ, ರೂ.35 ಕೋಟಿ ಬಿಡುಗಡೆ ಮಾಡಿದ್ದಾರೆ' ಎಂದು ಹೇಳಿದರು.

## ಅಡುಗೆ ಮನೆಗೂ ಯುದ್ಧದ ಬಿಸಿ
# ಗ್ರಾಹಕರಿಗೆ ಕಸಿವಿಸಿ

**ಕೊಲ್ಲಿ ಯುದ್ಧ ಎಫೆಕ್ಟ್**

ಇಂದಿನಿಂದಲೇ ಪರಿಷ್ಕೃತ ದರ ಜಾರಿ

1. ಬೆಂಗಳೂರಿನಲ್ಲಿ ಮನೆಬಳಕೆ ಸಿಲಿಂಡರ್ ಬೆಲೆ ಅರವತ್ತು ರೂಪಾಯಿ ಏರಿಕೆ
2. ರಾತ್ರೋರಾತ್ರಿ ಮನೆಬಳಕೆ ಸಿಲಿಂಡರ್ ಬೆಲೆ ಭಾರೀ ಹೆಚ್ಚಳ
3. ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ: ಪ್ರಧಾನಿ ಮೋದಿ ಕ್ಷಮೆಯಾಚಿಸಿ, ರಾಜೀನಾಮೆ ನೀಡಲಿ ಎಂದ ಸಿದ್ದರಾಮಯ್ಯ



## ಸಿಲಿಂಡರ್ ಬೆಲೆ ಏರಿಕೆ ಬಿದ್ದವನಿಗೆ ಒದ್ದಂತೆ



**'ಮೋದಿ ಸರ್ಕಾರಕ್ಕೆ ತರಾಟೆ!**

• ಉದಯವಾಹಿನಿ, ನವದೆಹಲಿ

ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿನ ಸಂಘರ್ಷದಿಂದಾಗಿ ಹೆಚ್ಚುತ್ತಿರುವ ಇಂಧನ ವೆಚ್ಚದ ಮಧ್ಯೆ, ಗೃಹ ಬಳಕೆಯ ಎಲ್‌ಪಿಜಿ ಮತ್ತು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಏರಿಕೆಯಾಗಿದೆ. ಗೃಹ ಬಳಕೆಯ ಸಿಲಿಂಡರ್‌ಗೆ 60 ರೂ. ಮತ್ತು ವಾಣಿಜ್ಯ ಸಿಲಿಂಡರ್‌ಗೆ 114.5 ರೂ.ಗಳಷ್ಟು ಹೆಚ್ಚಳವಾಗಿದೆ.ಉಜ್ವಲ ಫಲಾನುಭವಿಗಳನ್ನು ಹೊರತುಪಡಿಸಿ ಸಾಮಾನ್ಯ ಗೃಹಬಳಕೆದಾರರು ತಮ್ಮ ಅಡುಗೆಮನೆಗಳಲ್ಲಿ ಬಳಸುವ ಸಬ್ಸಿಡಿ ರಹಿತ ಎಲ್‌ಪಿಜಿ 14.2 ಕೆಜಿ ಸಿಲಿಂಡರ್‌ಗೆ, ದೆಹಲಿಯಲ್ಲಿ 913 ರೂ.ಗಳಿಗೆ ಏರಿಕೆಯಾಗಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ವೆಬ್ ಸೈಟ್ ತಿಳಿಸಿದೆ. ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯಲ್ಲಿ ಇದು ಎರಡನೇ ಬಾರಿ ಬೆಲೆ ಏರಿಕೆಯಾಗಿದೆ.

ಪಶ್ಚಿಮ ಏಷ್ಯಾದಲ್ಲಿ ಭುಗಿಲೆದ್ದ ಮಿಲಿಟರಿ ಸಂಘರ್ಷದ ನಂತರ ಜಾಗತಿಕ ಇಂಧನ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ ಎಂದು ಕೈಗಾರಿಕಾ ಅಧಿಕಾರಿಗಳು ತಿಳಿಸಿದ್ದಾರೆ.ಈಗ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಾಗಿದೆಯಾದರೂ, ನೆರೆಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಅಡುಗೆ ಅನಿಲದ ಬೆಲೆ ಅತ್ಯಂತ ಕಡಿಮೆಯಾಗಿದೆ ಎಂದು ಅವರು ಹೇಳಿದರು.ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ವೆಬ್‌ಸೈಟ್‌ನಲ್ಲಿ ತಿಳಿಸಿರುವಂತೆ ಪರಿಷ್ಕೃತ ದರ ಮಾರ್ಚ್ 7 ಅಂದರೆ ಇಂದಿನಿಂದಲೇ ಜಾರಿಗೆ ಬರಲಿದೆ. ಕಳೆದ 11 ತಿಂಗಳಲ್ಲಿ ಎರಡನೇ ಬಾರಿಗೆ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಕೊನೆಯ ಬಾರಿಗೆ 50 ರೂ. ಬೆಲೆ ಹೆಚ್ಚಿಸಲಾಗಿತ್ತು.ಮುಂಬೈನಲ್ಲಿ ಸಬ್ಸಿಡಿ ರಹಿತ ಎಲ್‌ಪಿಜಿ ಬೆಲೆ ಈಗ 912.50 ರೂ., ಕೋಲ್ಕತ್ತಾದಲ್ಲಿ 939 ರೂ. ಮತ್ತು ಚೆನ್ನೈನಲ್ಲಿ 928.50 ರೂ.ಗೆ ಏರಿದೆ ಎಂದು ಐಒಸಿ ವೆಬ್ ಸೈಟ್ ತಿಳಿಸಿದೆ. ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್ ಅನ್ನು ಅವಲಂಬಿಸಿ ದರಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತವೆ.

2016ರಲ್ಲಿ ಉಜ್ವಲ ಯೋಜನೆ ಪ್ರಾರಂಭವಾದಾಗಿನಿಂದ ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ಪಡೆದಿರುವ 10 ಕೋಟಿಗೂ ಹೆಚ್ಚು ಬಡವರು ಈ ಯೋಜನೆಯ ಫಲಾನುಭವಿಗಳಾಗಿದ್ದು, ವರ್ಷದಲ್ಲಿ 12 ಮರುಪೂರಣಗಳಿಗೆ 14.2 ಕೆಜಿ ಸಿಲಿಂಡರ್‌ಗೆ 300 ರೂ. ಸಬ್ಸಿಡಿ ಸಿಗುವುದು ಮುಂದುವರಿಯಲಿದೆ. ಇದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಂತಹ ಸಂಸ್ಥೆಗಳು ಬಳಸುವ 19 ಕೆಜಿ ಸಿಲಿಂಡರ್ ವಾಣಿಜ್ಯ ಎಲ್‌ಪಿಜಿಗೆ 114.5 ರೂ. ಹೆಚ್ಚಿಸಲಾಗಿದೆ. ಈಗ ದೆಹಲಿಯಲ್ಲಿ ವಾಣಿಜ್ಯ ಅನಿಲ ಸಿಲಿಂಡರ್ ಬೆಲೆ 1,883 ರೂ. ಆಗಿದೆ. ಮಾರ್ಚ್ 1 ರಂದು 19 ಕೆಜಿ ಸಿಲಿಂಡರ್‌ಗೆ 28 ರೂ. ಏರಿಕೆ ಹೆಚ್ಚು ಮಾಡಲಾಗಿತ್ತು.

**ಇಂಧನ ಸರಬರಾಜು ಸ್ಥಿರ:** ದೇಶೀಯ ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ ಏರಿಯಾಗಿದ್ದರೂ ಇಂಧನ ಸರಬರಾಜು ಸ್ಥಿರವಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.ದೇಶದ ಜನರಿಗೆ ಕೈಗೆಟುಕುವ ಮತ್ತು ಸುಸ್ಥಿರ ಇಂಧನದ ಲಭ್ಯತೆ ಖಚಿತಪಡಿಸಿಕೊಳ್ಳುವುದು ಆದ್ಯತೆಯಾಗಿದೆ ದೇಶದಲ್ಲಿ ಲ ಇಂಧನದ ಕೊರತೆಯಿಲ್ಲ, ಇಂಧನ ಗ್ರಾಹಕರಿಗೆ ಚಿಂತೆ ಪಡುವ ಯಾವುದೇ ಲಕ್ಷಣವಿಲ್ಲ ಎಂದು ತಿಳಿಸಿದ್ದಾರೆ.ಭಾರತೀಯ ತೈಲ ನಿಗಮ ದೇಶದಲ್ಲಿ ಸಾಕಷ್ಟು ಇಂಧನ ದಾಸ್ತಾನುಗಳನ್ನು ಹೊಂದಿದೆ ಮತ್ತು ಪೂರೈಕೆ ಮತ್ತು ವಿತರಣಾ ಜಾಲಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶಾದ್ಯಂತ ನಿರಂತರ ಇಂಧನ ಪೂರೈಕೆ ನಿರ್ವಹಿಸಲು ಭಾರತೀಯ ತೈಲ ನಿಗಮ ಬದ್ಧವಾಗಿದೆ ಎಂದಿದ್ದಾರೆ.

### ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ದರವನ್ನು 60ರೂ ಏರಿಕೆ ಹಿನ್ನೆಲೆ ಯುವ ಕಾಂಗ್ರೆಸ್ ಸದಸ್ಯರು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡ ಧರಿಸುವ ಮೂಲಕ ದರ ಏರಿಕೆಗೆ ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ದುಬಾರಿ ಬೆಲೆಯಿಂದ ಸಂಕಷ್ಟದಲ್ಲಿರುವ ಸಾಮಾನ್ಯ ಜನತೆಗೆ ಈ ನಿರ್ಧಾರ ದೊಡ್ಡ ಹೊಡೆತವಾಗಿದೆ. ಸಬ್ಸಿಡಿ ವ್ಯವಸ್ಥೆಯನ್ನು ಕ್ರಮೇಣ ಕಡಿಮೆ ಮಾಡುವ ಮೂಲಕ ಬಡ ಮತ್ತು ಮಧ್ಯಮ ವರ್ಗದ ಜನರ ಮೇಲೆ ಸರ್ಕಾರ ಆರ್ಥಿಕ ಹೊರೆ ಹಾಕಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಆರೋಪಿಸಿದರು.ಇತ್ತೀಚೆಗೆ ಅಮೆರಿಕದ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ರಷ್ಯಾದಿಂದ ತೈಲ ಖರೀದಿ ವಿಚಾರದಲ್ಲಿ ನೀಡಿರುವ ಹೇಳಿಕೆಗಳು ಹಾಗೂ ಜಾಗತಿಕ ರಾಜಕೀಯ ಬೆಳವಣಿಗೆಗಳ ನಡುವೆ ಭಾರತದ ಹಿತಾಸಕ್ತಿಯನ್ನು ದೃಢವಾಗಿ ರಕ್ಷಿಸುವ ಬದಲು ಕೇಂದ್ರ ಸರ್ಕಾರ ಮೌನ ವಹಿಸಿರುವುದು ದೇಶದ ಗೌರವಕ್ಕೆ ಧಕ್ಕೆ ತರುವಂತಾಗಿದೆ ಎಂದು ಟೀಕಿಸಿದರು.

### ಬೆಲೆ ಏರಿಕೆಗೆ ಕಾರಣ

ಮಧ್ಯಪ್ರಾಚ್ಯದಲ್ಲಿ, ಅದರಲ್ಲೂ ವಿಶೇಷವಾಗಿ ಇರಾನ್ ಹಾಗೂ ಇಸ್ರೇಲ್ ನಡುವೆ ಉಂಟಾಗಿರುವ ಯುದ್ಧದ ಪರಿಸ್ಥಿತಿಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಮತ್ತು ಅನಿಲದ ಬೆಲೆಗಳಲ್ಲಿ ತೀವ್ರ ಏರುಪೇರಾಗುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಈ ಬೆಲೆ ಏರಿಕೆಯನ್ನು ಸರಿದೂಗಿಸಲು ಭಾರತದಲ್ಲೂ ಸಿಲಿಂಡರ್ ದರ ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ಕಳೆದ 2025ರ ಏಪ್ರಿಲ್ ತಿಂಗಳಲ್ಲಿ ಕೊನೆಯ ಬಾರಿಗೆ ಗೃಹ ಬಳಕೆಯ ಸಿಲಿಂಡರ್ ದರವನ್ನು 50 ರೂಪಾಯಿಗಳಷ್ಟು ಏರಿಕೆ ಮಾಡಲಾಗಿತ್ತು. ಅದಾದ ಬಳಿಕ ಸ್ಥಿರವಾಗಿದ್ದ ದರ, ಇದೀಗ ದಿಢೀರನೆ ಮತ್ತೆ ಏರಿಕೆಯ ಬರೆ ಎಳೆದಿದೆ.

### 913 ರೂ.ಗೆ ತಲುಪಿದ ಬೆಲೆ

ಈ ಹೊಸ ದರ ಏರಿಕೆಯ ಬಳಿಕ, ರಾಷ್ಟ್ರರಾಜಧಾನಿ ದೆಹಲಿಯಲ್ಲಿ ಸಬ್ಸಿಡಿ ರಹಿತ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 853 ರೂಪಾಯಿಯಿಂದ 913 ರೂಪಾಯಿಗೆ ಏರಿಕೆಯಾಗಿದೆ. ದೇಶದ ಇತರ ಪ್ರಮುಖ ನಗರಗಳಲ್ಲೂ ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ಬೆಲೆಗಳಲ್ಲಿ ಬದಲಾವಣೆಯಾಗಿದ್ದು, ಗ್ರಾಹಕರಿಗೆ ಆರ್ಥಿಕ ಹೊರೆಯಾಗಲಿದೆ.

### ವಿದೇಶಾಂಗ ನೀತಿಯ ಫಲ!

ಈ ಏರಿಕೆ ಅನಿವಾರ್ಯ ಕ್ರಮವೇನಲ್ಲ, ಇದು ಶರಣಾಗತಿಯನ್ನೇ ದೇಶದ ಕಾರ್ಯತಂತ್ರವೆಂದು ತಪ್ಪಾಗಿ ತಿಳಿದುಕೊಂಡ ವಿದೇಶಾಂಗ ನೀತಿಯ ಫಲವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮಾತುಗಳಿಗೆ ಮೂಕರಂತೆ ತಲೆಯಾಡಿಸುವ





ಮೂಲಕ ಭಾರತದ ವ್ಯೂಹಾತ್ಮಕ ಸ್ವಾತಂತ್ರ್ಯವನ್ನು ಬೇರೊಂದು ರಾಷ್ಟ್ರದ ಪಾದದಡಿ ಇಟ್ಟಿದ್ದಾರೆ ಮತ್ತು ರಷ್ಯಾ ಹಾಗೂ ಇರಾನ್‌ನಂತಹ ದೇಶಗಳೊಂದಿಗಿನ ಭಾರತದ ದೀರ್ಘಕಾಲೀನ ಇಂಧನ ಸಹಭಾಗಿತ್ವವನ್ನು ಹಾಳುಗೆಡವಿದ್ದಾರೆ ಎಂದು ಆರೋಪಿಸಿದ್ದಾರೆ. ಇವು ಹಲವು ದಶಕಗಳಿಂದ ಭಾರತೀಯರಿಗೆ ಇಂಧನ ಸ್ಥಿರತೆಯನ್ನು ಖಾತ್ರಿಪಡಿಸಿದ ರಾಷ್ಟ್ರಗಳು ಎಂಬುದನ್ನು ಪ್ರಧಾನಿಗಳು ಮರೆತಂತಿದೆ. ಪಂಡಿತ್ ಜವಾಹರಲಾಲ್ ನೆಹರೂರವರ ಪ್ರಕಾರ ''ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಪರಿಣಾಮವಾಗಿದೆ.'' ಎಂಬ ಮಾತನ್ನು ಅವರು ಉಲ್ಲೇಖಿಸಿದ್ದಾರೆ.


## ಶಾಸಕರ ಆಸ್ತಿ ಖರೀದಿ ಶೀಘ್ರದಲ್ಲೇ ಬಿಚ್ಚಿಡುವೆ

• ಉದಯವಾಹಿನಿ, ಸಾಗರ

'ಚುನಾವಣೆ ಪೂರ್ವದಲ್ಲಿ ಕಣ್ಣೀರು ಹಾಕಿದವರು ಈಗ ಎಷ್ಟು ಆಸ್ತಿ ಖರೀದಿ ಮಾಡಿದ್ದಾರೆಂಬುದನ್ನು ಶೀಘ್ರದಲ್ಲೇ ಜನರೆದುರು ಬಿಚ್ಚಿಡುವೆ' ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಹರತಾಳು ಹಾಲಪ್ಪ ಗುಡುಗಿದರು.

ಇಲ್ಲಿನ ಉಪವಿಭಾಗೀಯ ಆಸ್ಪತ್ರೆ ಬಳಿ ಶನಿವಾರ ಬಿಜೆಪಿ ಮತ್ತು ಹರತಾಳು ಹಾಲಪ್ಪ ಅಭಿಮಾನಿಗಳಿಂದ ಆಯೋಜಿಸಿದ್ದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ನನಗಾದರೆ ಬೇರೆ-ಬೇರೆ ಉದ್ಯೋಗಗಳಿವೆ. ನನ್ನದೆ ಆದ ಕಂಪನಿ ಇದೆ. ಆದರೆ, ಹಾಲಿ ಶಾಸಕರಿಗೆ ಯಾವ ಉದ್ಯೋಗವಿದೆ' ಎಂದು ಅವರು ಪ್ರಶ್ನಿಸಿದರು.



''ಹೊಸನಗರ ತಾಲ್ಲೂಕಿನಲ್ಲಿ ಚಕ್ರ ಡ್ಯಾಂನಿಂದ 667 ಹಳ್ಳಿಗಳಿಗೆ ನೀರು ಪೂರೈಕೆ ಮಾಡಲು 200 ಕೋಟಿ ರೂ. ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಲಾಗಿತ್ತು. ಅದು ಸಹ ಕಾಮಗಾರಿ ಪ್ರಾರಂಭ ಮಾಡಿಲ್ಲ. ಈ ಎಲ್ಲಾ ಯೋಜನೆ ನನ್ನ ಅವಧಿಯಲ್ಲಿ ಅನುಷ್ಠಾನಕ್ಕೆ ಬಂದಿವೆ ಎನ್ನುವುದಕ್ಕೆ ಅಗತ್ಯ ದಾಖಲೆ ನನ್ನ ಬಳಿ ಇದೆ'' ಎಂದರು.

''ಟ್ಯಾಗೂರ್ ಕಲ್ಚರಲ್ ಕಾಂಪ್ಲೆಕ್ಸ್‌ಗೆ 4.80 ಕೋಟಿ ರೂ. ಅನುದಾನ ಮಂಜೂರು ಮಾಡಿಸಿದ್ದು ಉಪವಿಭಾಗಾಧಿಕಾರಿಗಳ ಖಾತೆಯಲ್ಲಿದೆ. ಸೊರಬ ರಸ್ತೆ ವಿಸ್ತರಣೆಗೆ ಬಂದ 11 ಕೋಟಿ ರೂ. ಹಣ ಉಪವಿಭಾಗಾಧಿಕಾರಿಗಳ ಖಾತೆಯಲ್ಲಿದೆ. ಇದು ಸಹ ನನ್ನ ಅವಧಿಯಲ್ಲಿ ಮಂಜೂರಾಗಿದೆ ಎನ್ನುವುದಕ್ಕೆ ಅಗತ್ಯ ದಾಖಲೆ ನನ್ನ ಬಳಿ ಇದೆ. ಬಿ.ಎಚ್.ರಸ್ತೆ, ಕೆಳದಿ ರಸ್ತೆ, ಸೊರಬ ರಸ್ತೆ, ಭೀಮನಕೋಣೆ ರಸ್ತೆ, ರಿಪ್ಪನ್‌ಪೇಟೆ ರಸ್ತೆ ವಿಸ್ತರಣೆ ಎಲ್ಲವೂ ನನ್ನ ಪರಿಶ್ರಮದಿಂದ ಜಾರಿಗೆ ಬಂದಿದ್ದು, ಈಗಿನ ಶಾಸಕರಿಗೆ ಅದರ ಪರಿಕಲ್ಪನೆಯೇ ಇಲ್ಲ. ಇದರ ನಡುವೆಯೂ ಶಾಸಕರು ಠೇಂಕರಿಸುತ್ತಾರೆ'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಮುಖಂಡರಾದ ಗಣೇಶ್ ಪ್ರಸಾದ್, ದೇವೇಂದ್ರಪ್ಪ, ಮೈತ್ರಿ ಪಾಟೀಲ್, ಗಾಯತ್ರಿ ಮಲ್ಲೇಶಪ್ಪ, ಅರುಣ ಕುಗ್ವೆ, ಹರೀಶ್ ಮೂಡಳ್ಳಿ, ಬಿ.ಟಿ.ರವೀಂದ್ರ ಮತ್ತಿತರರು ಇದ್ದರು.

### ಸಾಗರ ಕ್ಷೇತ್ರದ ಅಭಿವೃದ್ಧಿ ನಿಂತ ನೀರಾಗಿದೆ


ಸಾಗರ ಕ್ಷೇತ್ರದ ಅಭಿವೃದ್ಧಿ ನಿಂತ ನೀರಾಗಿದೆ. ಶರಾವತಿ ಹಿನ್ನೀರಿನಿಂದ ಸಾಗರ ನಗರಕ್ಕೆ ಕುಡಿಯುವ ನೀರನ್ನು ತರುವಲ್ಲಿ ಬಿಜೆಪಿ ಪ್ರಮುಖ ಪಾತ್ರ ವಹಿಸಿದ್ದನ್ನು ಜನರು ಮರೆತಿಲ್ಲ. ನಾನು ಕಳೆದ ಬಾರಿ ಶಾಸಕನಾಗಿದ್ದಾಗ ಆನಂದಪುರಂ ಹೋಬಳಿಯ 8 ಗ್ರಾಮ ಪಂಚಾಯಿತಿಯ 126 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆ ಗೆ ಯೋಜನೆ ರೂಪಿಸಲಾಗಿತ್ತು. ಇದರ ಜತೆಗೆ ಹಕ್ರೆ-ಗುಬ್ಬಗೋಡಿನಿಂದ 337 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲು 127 ಕೋಟಿ ರೂ. ಯೋಜನೆ ಅನುಷ್ಠಾನಕ್ಕೆ ತರಲಾಗಿತ್ತು. ಕಾಮಗಾರಿ ಪ್ರಾರಂಭಕ್ಕೆ ಹಾಲಿ ಶಾಸಕರು ಚೌಕಾಸಿ ಮಾಡುತ್ತಿದ್ದಾರೆ. ಆದರಿಂದ ಕಾಮಗಾರಿ ವಿಳಂಬವಾಗುತ್ತಿದೆ ಎಂದು ದೂರಿದರು.

## ಒಳ ಮೀಸಲಾತಿ ವಿಚಾರವಾಗಿ ಇನ್ನೂ ಆಗದ ತೀರ್ಮಾನ
## ಸರ್ಕಾರದ ನಡೆಯಿಂದ ಜಾತಿ ಸಂಘರ್ಷಕ್ಕೆ ಕುಮ್ಮಕ್ಕು

• ಉದಯವಾಹಿನಿ, ಬೆಂಗಳೂರು

ಒಳ ಮೀಸಲಾತಿ ಸಂಬಂಧಿತ ಕಾಯ್ದೆಗೆ ಕೋರ್ಟ್ ಒಪ್ಪಿಗೆ ಇಲ್ಲದ ಕಾರಣ ರಾಜ್ಯಪಾಲರಿಂದ ಅಂಕಿತ ಪಡೆಯಬಾರದಿತ್ತು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ''ಜಗನ್ನಾಥ ಭವನ''ದಲ್ಲಿ ಶನಿವಾರ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. ಒಳ ಮೀಸಲಾತಿ ಶೇ 15ರಿಂದ 17ಕ್ಕೆ ಏರಿಸಲಾಗಿತ್ತು. ನ್ಯಾ.ನಾಗಮೋಹನ್‌ದಾಸ್ ಅವರ ವರದಿಯನ್ನೂ ಪಡೆದರು. ಅದರ ಪ್ರಕಾರವೇ 6, 6, 5 ಎಂದು ಹಂಚಿಕೆ ಮಾಡಿದ್ದರು. ಕಾಯ್ದೆ ಅನುಮೋದಿಸಿ ರಾಜ್ಯಪಾಲರಿಂದ ಅಂಕಿತವನ್ನೂ ಪಡೆದಿದ್ದರು ಎಂದು ಗಮನಕ್ಕೆ ತಂದರು. ನೀವ್ಯಾಕೆ ರಾಜ್ಯಪಾಲರ ಅಂಕಿತ ತೆಗೆದುಕೊಂಡಿರಿ ನಿಮಗೆ ಪ್ರಜ್ಞೆ, ಬುದ್ಧಿ ಇಲ್ಲವೇ ಎಂದು ಕೇಳಿದರು. ಅಂಕಿತ ಪಡೆದ ಮೇಲೆ ಅದನ್ನೇ ಜಾರಿಗೊಳಿಸಬೇಕಿತ್ತು ಎಂದು ಆಗ್ರಹಿಸಿದರು. ಶೇ 15 ರ ಮೇಲೆ ಹಂಚಿಕೆ ಮಾಡುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದೀರಿ. ಹಾಗಾಗಿ ಈ ಕಾಯ್ದೆ ಅನೂರ್ಜಿತ. ಅದು ತಿಪ್ಪೆಗುಂಡಿಗೆ ಹೋದಂತೆ ಎಂದು ನುಡಿದರು.

ನೀವು ಯಾವ ರೀತಿ 56 ಸಾವಿರ ಹುದ್ದೆಗಳನ್ನು ತುಂಬುತ್ತೀರಿ ಎಸ್‌ಸಿ, ಎಸ್‌ಟಿಗಳ ಪಾಲು ಏನು ಎಂದು ಕೇಳಿದರು. 24ರಂದು ಅಂಕಿತ ಹಾಕಿದ್ದಾರೆ. ಧಾರವಾಡ ವಿವಿ, ಬಿಡಿಎ, ಸಾರಿಗೆ ಇಲಾಖೆಯಲ್ಲಿ ಎ, ಬಿ, ಸಿ ಪ್ರವರ್ಗಗಳನ್ನು ಯಾಕೆ ಪ್ರಕಟಿಸಿದ್ದೀರಿ ಎಂದು ಕೇಳಿದರು. ಗೊಂದಲ ಯಾಕೆ ಸೃಷ್ಟಿಸಿದ್ದೀರಿ. ಎಲ್ಲಾ ಹುದ್ದೆಗಳೂ ಪ್ರವರ್ಗ ಎ ಎಂದು ಬಂದಿವೆ ಎಂದರು. ಈಗ ಜಾತಿ ಸಂಘರ್ಷಕ್ಕೆ ಸಿದ್ದರಾಮಯ್ಯನವರು ಕುಮ್ಮಕ್ಕು ಕೊಡುತ್ತಿದ್ದಾರೆ ಎಂದು ಟೀಕಿಸಿದರು. ಕಾಂಗ್ರೆಸ್ಸಿನವರು ಒಂದು ಕಡೆ ಜಾತಿಗಳನ್ನು ಒಡೆದು ತಮ್ಮ ಮತದ ಬಲ ಹೆಚ್ಚಿಸಿಕೊಂಡಿದ್ದರು. ಇನ್ನೊಂದು ಕಡೆ ಜಾತಿಗಳ ಸಂಘರ್ಷಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಸರಕಾರ ಮಾಡಿದ ತಪ್ಪಿಗೆ ಜನಾಂಗಗಳು ಯಾಕೆ ತಮ್ಮ ತಮ್ಮಲ್ಲಿ ಹೋರಾಟ ಮಾಡಬೇಕು ಎಂದು ಕೇಳಿದರು. ಬಿಜೆಪಿ ಮುಖಂಡ ರುದ್ರಯ್ಯ ಅವರು ಭಾಗವಹಿಸಿದ್ದರು.



### ಸಂಪುಟದಲ್ಲಿ ಚರ್ಚೆ

ಒಳ ಮೀಸಲಾತಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಆಗಬಹುದು ಎಂಬ ನಿರೀಕ್ಷೆ ಇತ್ತು. ಸಂಪುಟದಲ್ಲಿ ಚರ್ಚೆಯೂ ನಡೆದಿತ್ತು. ಆದರೆ ಒಮ್ಮತದ ತೀರ್ಮಾನಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಹಾಗಾಗಿ ಮುಂದಿನ ಸಚಿವ ಸಂಪುಟದಲ್ಲಿ ಈ ಬಗ್ಗೆ ಚರ್ಚೆ ನಡೆದು ಸರ್ಕಾರ ಸ್ಪಷ್ಟ ನಿಲುವನ್ನು ಕೈಗೊಳ್ಳುವ ಸಾಧ್ಯತೆ ಇದೆ.

## ಬಜೆಟ್ ಬೆನ್ನಲ್ಲೇ ದೆಹಲಿಗೆ ದೌಡಾಯಿಸಲಿರೋ ಡಿಕೆ ಶಿವಕುಮಾರ್

■ ಖಾಸಗಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪ್ರವಾಸ ಎಂದು ಉಲ್ಲೇಖ ■ ಡಿಸಿಎಂ ನಡೆ ಕುತೂಹಲ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ಶುಕ್ರವಾರ ತಮ್ಮ 17 ನೇ ಬಜೆಟ್ ಮಂಡನೆ ಮಾಡಿದ್ದಾರೆ. ರಾಜ್ಯ ಬಜೆಟ್ ಬಗ್ಗೆ ಪರ ಹಾಗೂ ವಿರೋಧ ಚರ್ಚೆಗಳು ನಡೆಯುತ್ತಿವೆ. ಈ ಬೆಳವಣಿಗೆಯ ನಡುವೆಯೇ ಡಿಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ತೆರಳಲಿದ್ದಾರೆ. ಬಜೆಟ್ ಬಳಿಕ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಶುರುವಾಗಲಿದೆ ಎಂಬ ಮಾತುಗಳ ನಡುವೆ ಡಿಕೆ ಶಿವಕುಮಾರ್ ಅವರ ದೆಹಲಿ ಪ್ರವಾಸ ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಬಜೆಟ್ ಮೇಲಿನ ಚರ್ಚೆಗಳು ಶುರುವಾಗಲಿದೆ. ಬಜೆಟ್ ಚರ್ಚೆಯ ಸಂದರ್ಭದಲ್ಲೇ ಡಿಕೆ ಶಿವಕುಮಾರ್ ಅವರು ದೆಹಲಿಗೆ ತೆರಳುತ್ತಿದ್ದಾರೆ. ದೆಹಲಿ ಪ್ರವಾಸದ ಉದ್ದೇಶದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡದೆ ಇದ್ದರು, ಸದ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ ಈ ಪ್ರವಾಸ ಕುತೂಹಲಕ್ಕೆ ಕಾರಣವಾಗಿದೆ.

ಭಾನುವಾರ ಅವರು ಕಲಬುರಗಿಗೆ ತೆರಳುತ್ತಿದ್ದಾರೆ. ಕಲಬುರಗಿಯಿಂದ ವಿಶೇಷ ವಿಮಾನದ ಮೂಲಕ ಅವರು ದೆಹಲಿಗೆ ತೆರಳಲಿದ್ದಾರೆ.

ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವ ಉದ್ದೇಶದಿಂದ ಅವರು ದೆಹಲಿಗೆ ತೆರಳುವುದಾಗಿ ಅಧಿಕೃತ ಪ್ರವಾಸ ಪಟ್ಟಿಯಲ್ಲಿ ಉಲ್ಲೇಖ ಮಾಡಲಾಗಿದೆ. ಭಾನುವಾರ ಅವರು ದೆಹಲಿಯಲ್ಲೇ ಉಳಿದುಕೊಳ್ಳಲಿದ್ದಾರೆ.

ಸೋಮವಾರ ಬೆಳಗ್ಗೆ ಅವರು ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ. ಬಳಿಕ ಬಜೆಟ್ ಅಧಿವೇಶನದಲ್ಲಿ ಅವರು ಭಾಗಿಯಾಗಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಡಿಕೆ ಶಿವಕುಮಾರ್ ನಿರಂತರವಾಗಿ ದೆಹಲಿ ಪ್ರವಾಸ ನಡೆಸುತ್ತಿದ್ದಾರೆ. ಅಸ್ಸಾಂ ಚುನಾವಣೆಯ ಜವಾಬ್ದಾರಿ ಕೂಡಾ ಅವರಿಗೆ ನೀಡಲಾಗಿದೆ. ಈ ನಿಟ್ಟಿನಲ್ಲಿ ಅವರು ದೆಹಲಿಯಲ್ಲಿ ಸಂಸದೆ ಪ್ರಿಯಾಂಕಾ ಗಾಂಧಿ ಅವರ ಜೊತೆಗೆ ಸಭೆಯಲ್ಲಿ ಭಾಗಿಯಾಗುವ ಉದ್ದೇಶದಿಂದ ತೆರಳಿದ್ದರು. ಕಳೆದ ಬಾರಿ ದೆಹಲಿ ಪ್ರವಾಸದ ಸಂದರ್ಭದಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

**ಬಜೆಟ್ ಅಧಿವೇಶನದ ಬಳಿಕ ಚರ್ಚೆ ಜೋರು:** ಇನ್ನು ಬಜೆಟ್ ಅಧಿವೇಶದ ಬಳಿಕ ನಾಯಕತ್ವ ಬದಲಾವಣೆ ಚರ್ಚೆ ತೀವ್ರಗೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಎರಡೂ ಬಣದ ಶಾಸಕರು, ಸಚಿವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಮುಂದಿನ ದಿನಗಳಲ್ಲಿ ಇನ್ನಷ್ಟು ವೇಗ ಸಿಗಲಿದೆ. ಹೀಗಾಗಿ ಡಿಕೆ ಶಿವಕುಮಾರ್ ಅವರ ನಡೆಯೂ ಸಾಕಷ್ಟು ಕುತೂಹಲ ಕೆರಳಿಸಿದೆ.



### ಡಿಕೆಶಿಯನ್ನು ಭೇಟಿಯಾದ ಎಚ್ ಎನ್ ನಾಗಮೋಹನದಾಸ್

ಪರಿಶಿಷ್ಟ ಸಮುದಾಯದ ಒಳಮೀಸಲಾತಿ ಆಯೋಗದ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಎಚ್ ಎನ್ ನಾಗಮೋಹನದಾಸ್ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಕುಮಾರಪಾರ್ಕ್‌ನ ಸರಕಾರಿ ಗೃಹ ಕಚೇರಿಯಲ್ಲಿ ಶನಿವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ನಾಗಮೋಹನದಾಸ್ ಅವರು ತಾವು ರಚಿಸಿರುವ 'ಸಂವಿಧಾನ ಮತ್ತು ವಚನಗಳು' ಕೃತಿಯನ್ನು ಡಿಸಿಎಂ ಅವರಿಗೂ, ಡಿಸಿಎಂ ಶಿವಕುಮಾರ್ ಅವರು ತಾವು ಬರೆದಿರುವ 'ನೀರಿನ ಹೆಜ್ಜೆ' ಕೃತಿಯನ್ನು ನಾಗಮೋಹನದಾಸ್ ಅವರಿಗೂ ನೀಡಿದರು.

**ಈ ದಿನದ ದರ** ಪೆಟ್ರೋಲ್: 102.99 ₹/L ಡೀಸೆಲ್ : 91.52 ₹/L ಬಂಗಾರ: ₹16,364/Gram24ct ₹15,000/Gram22ct ಬೆಳ್ಳಿ: ₹285.00/Gram

# ಕರ್ನಾಟಕದಲ್ಲಿ ಸೈಬರ್ ಅಪರಾಧ ಮಟ್ಟಹಾಕಲು ಕೈಗೊಂಡ ಕ್ರಮಗಳೇನು?

• ಉದಯವಾಹಿನಿ, ಬೆಂಗಳೂರು

ಕರ್ನಾಟಕವು ವಿಶ್ವದಲ್ಲೇ ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ಹೊಂದಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಹೇಳಿದರು. ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'CIDECODE' 3ನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗಸಭೆಯನ್ನು ಉದ್ಘಾಟಿಸಿ, ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಕರ್ನಾಟಕ ಕೇವಲ ಒಂದು ರಾಜ್ಯವಲ್ಲ. ಅದು ಜಾಗತಿಕ ಬ್ರ್ಯಾಂಡ್. ಜಗತ್ತು ಬೆಂಗಳೂರಿನತ್ತ ನೋಡಿದಾಗ, ನಾವೀನ್ಯತೆಯ ಭವಿಷ್ಯ ಕಾಣಿಸುತ್ತದೆ. ಉತ್ತಮ ಮತ್ತು ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ನಾವು ಹೊಂದಿದ್ದೇವೆ ಎಂದರು. ಸೈಬರ್ ದಾಳಿಗಳನ್ನು ತನಿಖೆ ಮಾಡಲು ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲು ಅಗತ್ಯವಾದ ಕೌಶಲ್ಯ, ತರಬೇತಿ, ತಂತ್ರಜ್ಞಾನದೊಂದಿಗೆ ವಿಶೇಷ ಸೈಬರ್ ಅಪರಾಧ ಘಟಕಗಳನ್ನು ಸ್ಥಾಪಿಸುವ ಮೂಲಕ ಕರ್ನಾಟಕ ಸರ್ಕಾರವು ಸೈಬರ್ ಅಪರಾಧಗಳನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳು ಮತ್ತು ಪ್ರಮುಖ ನಗರಗಳಲ್ಲಿ ಒಟ್ಟು 43 ಸಿಇಎನ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿದೆ. ನಮ್ಮ ನಾಗರಿಕರಿಗೆ ಸೈಬರ್ ಸುರಕ್ಷತೆ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.



**ಅಪಾಯ ನಿರ್ವಹಣೆಗೆ ಏನು ಕ್ರಮ?:** ನಮ್ಮ ಸರ್ಕಾರವು ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಕ್ಲೌಡ್ ಕಂಪ್ಯೂಟಿಂಗ್, ಸೈಬರ್ ಭದ್ರತಾ ಅನುಸರಣೆ ಮತ್ತು ಅಪಾಯ ನಿರ್ವಹಣೆಯಂತಹ ವಿವಿಧ ವಲಯಗಳಲ್ಲಿ ಪರಿಣಿತಿ ಹೊಂದಿರುವ ವೈವಿಧ್ಯಮಯ ಕಂಪನಿಗಳೊಂದಿಗೆ, ಸೈಬರ್ ಭದ್ರತಾ ನವೋದ್ಯಮಗಳ ಪರಿಸರ ವ್ಯವಸ್ಥೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದೆ ಎಂದರು.

> **ಸೈಬರ್ ಅಪರಾಧವು ಯಾವುದೇ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾಗಿಲ್ಲ. ಇದು ಮಿತಿಯಿಲ್ಲದ, ತಂತ್ರಜ್ಞಾನ ಆಧಾರಿತ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಅಪರಾಧ. ಹಣಕಾಸಿನ ವಂಚನೆಗಳು ಮತ್ತು ಕ್ರಿಪ್ಟೋಕರೆನ್ಸಿ, ಡಾರ್ಕ್‌ವೆಬ್ ಆಧಾರಿತ ಮಾದಕವಸ್ತು ಜಾಲಗಳು ಮತ್ತು ಡೇಟಾ ಉಲ್ಲಂಘನೆಯವರೆಗೆ, ಬೆದರಿಕೆಗಳ ಪ್ರಮಾಣ ವೇಗವಾಗಿ ಹೆಚ್ಚುತ್ತಿದೆ. ಈ ಸವಾಲುಗಳನ್ನು ತಾಂತ್ರಿಕ ಸಾಮರ್ಥ್ಯದಿಂದ ಮಾತ್ರವಲ್ಲದೆ ಕಾನೂನುಗಳನ್ನು ಬಲಪಡಿಸುವ ಮೂಲಕ ಸಂಘಟನಾತ್ಮಕವಾಗಿ ಎದುರಿಸಬೇಕಿದೆ.**
>
> **-ಡಾ. ಜಿ ಪರಮೇಶ್ವರ್, ಗೃಹ ಸಚಿವ**



ನಾಗರಿಕರಿಗೆ ಹೆಚ್ಚಿನ ಡಿಜಿಟಲ್ ಸುರಕ್ಷತೆಯನ್ನು ನೀಡಲು ಖಾಸಗಿ ವಲಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ನಿರಂತರವಾಗಿ ಕೈಜೋಡಿಸಿ ಉಪಕ್ರಮಗಳನ್ನು ಕೈಗೊಳ್ಳುವುದು ಸಹಕಾರಿ ಮತ್ತು ಉತ್ತಮ ಪ್ರಯತ್ನವಾಗಿದೆ. ವೇಗವಾಗಿ ಬದಲಾಗುತ್ತಿರುವ ಸೈಬರ್ ಬೆದರಿಕೆಯ ವ್ಯಾಪ್ತಿಯನ್ನು ಪರಿಹರಿಸಲು ಅನುಭವ, ಪರಿಣಿತಿಯ ಇಂತಹ ಸಂವಾದಗಳು ಸಹಕಾರಿಯಾಗಲಿದೆ. ಡಾರ್ಕ್‌ವೆಬ್ ಚಟುವಟಿಕೆಗಳು, ಕ್ರಿಪ್ಟೋಕರೆನ್ಸಿ ಟ್ರ್ಯಾಕಿಂಗ್, ಹಣಕಾಸು ವಂಚನೆ ತಡೆಗಟ್ಟುವಿಕೆ, ಡಿಜಿಟಲ್ ಫೋರೆನ್ಸಿಕ್ ಪ್ರಯೋಗಾಲಯಗಳನ್ನು ಬಲಪಡಿಸಲು ಹೆಚ್ಚು ಪ್ರಸ್ತುತ ಮತ್ತು ಸಮಯೋಚಿತವಾಗಿವೆ ಎಂದು ಅಭಿಪ್ರಾಯಪಟ್ಟರು.

**ಸೈಬರ್ ಅಪರಾಧ ತನಿಖೆ ಬಲ ಪಡಿಸಲು ಕ್ರಮ:** ರಾಜ್ಯದಲ್ಲಿ ಸಿಸಿಐಟಿಆರ್ ಸ್ಥಾಪನೆಯಿಂದ ಸೈಬರ್ ಅಪರಾಧ ತನಿಖೆಯನ್ನು ಬಲಪಡಿಸುವುದು, ಸಂಶೋಧನಾ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಮತ್ತು ನಮ್ಮ ಪೊಲೀಸ್ ಅಧಿಕಾರಿಗಳನ್ನು ಸುಧಾರಿತ ತಾಂತ್ರಿಕ ಕೌಶಲ್ಯಗಳಿಂದ ಸಜ್ಜುಗೊಳಿಸಲು ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗಿದೆ. ಈ ಕೇಂದ್ರದಿಂದ ಹೊರಹೊಮ್ಮುತ್ತಿರುವ ಸಂಶೋಧನಾ ಪ್ರಕಟಣೆಗಳು, ಸಾಮರ್ಥ್ಯವರ್ಧನಾ ಉಪಕ್ರಮಗಳು ಸೈಬರ್ ಪೊಲೀಸ್ ವ್ಯವಸ್ಥೆಗೆ ಅರ್ಥಪೂರ್ಣ ಕೊಡುಗೆಯನ್ನು ನೀಡುತ್ತಿದೆ ಎಂದು ಹೇಳಿದರು. ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರವು ರಾಜ್ಯದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೂ ವಿವಿಧ ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳ ಸದಸ್ಯರು ಸೇರಿದಂತೆ 62 ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದೆ ಎಂದರು.

## ಅಕ್ರಮವಾಗಿ ನೆಲೆಸಿರುವ 200ಕ್ಕೂ ಹೆಚ್ಚು ವಿದೇಶೀಯರ ಪತ್ತೆ

• ಉದಯವಾಹಿನಿ, ಬೆಂಗಳೂರು

ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ವಿರುದ್ಧ ನಗರ ಪೊಲೀಸರು ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದು, ಎಂಟ್ಹತ್ತು ದಿನಗಳಲ್ಲಿ 200ಕ್ಕೂ ಹೆಚ್ಚು ವಿದೇಶಿಗರನ್ನು ಪತ್ತೆಹಚ್ಚಿದ್ದಾರೆ. ಇವರುಗಳಲ್ಲಿ ಬಾಂಗ್ಲಾದೇಶ, ಆಫ್ರಿಕಾ ಮೂಲದವರೇ ಹೆಚ್ಚು ಇದ್ದಾರೆ ಎಂದು ಪೊಲೀಸರು ಈ ಸಂಜೆಗೆ ತಿಳಿಸಿದ್ದಾರೆ. ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರ ಆದೇಶದಂತೆ ಸಿಸಿಬಿ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಈ ಕಾರ್ಯಾಚರಣೆ ನಡೆಸುತ್ತಿವೆ. ಕಳೆದ ಎರಡು ವಾರದಿಂದ ನಿರಂತರವಾಗಿ ನಡೆಯುತ್ತಿರುವ ಈ ಕಾರ್ಯಾಚರಣೆಯಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ ಪೊಲೀಸರು ತಪಾಸಣೆ ನಡೆಸಿ ನಗರದಲ್ಲಿ ಅಕ್ರಮವಾಗಿ ವಾಸಿಸಿರುವ ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಿದ್ದಾರೆ. ಪತ್ತೆಯಾದ ಅಕ್ರಮ ವಲಸಿಗರನ್ನು ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿ ಅಧಿಕಾರಿಗಳ ವಶಕ್ಕೆ ಒಪ್ಪಿಸಲಾಗಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕಾರ್ಯ ಈಗಾಗಲೇ ಆರಂಭವಾಗಿದೆ. ಇತ್ತೀಚೆಗೆ ಪೂರ್ವ ವಿಭಾಗ ಒಂದರಲ್ಲೇ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಒಂದೇ ದಿನ 2 ಸಾವಿರ ಹೆಚ್ಚು ವಿದೇಶಿಗರ ದಾಖಲೆಗಳನ್ನು ಪರಿಶೀಲನೆ ಮಾಡಿದರು. ಅದರಲ್ಲಿ ಕೆಲವರ ವೀಸಾ ಅವಧಿ ಮುಗಿದಿತ್ತು.

**ಎಚ್ಚರಿಕೆ:** ವಿದೇಶಿಗರಿಗೆ ಬಾಡಿಗೆಗೆ ಮನೆ ನೀಡುವ ಮಾಲೀಕರು ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನೀಡಬೇಕೆಂದು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ತಿಳಿಸಿದ್ದಾರೆ. ವಿದೇಶಿಗರು ವಾಸಿಸುವ ಬಗ್ಗೆ ಮಾಹಿತಿ ನೀಡದ ಮನೆಯ ಮಾಲೀಕರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

## ಬಜೆಟ್‌ನಲ್ಲಿ ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣ ನೀಡಿಲ್ಲ

• ಉದಯವಾಹಿನಿ, ಬೆಂಗಳೂರು

ಸೇತುವೆಗಳ ನಿರ್ಮಾಣ, ಇತರ ಕಾಮಗಾರಿಗಳನ್ನು ಒಳಗೊಂಡು ಲೋಕೋಪಯೋಗಿ ಇಲಾಖೆಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ನೀಡಿರುವುದರಿಂದ ಈ ಬಾರಿ ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗಲಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಕೇಳಿದ ಎಲ್ಲವನ್ನೂ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಸೇತುವೆಗಳ ನಿರ್ಮಾಣಕ್ಕೆ 20 ವರ್ಷಗಳಿಂದಲೂ ಆದ್ಯತೆ ನೀಡಿರಲಿಲ್ಲ. ಈ ಬಾರಿ 2 ಸಾವಿರ ಕೋಟಿ ರೂ ಗಳಿಗೂ ಹೆಚ್ಚು ಹಣ ಸಿಕ್ಕಿದೆ. ಇದರಿಂದ ನಮಗೆ ನಿಭಾಯಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಕೆ-ಶಿಪ್ ಯೋಜನೆಯ ವ್ಯಾಪ್ತಿಗೆ 60 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಹೆಚ್ಚು ಹಣ ದೊರೆತ್ತಿರುವುದರಿಂದ ಅನುಕೂಲವಾಗಲಿದೆ. ಬಾಕಿ ಬಿಲ್ಲುಗಳ ಬಿಡುಗಡೆಗೆ ಪ್ರತಿಭಟನೆ ನಡೆಸುವುದಾಗಿ ಗುತ್ತಿಗೆದಾರರು ಬೆದರಿಕೆ ಹಾಕಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ಹಣಕಾಸು ಇಲಾಖೆಯನ್ನು ಸಿಎಂಅವರು ನೋಡಿಕೊಳ್ಳುತ್ತಿದ್ದಾರೆ ಗುತ್ತಿಗೆದಾರರ ಜೊತೆ ಚರ್ಚೆ ಮಾಡಿ, ಸಮಸ್ಯೆಯನ್ನು ಬಗೆ ಹರಿಸುತ್ತಾರೆ ಎಂದು ಸತೀಶ್ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು. ಸಾಲ ಮಾಡದೆ ಯಾವ ಸರ್ಕಾರವೂ ಆಡಳಿತ ನಡೆಸಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಕೂಡ ಇದೇ ಪರಿಸ್ಥಿತಿಯಲ್ಲಿದೆ. ರಾಜ್ಯದ ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕಾಮಗಾರಿಯನ್ನು ನಿಲ್ಲಿಸಿಲ್ಲ ಎಂದು ತಿಳಿಸಿದರು. ಯುವ ನಿಧಿಗೆ ಬಜೆಟ್‌ನಲ್ಲಿ ಅನುದಾನ ನೀಡಿಲ್ಲ ಎಂದ ಮಾತ್ರಕ್ಕೆ ಅದನ್ನು ಸ್ಥಗಿತಗೊಳಿಸಿಲ್ಲ. 2-3 ತಿಂಗಳಾದರೂ ಕೂಡ ಹಣವನ್ನು ತಲುಪಿಸಲಾಗುತ್ತಿದೆ. ಮುಂದೆಯೂ ಯುವ ನಿಧಿ ನಿಲ್ಲಿಸುವುದಿಲ್ಲ ಎಂದರು.

## ಧಮ್ ಹೊಡೆಯುವವರಿಗೆ ಶಾಕ್ 295 ಮಂದಿಗೆ ದಂಡ

• ಉದಯವಾಹಿನಿ, ಬೆಂಗಳೂರು

ನಿಷೇಧಿಸಲಾದ ಸ್ಥಳಗಳಲ್ಲಿ ಸಾರ್ವಜನಿಕವಾಗಿ ಧೂಮಪಾನ ಮಾಡುತ್ತಿದ್ದ 295 ಮಂದಿಗೆ ದಂಡ ವಿಧಿಸಲಾಗಿದೆ.ಉತ್ತರ ವಿಭಾಗದ ಪೊಲೀಸರು ನಿನ್ನೆ ಸಂಜೆಯಿಂದ ತಡರಾತ್ರಿಯವರೆಗೆ ಕಾರ್ಯಾಚರಣೆ ನಡೆಸಿ ಕೋಟ್ಪಾಕಾಯ್ದೆಯಡಿ 40 ಪ್ರಕರಣಗಳನ್ನು ದಾಖಲಿಸಿದ್ದಾರೆ. ವಿಭಾಗದ 13 ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಸಾರ್ವಜನಿಕವಾಗಿ ಧೂಮಪಾನ ಮಾಡುವವರ ವಿರುದ್ಧ, ಅಂಗಡಿಗಳ ಪ್ರವೇಶ ದ್ವಾರದಲ್ಲಿ ಸಿಗರೇಟುಗಳ ಅಥವಾ ಬೀಡಿಗಳ ಜಾಹಿರಾತನ್ನು ಕಾನೂನು ಬಾಹಿರವಾಗಿ ಪ್ರಕಟಣೆ ಮಾಡಿರುವ ಅಂಗಡಿಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಪೊಲೀಸರು ಪರಿಶೀಲನೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಸೇವನೆ ಮಾಡುವವರಿಗೆ ದಂಡ ವಿಧಿಸಲಾಗಿದೆ. ಉತ್ತರವಿಭಾಗದ ಡಿಸಿಪಿ ಬಿ.ಎಸ್ ನೇಮೆಗೌಡ ಅವರ ನೇತೃತ್ವದಲ್ಲಿ ಮೂರು ಉಪ ವಿಭಾಗದ ಎಸಿಪಿಗಳು, 13 ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು, ಅವರ ಸಿಬ್ಬಂದಿಗಳು ಈ ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದರು.

## ಬೆದರಿಕೆಯೊಡ್ಡಿದ ಆರೋಪ: ರಜತ್ ವಿರುದ್ಧ ಪ್ರಕರಣ

• ಉದಯವಾಹಿನಿ, ಬೆಂಗಳೂರು

ಬೆದರಿಕೆ ಹಾಗೂ ನಿಂದನೆ ಆರೋಪದಡಿ 'ಬಿಗ್‌ಬಾಸ್' ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ರಜತ್ ಕಿಶನ್ ಅವರ ವಿರುದ್ಧ ಕೆ.ಆರ್ ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗಿರೀಶ್ ಕುಮಾರ್ ಎಂಬವರು ನೀಡಿದ ದೂರಿನ ಮೇರೆಗೆ ಕಿರಣ್, ರಜತ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 'ಡಾಗ್' ಸತೀಶ್ ಅವರ ಸ್ನೇಹವನ್ನು ಬಿಡಬೇಕು ಎಂದು ಕರೆ ಮಾಡಿ ಬೆದರಿಕೆ ಹಾಕಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಹೇಳಿದರು. ರಜತ್, ಕಿರಣ್ ಅವರಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು ಎಂದು ಪೊಲೀಸರು ಹೇಳಿದರು.

# ಬಜೆಟ್ ಟೀಕಿಸಲು ಬಿಜೆಪಿಗೆ ನೈತಿಕತೆ ಇಲ್ಲ

### ಸಾಲ ಮಾಡಿದರೂ ವಿತ್ತೀಯ ಶಿಸ್ತು ಪಾಲನೆಯಾಗಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಮಂಡಿಸಿದ ಬಜೆಟ ಬಗ್ಗೆ ಟೀಕೆ ಮಾಡಲು ಬಿಜೆಪಿ ನಾಯಕರಿಗೆ ಯಾವುದೇ ನೈತಿಕತೆ ಇಲ್ಲ, ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಿರುವಷ್ಟು ಸಾಲ ಮಾಡಲಾಗಿದೆ, ಹಾಗಂತ ವಿತ್ತೀಯ ಶಿಸ್ತು ಮೀರಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರು ಸಮರ್ಥಿಸಿಕೊಂಡರು. ಬಜೆಟ್ ಕುರಿತಾಗಿ ಗೃಹ ಕಚೇರಿ ಕೃಷ್ಣಾದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿದ ಅವರು, ವಿತ್ತೀಯ ಶಿಸ್ತು ಕಾಪಾಡಲಾಗಿದೆ. ಯಾವಾಗ ಹಣಕಾಸು ಸಚಿವನಾಗಿದ್ದೆ ಅಂದಿನಿಂದಲೂ ವಿತ್ತೀಯ ಶಿಸ್ತು ಕಾಪಾಡಿಕೊಂಡು ಬಂದಿದ್ದೇನೆ. ಕೊರತೆ ಬಜೆಟ್ ಮಂಡಿಸಿದ್ದು ನಿಜ. ಆದರೆ ಕೇಂದ್ರದಿಂದ ಬರಬೇಕಾದ ತೆರಿಗೆ ಪಾಲು ಕಡಿಮೆ ಆಗಿದ್ದೇ ಇದಕ್ಕೆ ಕಾರಣ. ಸಾಲಕ್ಕೆ ಗ್ಯಾರಂಟಿ ಕಾರಣ ಅಲ್ಲ, ಹೊಸ ಯೋಜನೆಗಳನ್ನು ಮಾಡಿದ್ದೇವೆ ಅದಕ್ಕಾಗಿ ಸಾಲ ಪಡೆದುಕೊಳ್ಳಲಾಗಿದೆ ಎಂದರು. ಇವತ್ತು ರಾಜ್ಯದ 2026-27 ಸಾಲಿನ ಮುಂಗಡ ಪತ್ರ ಮಂಡಿಸಿದ್ದೇನೆ. ಈ ಮುಂಗಡ ಪತ್ರ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದೆ. ನಾನು ಮಂಡಿಸಿರುವ ಬಜೆಟ್ ಗಾತ್ರ 4.48,004 ಲಕ್ಷ ಕೋಟಿ. ಕಳೆದ ಬಾರಿ 4,9,549 ಲಕ್ಷ ಕೋಟಿ ಬಜೆಟ್ ಮಂಡಿಸಿದ್ದೆ. ಕಳೆದ ಬಾರಿಗಿಂತ 31455 ಕೋಟಿ ರೂಗಿಂತ ಹೆಚ್ಚಿನ ಬಜೆಟ್ ಇದಾಗಿದೆ ಎಂದು ವಿವರಿಸಿದರು. 9.04% ಹೆಚ್ಚು ಪ್ರಗತಿಯ ಬಜೆಟ್ ಇದು.

ಜಿಎಸ್‌ಟಿ ಯನ್ನ ಕೇಂದ್ರ ಸರ್ಕಾರ ಪರಿಷ್ಕರಣೆ ಮಾಡಿದ್ರು. 2017ರಲ್ಲಿ ಜಿಎಸ್‌ಟಿ ತಂದ್ರು, ಎಂಟು ವರ್ಷಗಳ ಕಡಿಮೆ ಮಾಡಿದ್ರು. ಅದರಿಂದ ರಾಜ್ಯದ ಮೇಲೆ ತೆರಿಗೆಯ ಪ್ರಗತಿ ಕುಂಠಿತಗೊಂಡಿತು. 10% ನಿಂದ 4%ಗೆ ತೆರಿಗೆ ಪ್ರಗತಿ ಇಳಿಕೆ ಆಯ್ತು. 10-12% ನಿಂದ 4%ಗೆ ಇಳಿಕೆ ಆಯ್ತು.ಕೆಲ ರಾಜ್ಯಗಳು ಇನ್ನೂ ಚೇತರಿಸಿಕೊಂಡಿಲ್ಲ. ಅನೇಕ ರಾಜ್ಯಗಳು ಮೈನಸ್ ಗ್ರೋತ್‌ನಲ್ಲಿವೆ. ಇಷ್ಟೆಲ್ಲಾ ಜಿಎಸ್‌ಟಿ ಹೊಡೆತ ಬಿದ್ದರೂ ಜಿಎಸ್‌ಟಿ ಸಂಗ್ರಹದಲ್ಲಿ ನಂ.2 ನಲ್ಲಿದ್ದೇವೆ ಎಂದು ವಿವರಿಸಿದರು. ನಮಗೆ ಸುಮಾರು ಹತ್ತು ಸಾವಿರ ಕೋಟಿ ಕಡಿಮೆಯಾಗಿದೆ. ಮುಂದಿನ ವರ್ಷವೂ ಇದು ಮುಂದುವರೆಯುತ್ತೆ. 15 ಸಾವಿರ ಕೋಟಿಯಷ್ಟು ಕಡಿಮೆ ಆಗುತ್ತೆ ಕೇಂದ್ರ ಸರ್ಕಾರದ ಅಸಹಕಾರ, ಮಲತಾಯಿ ಧೋರಣೆ ನಡುವೆ ಹೆಚ್ಚು ವಿತ್ತೀಯ ಶಿಸ್ತನ್ನು ಹೆಚ್ಚು ಉಲ್ಲಂಘಿಸಿಲ್ಲ. ನಮ್ಮದು ಜಿಡಿಪಿ ಬೆಳವಣಿಗೆ 8.1% , ರಾಷ್ಟ್ರದ್ದು 7.4% ರಷ್ಟು ಇದೆ. ಅವರಿಗಿಂತ ನಾವು ಉತ್ತಮವಾಗಿದ್ದೇವೆ ಎಂದರು.



**ಸಾಲಕ್ಕೆ ಗ್ಯಾರಂಟಿ ಕಾರಣ ಅಲ್ಲ**

**ಸಾಮಾಜಿಕ ಜಾಲತಾಣ ನಿಷೇಧಕ್ಕೆ ನಿಯಮಾವಳಿ:** 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿಷೇಧ ಹೇರಲಾಗಿದೆ. ಶಾಲೆ, ಮನೆಗಳಿಗೆ ಇದು ಅನ್ವಯ ಆಗುತ್ತದೆ. ಮೊಬೈಲ್ ಇಟ್ಟುಕೊಳ್ಳಬಹುದು. ಅದರೆ, ಸಾಮಾಜಿಕ ಜಾಲತಾಣಗಳ ಬಳಕೆಗೆ ಅವಕಾಶ ಇಲ್ಲ. ಇದಕ್ಕೆ ನಿಯಮಾವಳಿ ರೂಪಿಸಲಾಗುವುದು ಎಂದು ತಿಳಿಸಿದರು.

12.16 ಕೋಟಿ ದೀನದಲಿತರು, ಬಡ ಕಾರ್ಮಿಕರು, ಮಹಿಳೆಯರಿಗೆ ಉಪಯೋಗ ಆಗುತ್ತಿತ್ತು. ಕರ್ನಾಟಕದಲ್ಲಿ ವರ್ಷದ 100 ದಿನಗಳು 77 ಲಕ್ಷ ಜನರಿಗೆ ಇದರಿಂದ ಉದ್ಯೋಗ ದೊರೆಯುತ್ತಿತ್ತು. ಜನರ ಉದ್ಯೋಗದ ಹಕ್ಕನ್ನು ವಿಬಿಜಿರಾಮ್ ಜಿ ಕಸಿದುಕೊಂಡಿದೆ. ಗ್ರಾಮಸಭೆಗಳಿಗೆ ನೀಡಿರುವ ಅಧಿಕಾರವನ್ನು ಮೊಟಕುಗೊಳಿಸಲಾಗಿದ್ದು, ಸಂವಿಧಾನದ 73 ಕಲಂಕ್ಕೆ ಚ್ಯುತಿ ಮಾಡಿದಂತಾಗಿದೆ. ಈ ಕಾಯ್ದೆಯನ್ನು ರದ್ದುಗೊಳಿಸಿ, ಮನರೇಗಾ ಯೋಜನೆಯನ್ನು ಮರುಸ್ಥಾಪಿಸಲು ಕೇಂದ್ರವನ್ನ ಒತ್ತಾಯಿಸಲಾಗುತ್ತಿದೆ. ಈ ಕಾಯ್ದೆಯಿಂದ ರಾಜ್ಯ ಸರ್ಕಾರಕ್ಕೆ 3000 ಕೋಟಿ ರೂ.ಗಳ ಹೆಚ್ಚಿಗೆ ಆರ್ಥಿಕ ಹೊರೆ ಬೀಳಲಿದೆ ಎಂದರು.

> **ಮನರೇಗಾ ಯೋಜನೆಯನ್ನು ಮರುಸ್ಥಾಪಿಸಲು ಕೇಂದ್ರಕ್ಕೆ ಒತ್ತಾಯ**
>
> **2005 ರಲ್ಲಿ ಮನರೇಗಾ ಯೋಜನೆಯಡಿ ಪೂರ್ಣ ಅನುದಾನ ಕೇಂದ್ರ ಸರ್ಕಾರವೇ ನೀಡುತ್ತಿತ್ತು. ಆದರೆ ಪ್ರಸ್ತುತ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಜಾರಿಗೆ ತಂದು, ಕೇಂದ್ರ ಸರ್ಕಾರ ಶೇ. 60 ಮತ್ತು ರಾಜ್ಯ ಶೇ. 40 ರಷ್ಟು ಅನುದಾನವನ್ನು ನೀಡಬೇಕೆಂದು ಸೂಚಿಸಿದ್ದಾರೆ. ಕೇಂದ್ರದ ಈ ಕಾಯ್ದೆಯಿಂದ ರಾಜ್ಯಗಳಿಗೆ ಆಗುವ ಅನಾಹುತಗಳ ಬಗ್ಗೆ ಬಜೆಟ್‌ನಲ್ಲಿ ತಿಳಿಸಲಾಗಿದೆ.**

> **ರಾಷ್ಟ್ರದ ಜಿಡಿಪಿ ರೇಟ್‌ಗಿಂತ ಚೆನ್ನಾಗಿದ್ದೇವೆ. ನಾವೆಲ್ಲಾ ಗ್ಯಾರೆಂಟಿಗಳಿಗೆ 56 ಸಾವಿರ ಕೋಟಿ ಖರ್ಚು ಮಾಡುತ್ತಿದ್ದೇವೆ. ಇಲ್ಲಿಯವರೆಗೆ ಗ್ಯಾರೆಂಟಿಗಳಿಗೆ 1,21,598 ಕೋಟಿ ಖರ್ಚು ಮಾಡಿದ್ದೇವೆ. ನಾವು ಜನತೆಗೆ ಕೊಟ್ಟ ಭರವಸೆಗಳನ್ನ ಈಡೇರಿಸುವ ಕೆಲಸವನ್ನೂ ಮಾಡಿದ್ದೇವೆ. ಆಮೇಲೆ ವಿತ್ತೀಯ ಶಿಸ್ತನ್ನೂ ಪಾಲಿಸಿದ್ದೇವೆ.**
>
> **- ಸಿದ್ದರಾಮಯ್ಯ, ಸಿಎಂ**

## ಮಂಗಳೂರು ವಿಮಾನ ಹೈಜಾಕ್: ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಹೈಡ್ರಾಮಾ



ಉದಯವಾಹಿನಿ ಚಿತ್ರ

• ಉದಯವಾಹಿನಿ, ದೇವನಹಳ್ಳಿ

ರಾಯಪುರದಿಂದ ಮಂಗಳೂರಿಗೆ ಬರುತ್ತಿದ್ದ ಅಪೆಕ್ಸ್ ವಿಸ್ಟಾ ಏರ್‌ಲೈನ್ಸ್‌ನ ಏರ್ ಬಸ್-321 ವಿಮಾನವನ್ನು, ಅಪಹರಿಸಿದ ಅಪಹರಣಕಾರರು ವಿಮಾನವನ್ನು ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಳಿಸಿದರು. ಹೈಜಾಕ್ ಆಗಿದ್ದ ವಿಮಾನದಲ್ಲಿದ್ದ 30 ಪ್ರಯಾಣಿಕರು, ಐವರು ಸಿಬ್ಬಂದಿಯನ್ನು ಸುರಕ್ಷಿತ ಬಿಡುಗಡೆ ಮಾಡಲು ಅಪಹರಣಕಾರರು ವಿವಿಧ ಬೇಡಿಕೆ ಮುಂದಿಟ್ಟರು ಅಪಹರಣಕಾರರು ಒಬ್ಬ ಪ್ರಯಾಣಿಕನನ್ನು ಕೊಂದರು. ತುರ್ತು ಪ್ರತಿಕ್ರಿಯೆ ಕ್ರಮವಾಗಿ ವಿಮಾನ ನಿಲ್ದಾಣದ ಎರಡೂ ರನ್‌ವೇಗಳನ್ನು ಕೆಲಕಾಲ ವಿಮಾನ ಸಂಚಾರಕ್ಕೆ ಮುಚ್ಚಲಾಗಿತ್ತು. ಅಪಹರಣಕಾರರೊಂದಿಗೆ ಮಾತುಕತೆ ನಡೆಸಲು ಸಂಧಾನಕಾರರನ್ನು ನಿಯೋಜಿಸಲಾಗಿದ್ದು, ಬಳಿಕ ಅವರು ಪ್ರಯಾಣಿಕರನ್ನು ಬಿಡುಗಡೆಗೆ ಮನವೊಲಿಸಿದರು. ಇನ್ನುಳಿದ ಪ್ರಯಾಣಿಕರು, ಸಿಬ್ಬಂದಿಯನ್ನು ಭದ್ರತಾ ಪಡೆಗಳು ಸುರಕ್ಷಿತವಾಗಿ ರಕ್ಷಿಸಿದರು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ವಿಮಾನ ಹೈಜಾಕ್ ಅಣುಕು ಪ್ರದರ್ಶನದ ಈ ದೃಶ್ಯಗಳು ವಿಮಾನ ಅಪಹರಣದ ನೈಜ ದೃಶ್ಯಗಳನ್ನು ನೆನಪಿಸಿದವು. ಇದೊಂದು ಅಣುಕು ಕಾರ್ಯಾಚರಣೆ. ತುರ್ತು ಪರಿಸ್ಥಿತಿಯಲ್ಲಿ ಪ್ರಯಾಣಿಕರು ಮತ್ತು ವಿಮಾನ ನಿಲ್ದಾಣ ಬಳಕೆದಾರರ ಸುರಕ್ಷತೆ ಖಚಿತಪಡಿಸುವ ಉದ್ದೇಶದಿಂದ ಈ ಅಣುಕು ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ಅಣುಕು ಕಾರ್ಯಾಚರಣೆ ಬಳಿಕ ಸಂಪೂರ್ಣ ಮೌಲ್ಯಮಾಪನ ನಡೆಸಿ, ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ಸಂವಹನ ವ್ಯವಸ್ಥೆ ಹಾಗೂ ವಿವಿಧ ಸಂಸ್ಥೆಗಳ ಸಮನ್ವಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಕಾರ್ಯತಂತ್ರ ರೂಪಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ವಿಜ್ಞಾನ ನಗರ ನಿರ್ಮಾಣ: ಕೇಂದ್ರಕ್ಕೆ ಡಿಪಿಆರ್

• ಉದಯವಾಹಿನಿ, ದೊಡ್ಡಬಳ್ಳಾಪುರ

2026-27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ತಾಲ್ಲೂಕಿಗೆ ನಿರ್ದಿಷ್ಟವಾಗಿ ಘೋಷಣೆಯಾಗಿರುವ 650 ಕೋಟಿಯ ದೊಡ್ಡಮೊತ್ತದ ಯೋಜನೆ ಬೆಂಗಳೂರಿನ ವೃಷಾಭವತಿಯ ಕೊಳಚೆ ನೀರನ್ನು ಶುದ್ದೀಕರಿಸಿ 119 ಕೆರೆಗಳಿಗೆ ತುಂಬಿಸುವುದು ಮಾತ್ರ. ಉಳಿದಂತೆ ಒಂದಿಷ್ಟು ಪ್ರಸ್ತಾವನೆ, ಒಂದಿಷ್ಟು ಮಂಜೂರಾತಿಯಾಗಿವೆ ಎನ್ನುವ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿವೆ. ತಾಲ್ಲೂಕಿನ ಆದಿನಾರಾಯಣಹೊಸಹಳ್ಳಿಯಲ್ಲಿ ವಿಜ್ಞಾನ ನಗರ ನಿರ್ಮಾಣಕ್ಕೆ 233 ಕೋಟಿ ವೆಚ್ಚದಲ್ಲಿ ನಿರ್ಮಿಸಲು ವರದಿ ಕೇಂದ್ರಕ್ಕೆ ಸಲ್ಲಿಕೆ. ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ಒಳಚರಂಡಿ ಅಭಿವೃದ್ಧಿ, ತಾಲ್ಲೂಕಿನಲ್ಲಿ ಪ್ಯಾರಮೆಡಿಕಲ್ ಕೋರ್ಸ್, ಸಂಚಾರ ಪೊಲೀಸ್ ಠಾಣೆ, ತಾಲ್ಲೂಕಿನ ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದ ಗುಂಡಮಗೆರೆ ಕ್ರಾಸ್ ಬಳಿ ಶ್ರಮಿಕ ವಸತಿ ಪ್ರಾರಂಭಿಸಲು ಬಜೆಟ್‌ನಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿದೆ.



ಉದಯವಾಹಿನಿ ಚಿತ್ರ

ಶಂಕುಸ್ಥಾಪನೆಯಾಗಿ ಕಾಮಾಗಾರಿ ಆರಂಭವಾಗಿ ನಿಂತಿರುವ ಜಿಲ್ಲಾ ಆಸ್ಪತ್ರೆ ನಿರ್ಮಾಣಕ್ಕೆ ವಿವಿಧ ಸಂಘ ಸಂಸ್ಥೆಗಳು ಹಲವಾರು ಬಾರಿ ಹೋರಾಟ ಮಾಡಿ ಮುಖ್ಯಮಂತ್ರಿಗಳಿಂದ ಎಲ್ಲಾ ಸಚಿವರಿಗು ಮನವಿಗಳನ್ನು ಸಲ್ಲಿಸಿದ್ದರು ಸಹ ಬಜೆಟ್‌ನಲ್ಲಿ ನಿರ್ದಿಷ್ಟವಾಗಿ ಹಣ ಮೀಸಲಿಟ್ಟು ತಿಳಿಸಿಲ್ಲ. ಇನ್ನು ಅರ್ಕಾವತಿ ನದಿ ಪಾತ್ರದಲ್ಲಿ ಕಲುಷಿತವಾಗಿರುವ ಮರಾಹೊಸಹಳ್ಳಿ, ದೊಡ್ಡತುಮಕೂರು ಕೆರೆಗಳಿಗೆ ಮೂರನೇ ಹಂತದ ಶುದ್ದೀಕರಣ ಘಟಕಕ್ಕೆ ಹಣ ನೀಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಆದರೆ ಬಜೆಟ್‌ನಲ್ಲಿ ನಿರ್ದಿಷ್ಟವಾಗಿ ತಿಳಿಸದೆ ದೊಡ್ಡಬಳ್ಳಾಪುರ, ದೇವನಹಳ್ಳಿ ಒಳಚರಂಡಿ ಅಭಿವೃದ್ಧಿ ಎಂದು ಮಾತ್ರ ತಿಳಿಸಿದೆ.

**ಮನವಿಗೆ ಸಿಗದ ಸ್ಪಂದನೆ:** ರಾಜ್ಯ ಬಜೆಟ್ ಕುರಿತು ನಮ್ಮ ನಿರೀಕ್ಷೆಗಳು ಹುಸಿಯಾಗಿವೆ. ಜಿಲ್ಲಾ ಆಸ್ಪತ್ರೆಗಾಗಿ ಹತ್ತಾರು ಬಾರಿ ಎಲ್ಲಾ ಅಧಿಕಾರಿಗಳು ಸಚಿವರ ಬಳಿಗೆ ನಿಯೋಗ ಹೋಗಿ ಮನವಿಗಳನ್ನು ಸಲ್ಲಿಸಿದ್ದರು ಯಾವುದೇ ರೀತಿಯ ಸ್ಪಂದನೆಯು ಇಲ್ಲದಾಗಿದೆ. ಹಾಗೆಯೇ ಇಡೀ ಕಾಮಗಾರಿ ಪೂರ್ಣಗೊಂಡಿದ್ದರು ಕನಿಷ್ಠ ಮೊತ್ತದ ಆರ್ಥಿಕ ನೆರವು ನೀಡಿ ಇ.ಎಸ್.ಐ ಆಸ್ಪತ್ರೆ ಪ್ರಾರಂಭದ ನಿರೀಕ್ಷೆಯು ಕ್ಷೀಣಿಸಿದೆ. ಸಂಜೀವನಾಯಕ್ ಜಿಲ್ಲಾ ಆಸ್ಪತ್ರೆ ಹೋರಾಟ ಸಮಿತಿ ಮುಖಂಡ

## ಚಿನ್ನದ ಆಸೆ ತೋರಿಸಿ ಆಂಧ್ರದ ವ್ಯಕ್ತಿಗೆ ವಂಚನೆ: ಐವರ ಬಂಧನ

• ಉದಯವಾಹಿನಿ, ವಿಜಯಪುರ

ಕಡಿಮೆ ಬೆಲೆಗೆ ಚಿನ್ನ ನೀಡುವುದಾಗಿ ಆಂಧ್ರ ಪ್ರದೇಶ ಮೂವರಿಂದ ವಿಜಯಪುರ ಬಳಿ 15 ಲಕ್ಷ ದೋಚಿ ಪರಾರಿಯಾಗಿದ್ದ ಏಳು ದರೋಡೆಕೋರರಲ್ಲಿ ಐವರನ್ನು ವಿಜಯಪುರ ಟೌನ್ ಪೊಲೀಸರು ವಿಜಯನಗರ ಜಿಲ್ಲೆಯಲ್ಲಿಯ ಹರಪನಹಳ್ಳಿಯಲ್ಲಿ ಬಂಧಿಸಿದ್ದಾರೆ. ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಹೋಬಳಿ ಯಲ್ಲಾಪುರ ಗ್ರಾಮದ ಕಾವಾಡಿ ಷಣ್ಮುಖ (24), ಷಣ್ಮುಖ (32), ಕಾವಾಡಿ ಗಣೇಶ್ (23), ದ್ಯಾಪನಹಳ್ಳಿಯ ಸಣ್ಣಜ್ಜನವರ್ ಸಾಗರ್ (28), ಹಾರಕ್ಕನಹಳ್ಳಿ ಗ್ರಾಮದ ಪೂಜಾರಿ ಮಂಜಪ್ಪ (40) ಅವರನ್ನು ವಿಜಯಪುರ ಪೊಲೀಸರು ಈಚೆಗೆ ಹರಪನಹಳ್ಳಿಯಲ್ಲಿ ಬಂಧಿಸಿ ಕರೆತಂದಿದ್ದಾರೆ. ರಮೇಶ್ ಕುಮಾರ್, ಸುನೀಲ್ ಎಂಬುವರು ತಲೆ ಮರೆಸಿಕೊಂಡಿದ್ದಾರೆ. ಅವರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಬಂಧಿತರಿಂದ ಕೃತ್ಯಕ್ಕೆ ಬಳಸಿದ ಕಾರು, ನಕಲಿ ಚಿನ್ನ ಮತ್ತು ದರೋಡೆ ಮಾಡಿದ್ದ 15 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ಉದಯವಾಹಿನಿ ಚಿತ್ರ


ಆಂಧ್ರಪ್ರದೇಶದ ವಿಶ್ವಪ್ರಸಾದ ರೆಡ್ಡಿ ಎಂಬುವರಿಗೆ ವ್ಯಕ್ತಿಯೊಬ್ಬ ದೂರವಾಣಿ ಕರೆ ಮಾಡಿ ಕಡಿಮೆ ಬೆಲೆಗೆ ಚಿನ್ನ ನೀಡುವುದಾಗಿ ನಂಬಿಸಿ, ವಿಜಯಪುರ ಹೋಬಳಿಯ ರಾಷ್ಟ್ರೀಯ ಹೆದ್ದಾರಿ 7ರ ವೆಂಕಟಗಿರಿಕೋಟೆ ಬಡಾವಣೆಗೆ ಕರೆಸಿಕೊಂಡಿದ್ದರು. 15 ಲಕ್ಷದೊಂದಿಗೆ ಬಂದ ವಿಶ್ವಪ್ರಸಾದ ಹಾಗೂ ಇಬ್ಬರು ಸ್ನೇಹಿತರ ಮೇಲೆ ಆರು ದರೋಡೆಕೋರರು ಹಲ್ಲೆ ಮಾಡಿ 15 ಲಕ್ಷ ಹಣ ದೋಚಿ ಪರಾರಿಯಾಗಿದ್ದರು. ವಿಜಯಪುರ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

## ಹಾಲುಮತ ಎಳೆದು ತರುವುದು ತಪ್ಪು: ಸೋಮಣ್ಣ

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ಅವರು ಆಡಳಿತದ ವೈಫಲ್ಯವನ್ನು ಮುಚ್ಚಿ ಹಾಕಲು ಹಾಲಿನಂಥ ಹಾಲುಮತವನ್ನು ಎಳೆದು ತರುವ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ನೀಡಿರುವುದು ನೋವಿನ ಸಂಗತಿ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುರಿ ಕಾಯುವವನು ಮುಖ್ಯಮಂತ್ರಿ ಆಗಿರುವುದನ್ನು ಸಹಿಸುತ್ತಿಲ್ಲ ಎಂದು ಸಿದ್ದರಾಮಯ್ಯ ಹೇಳಿಕೆ ನೀಡಿದ್ದಾರೆ. ದೀರ್ಘವಾದ ಆಡಳಿತ ನೀಡಲು ಅವಕಾಶ ಪಡೆದ ಬಳಿಕ ಇಂಥ ಮಾತುಗಳನ್ನಾಡಿದ್ದಾರೆ. ದಿಕ್ಕುದೆಸೆ ಇಲ್ಲದ ಆಡಳಿತ ನೀಡಿದ ಕೀರ್ತಿ ನಿಮ್ಮದು. ಅದನ್ನು ಮುಚ್ಚಿ ಹಾಕಲು ರಾಜಕೀಯ ಮಾಡುತ್ತಿದ್ದೀರಿ ಎಂದು ಟೀಕಿಸಿದರು. ನಾಲ್ಕು ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಿದ್ದಾರೆ. ಆದರೆ, ಅಲ್ಪಸಂಖ್ಯಾತರ ಹೆಸರಿನಲ್ಲಿರುವ ಶಾಲೆಗಳಿಗೆ 4,000 ಕೋಟಿ ಕೊಟ್ಟಿದ್ದಾರೆ. ವಕ್ಫ್ ಅಸ್ತಿ ಉಳಿಸಲು 150 ಕೋಟಿ ಕೊಟ್ಟಿದ್ದಾರೆ. ಉರ್ದು ಶಾಲೆಗಳಿಗೆ 100 ಕೋಟಿ ಇಟ್ಟಿದ್ದಾರೆ. ಮುಲ್ಲಾಗಳಿಗೆ 6000 ವೇತನ ನಿಗದಿ ಮಾಡಿದ್ದಾರೆ. ಆದರೆ, ದೇವಸ್ಥಾನಗಳ ಅರ್ಚಕರಿಗೆ ವೇತನ ಹೆಚ್ಚಿಸಿಲ್ಲ. ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ನೀಡಿಲ್ಲ ಎಂದು ಟೀಕಿಸಿದರು.



**ಸಮಾಜಕ್ಕೆ ತಪ್ಪು ಸಂದೇಶ**

ಕರ್ನಾಟಕವನ್ನು ಮಾರಾಟಕ್ಕೆ ಇಟ್ಟಿದ್ದೀರಾ? ಯಾರನ್ನು ಮೆಚ್ಚಿಸಲು ಬಜೆಟ್ ಮಂಡಿಸಿದ್ದೀರಿ? ಹೈಕಮಾಂಡ್ ಮೆಚ್ಚಿಸಲೆ? ಕುರ್ಚಿ ಉಳಿಸಲೇ? ನಿಮ್ಮ ಅನುಭವ ಏನಾಯಿತು? ನಿಮ್ಮಿಂದ ಇಂಥ ಬಜೆಟ್ ನಿರೀಕ್ಷಿಸಿರಲಿಲ್ಲ' ಎಂದರು.

> **ಆದಾಯ ಮೂಲವಿಲ್ಲದ ಸಾಲದ ಬಜೆಟ್ ಅನ್ನು ಈ ಬಾರಿ ಮಂಡಿಸಿದ್ದಾರೆ. ಇತ್ತೀಚೆಗೆ ಸಿಎಜಿ ಒಂದು ವರದಿಯನ್ನು ನೀಡಿತ್ತು. ಶೇ 50ರಷ್ಟು ಈಗಾಗಲೇ ಸಾಲ ಮಾಡಿದ್ದೀರಿ. ಇನ್ನು ಹೆಚ್ಚು ಸಾಲ ಮಾಡುವ ಅಧಿಕಾರ ನಿಮಗಿಲ್ಲ. ಒಂದು ವೇಳೆ ಮತ್ತೆ ಸಾಲ ಮಾಡಿದರೆ ರಾಜ್ಯ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಸಿಎಜಿ ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಆದರೂ ಮತ್ತೆ ಸಾಲದ ಬಜೆಟ್ ಮಂಡಿಸಲಾಗಿದೆ.**
>
> **- ವಿ. ಸೋಮಣ್ಣ ಕೇಂದ್ರ ರೈಲ್ವೆ ಖಾತೆರಾಜ್ಯ ಸಚಿವ**

# ಎನ್‌ಜಿಇಎಫ್‌ನಲ್ಲಿ ಆರ್ಟ್‌ಪಾರ್ಕ್ ನಿರ್ಮಾಣ

### ಬೆಂಗಳೂರು ಅಂತಾರಾಷ್ಟ್ರೀಯ ನಗರವಾಗಿದ್ದು, ನಮ್ಮಲ್ಲಿ ಒಂದು ಕನ್ವೆನ್ಷನ್ ಸೆಂಟರ್ ಇಲ್ಲ, ಅನುಕೂಲಕರ ವಾತಾವರಣ ಕಲ್ಪಿಸುವ ಅಗತ್ಯ

• ಉದಯವಾಹಿನಿ, ಬೆಂಗಳೂರು

ನಗರದ ಎನ್‌ಜಿಇಎಫ್‌ನಲ್ಲಿ ಟ್ರೀಪಾರ್ಕ್ ನಿರ್ಮಿಸಲಾಗುತ್ತಿದೆ. ಜೊತೆಗೆ ಆರ್ಟ್ಸ್ ಪಾರ್ಕ್ ನಿರ್ಮಾಣದ ಚಿಂತನೆಯೂ ಇದೆ. ಈ ಯೋಜನೆಯನ್ನು ಅಂಬಾನಿ, ಅದಾನಿಯಂತಹ ಉದ್ಯಮಿಗಳ ಒಡೆತನದ ಕಂಪನಿಗಳ ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಅಂತಾರಾಷ್ಟ್ರೀಯ ನಗರವಾಗಿದ್ದು, ನಮ್ಮಲ್ಲಿ ಒಂದು ಕನ್ವೆನ್ಷನ್ ಸೆಂಟರ್ ಇಲ್ಲ. ಅದಕ್ಕಾಗಿ ಬೆಂಗಳೂರಿನ ಮೈಸೂರುಲ್ಯಾಂಪ್ಸ್ ಜಾಗವನ್ನು ಬಳಸಿಕೊಂಡು ಫೈವ್‌ಸ್ಟಾರ್ ಹೋಟೆಲ್, ಪ್ರದರ್ಶನ ಕೇಂದ್ರ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನಿರ್ಮಿಸಲಾಗುವುದು. ದೇಶ ವಿದೇಶದ ಗಣ್ಯರು ಆಗಮಿಸಿದಾಗ ಅಲ್ಲಿ ಅವರಿಗೆ ತಂಗಲು ಅನುಕೂಲಕರ ವಾತಾವರಣ ಕಲ್ಪಿಸುವ ಅಗತ್ಯ ಇದೆ ಎಂದರು. ಬೆಂಗಳೂರು-ಪುಣೆ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ ಶೀಘ್ರಗತಿಯಲ್ಲಿ ಅನುಷ್ಠಾನಕ್ಕೆ ಬರಬೇಕು. ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ 6 ಕಾರಿಡಾರ್ ಯೋಜನೆಗಳನ್ನು ಘೋಷಿಸಿತ್ತು. ಅವುಗಳ ಜೊತೆಯಲ್ಲೇ ತಮ್ಮ ಒತ್ತಡದ ಮೇಲೆ ಭರವಸೆ ದೊರೆತಿರುವ ಪುಣೆ-ಬೆಂಗಳೂರು ಕಾರಿಡಾರ್ ಯೋಜನೆಯನ್ನು ಜೊತೆಯಲ್ಲಿಯೇ ಅನುಷ್ಠಾನಕ್ಕೆ ತರಬೇಕು. ಯಾವುದೇ ಕಾರಣಕ್ಕೂ ನನೆಗುದಿಗೆ ಬೀಳಬಾರದು ಎಂದು ಹೇಳಿದರು. ಕಲ್ಯಾಣ ಕರ್ನಾಟಕ ಪ್ರದೇಶದ ಮಾದರಿಯಲ್ಲೇ ಕಿತ್ತೂರು ಕರ್ನಾಟಕ ಭಾಗವನ್ನು ಅಭಿವೃದ್ಧಿ ಪಡಿಸಲು ಪ್ರತ್ಯೇಕವಾದ ಮಂಡಳಿ ರಚಿಸಬೇಕು ಎಂಬ ಬೇಡಿಕೆಯಿದೆ. ಉತ್ತರ ಕರ್ನಾಟಕ ಭಾಗದಂತೆಯೇ ಚಿತ್ರದುರ್ಗ ಸೇರಿ ಮಧ್ಯ ಕರ್ನಾಟಕ ಭಾಗದ ಹಲವು ಪ್ರದೇಶಗಳು ಹಿಂದುಳಿದಿವೆ. ಎಲ್ಲವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಅಗತ್ಯವಿದೆ ಎಂದರು. ನಂಜುಂಡಪ್ಪ ಸಮಿತಿ ವರದಿ ಆಧಾರದ ಮೇಲೆ ಹಿಂದುಳಿದ- ಅತೀ ಹಿಂದುಳಿದ ಪ್ರದೇಶಗಳಲ್ಲಿನ ಕೈಗಾರಿಕಾ ಸ್ಥಾಪನೆಗೆ ಶೇ.3 ರಿಂದ 4ರಷ್ಟು ರಿಯಾಯಿತಿ ನೀಡಬೇಕೆಂದು ನಿರ್ಧಾರವಾಗಿತ್ತು. ಹೊಸ ಕೈಗಾರಿಕಾ ನೀತಿಯಲ್ಲಿ ಬೆಂಗಳೂರಿನಿಂದ ಹೊರಗಡೆ ಆರಂಭಗೊಳ್ಳುವ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಲಾಗಿದೆ. ರಿಯಾಯಿತಿಯನ್ನು ಮತ್ತಷ್ಟು ಹೆಚ್ಚಿಸಲು ಅಧ್ಯಯನ ನಡೆಸುಸಲುವಾಗಿ ಸಮಿತಿ ರಚಿಸುವುದಾಗಿ ಹೇಳಿದರು.

**ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ**



> **ಆಲಮಟ್ಟಿ ಅಣೆಕಟ್ಟು ಎತ್ತರಕ್ಕೆ ಕೃಷ್ಣಾ ನ್ಯಾಯಧೀಕರಣ ತೀರ್ಪಿನಲ್ಲಿ ನಮಗೆ ಅವಕಾಶ ಸಿಕ್ಕಿದೆ. ತೀರ್ಪಿನಲ್ಲಿ ನೀರಿನ ಹಂಚಿಕೆಯಲ್ಲಿ ಅನ್ಯಾಯವಾಗಿದೆ. ಕರ್ನಾಟಕ ಕೂಡ ಸುಪ್ರೀಂಕೋರ್ಟ್ ಮೊರೆ ಹೋಗಿದೆ. ವಿವಾದ ಸುಪ್ರಿಂಕೋರ್ಟ್ ಅಲ್ಲಿರುವುದರಿಂದಾಗಿ ಮಹಾ ರಾಷ್ಟ್ರ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಆಕ್ಷೇಪ ವ್ಯಕ್ತಪಡಿಸುವುದು ಸರಿಯಲ್ಲ, ರಾಜ್ಯ ಸರ್ಕಾರ ಭೂ ಸ್ವಾಧೀನಕ್ಕೆ ಮುಂದಾಗಿದೆ. ನಮ್ಮ ನೆಲದಲ್ಲಿ ನಾವು ಯೋಜನೆ ಕೈಗೊಂಡರೆ ಅದನ್ನು ತಡೆಯಲು ಯತ್ನಿಸುವುದು ಸರಿಯಲ್ಲ. ಬಜೆಟ್‌ನಲ್ಲಿ ಹಣ ನಿಗದಿ ಮಾಡದೇ ಇದ್ದರೂ, ನಾವು ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಮುಂದುವರೆಸುತ್ತೇವೆ.**
>
> **- ಎಂ.ಬಿ.ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ**

> **ಕೇಳಿದ ಯೋಜನೆಗಳಿಗೆ ಸಿಎಂ ಘೋಷಣೆ**
>
> **16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳಿಂದ ಬಳಕೆ ನಿಷೇಧಿಸುವುದು ಅಗತ್ಯ ಇದೆ. ಆಂಧ್ರಪ್ರದೇಶದಲ್ಲಿ ಈಗಾಗಲೇ 13 ವರ್ಷದ ಮಕ್ಕಳಿಗೆ ನಿರ್ಬಂಧ ವಿಧಿಸಲಾಗಿದೆ. ಚಿಕ್ಕ ಮಕ್ಕಳು ಮೊಬೈಲ್ ಬಳಸುವುದರಿಂದ ಕೆಟ್ಟ ಪರಿಣಾಮವಾಗುತ್ತಿದೆ ಎಂದು ಮಾನಸಿಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ಆಧರಿಸಿ ಕ್ರಮಕೈಗೊಳ್ಳಲಾಗಿದೆ, ಬಜೆಟ್‌ನಲ್ಲಿ ತಾವು ಕೇಳಿದ ಯೋಜನೆಗಳನ್ನು ಮುಖ್ಯಮಂತ್ರಿ ಅವರು ಘೋಷಿಸಿದ್ದಾರೆ. ಕೈಗಾರಿಕೆ ಮತ್ತು ಮೂಲಸೌಕರ್ಯಕ್ಕೆ ಹೆಚ್ಚಿನ ಹಣ ನೀಡಿದ್ದಾರೆ. ಮೈಸೂರಿಗೆ ಏರೋಸ್ಪೇಸ್ ಕೇಳಿದ್ದೆವು. ಬೆಳಗಾವಿ, ಧಾರವಾಡದಲ್ಲಿ ಕೈಗಾರಿಕಾ ಪಾರ್ಕ್‌ಗಳಿಗೆ ಅನುಮತಿ ನೀಡಿದ್ದಾರೆ ಎಂದರು.**

ಅಂತರಾಳದಿಂದ...
EDITORIAL

# ಕಲ್ಯಾಣಗಳ ಮೇಲೆ ಅಕ್ಕರೆ, ಅಭಿವೃದ್ಧಿಗೂ ಸಿಕ್ಕಿದೆ ಆಸರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4.48 ಲಕ್ಷ ಕೋಟಿ ಗಾತ್ರದ 2026-27ನೇ ಸಾಲಿನ ರಾಜ್ಯ ಬಜೆಟ್ ಅನ್ನು ಶುಕ್ರವಾರ ಮಂಡಿಸಿದ್ದಾರೆ. ದಾಖಲೆಯ ಹದಿನೇಳನೆಯ ಬಾರಿಗೆ ಬಜೆಟ್ ಮಂಡಿಸಿರುವ ಅವರು, ಯಥಾಪ್ರಕಾರ ಜನಕಲ್ಯಾಣದ ಜಪ ಮಾಡುತ್ತಲೇ ಅಭಿವೃದ್ಧಿ ಕಾರ್ಯಗಳಿಗೂ ಒತ್ತು ನೀಡುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ. ಬಜೆಟ್‌ನ ಗಾತ್ರ ಹಿಗ್ಗಿರುವುದರಿಂದ 'ಗ್ಯಾರಂಟಿ'ಗಳ ಬಾಬತ್ತು ಮೊದಲಿನಂತೆ ಈಗ ಭಾರವಾಗದೆ ಮೂಲಸೌಕರ್ಯದ ಅಭಿವೃದ್ಧಿಗೂ ಹಣ ಒದಗಿಬರಲಿದೆ ಎಂಬ ಆತ್ಮವಿಶ್ವಾಸವನ್ನು ಅವರು ಪ್ರಕಟಿಸಿದ್ದಾರೆ. ಈ ದಿಸೆಯಲ್ಲಿ ಅವರು ಕಂಡುಕೊಂಡಿರುವ ಸಮತೋಲನದ ಹಾದಿ ವಿಶಿಷ್ಟವಾಗಿದೆ. 'ಅಹಿಂದ' ವರ್ಗಗಳ ಮೇಲಿರುವ ಸಿದ್ದರಾಮಯ್ಯನವರ ಪ್ರೇಮ ಎಲ್ಲರಿಗೂ ಗೊತ್ತಿರುವಂಥದ್ದು. ಆದರೆ, ಹತ್ತು ಹಲವು ಯೋಜನೆಗಳ ಮೂಲಕ ಇತರ ಎಲ್ಲಾ ಸಮುದಾಯಗಳನ್ನೂ ಒಂದಿಲ್ಲೊಂದು ರೀತಿ ತಲಪುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ತಳಸಮುದಾಯಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ಸಮಾಜದ ಏಳಿಗೆಗಾಗಿ ಅವರು ಹಾತೊರೆಯುತ್ತಿರುವುದು ಬಜೆಟ್‌ನಲ್ಲಿ ಎದ್ದು ಕಾಣುತ್ತದೆ. ಕರ್ನಾಟಕದ್ದೇ ಆದ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ರೂಪಿಸಿರುವ ಅವರು, ಅವುಗಳನ್ನು '11ಜಿ' ಮಾದರಿ ಆರ್ಥಿಕತೆ ಎಂದು ವ್ಯಾಖ್ಯಾನಿಸಿದ್ದಾರೆ. ಜನಕಲ್ಯಾಣ, ಶಿಕ್ಷಣ, ಕೃಷಿ, ಕಾರ್ಮಿಕ ಕಲ್ಯಾಣ, ಕೈಗಾರಿಕೆ, ನಗರಾಭಿವೃದ್ಧಿ- ಹೀಗೆ ಎಲ್ಲವನ್ನೂ ಈ '11ಜಿ' ಮಾದರಿ ಆರ್ಥಿಕತೆ ಒಳಗೊಂಡಿದೆ. ರಾಜ್ಯದ ಯುವ ಸಮುದಾಯದ ಉದ್ಯೋಗದ ಹಸಿವನ್ನು ಮುಖ್ಯಮಂತ್ರಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಎನ್ನುವು ದಕ್ಕೂ ನಿದರ್ಶನಗಳಿವೆ. ಈಗಾಗಲೇ ಆರಂಭಿಸಲಾಗಿರುವ 56,432 ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿರುವ ಅವರು, ಮುಂಬರುವ ಆರ್ಥಿಕ ವರ್ಷದಲ್ಲಿ ಹೊಸದಾಗಿ ಸುಮಾರು 32 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಾಗಿಯೂ ಘೋಷಿಸಿದ್ದಾರೆ. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ ಕಳೆದ ವರ್ಷ 'ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ'ವನ್ನು ರೂಪಿಸಿದ್ದ ಅವರು, ಮುಂದಿನ ದಿನಗಳಲ್ಲಿ ಈ ಯೋಜನೆಗಾಗಿ ಮತ್ತೆ 4,000 ಕೋಟಿ ವ್ಯಯಿಸಲು ತೀರ್ಮಾನಿಸಿದ್ದಾರೆ.

> **ಗ್ಯಾರಂಟಿ ಕಾರ್ಯಕ್ರಮಗಳ ಮುಂದುವರಿಕೆಯ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳಿಗೂ ಒತ್ತು ನೀಡಿರುವ ರಾಜ್ಯ ಬಜೆಟ್, ಎಲ್ಲ ಸಮುದಾಯಗಳ ಆಶೋತ್ತರಗಳಿಗೆ ಸ್ಪಂದಿಸಲು ಪ್ರಯತ್ನಿಸಿದೆ.**

ಬಜೆಟ್ ಭಾಷಣದುದ್ದಕ್ಕೂ ಕೃತಕ ಬುದ್ಧಿಮತ್ತೆಯ (ಎ.ಐ) ಜಪ ಮಾಡಿರುವ ಅವರು, ಶಾಲಾಹಂತದ ವಿದ್ಯಾರ್ಥಿಗಳಿಂದ ಉದ್ಯೋಗದ ನಿರೀಕ್ಷೆಯಲ್ಲಿರುವ ಯುವ ಸಮುದಾಯದವರೆಗೆ ಎಲ್ಲರಿಗೂ ಎ.ಐ ಆಧರಿತ ಕೌಶಲ ತರಬೇತಿ ನೀಡುವ ಮಾತುಗಳನ್ನಾಡಿದ್ದಾರೆ. ಅವರದೇ ಮಾತಿನಲ್ಲಿ ಹೇಳುವುದಾದರೆ, 'ಇದು, ಬೆಂಕಿಯನ್ನು ಬೆಳಕಾಗಿಸುವ ಯತ್ನ'. ಬೃಹತ್ ಗಾತ್ರದ ಯೋಜನೆಗಳ ಬದಲಾಗಿ ಸಣ್ಣ-ಪುಟ್ಟ ಅಭಿವೃದ್ಧಿ ಕಾರ್ಯಗಳ ಮೂಲಕ ಮಹತ್ತನ್ನು ಸಾಧಿಸುವ ಕನಸನ್ನು ಸಿದ್ದರಾಮಯ್ಯನವರು ಕಂಡಿದ್ದಾರೆ. ಶಾಲಾ ಕಟ್ಟಡಗಳ ದುರಸ್ತಿ, ಹಾಸ್ಟೆಲ್‌ಗಳ ನಿರ್ಮಾಣ, ಕಿರು ಅಣೆಕಟ್ಟೆಗಳು, ಸೇತುವೆಗಳು, ಕಾಲುಸಂಕಗಳ ನಿರ್ಮಾಣ, ಹತ್ತು-ಹಲವು ಏತ ನೀರಾವರಿ ಮತ್ತು ಕೆರೆ ತುಂಬಿಸುವ ಯೋಜನೆಗಳ ಅನುಷ್ಠಾನದ ಘೋಷಣೆಗಳನ್ನು ಈ ಮಾತಿಗೆ ಉದಾಹರಣೆಯಾಗಿ ನೀಡಬಹುದು. 'ಮುಖ್ಯಮಂತ್ರಿ ಕೃಷಿ ವಿಸ್ತಾರ' ಯೋಜನೆಯ ಘೋಷಣೆ ಕೃಷಿಕರ ಹರ್ಷಕ್ಕೆ ಕಾರಣವಾಗಬಹುದು. ಸಾಮಾಜಿಕ ಜಾಲತಾಣಗಳು ಮಕ್ಕಳ ವರ್ತನೆಯಲ್ಲಿ ತರುತ್ತಿರುವ ಆತಂಕಕಾರಿ ಬದಲಾವಣೆ ಸರ್ಕಾರದ ಗಮನವನ್ನೂ ಸೆಳೆದಿದೆ.

ಆದ್ದರಿಂದಲೇ 16 ವರ್ಷದೊಳಗಿನವರಿಗೆ ಸಾಮಾಜಿಕ ಜಾಲತಾಣ ಬಳಕೆ ನಿರ್ಬಂಧಿಸುವ ಅಭಿಲಾಷೆಯನ್ನು ಬಜೆಟ್‌ನಲ್ಲಿ ವ್ಯಕ್ತಪಡಿಸಲಾಗಿದೆ. ಆದರೆ, ಅದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಯ ಮರುಸ್ಥಾಪನೆಗಾಗಿ ಕಾನೂನು ಹೋರಾಟಕ್ಕೂ ಸಿದ್ಧ ಎಂದು ಘೋಷಿಸಿರುವ ಮುಖ್ಯಮಂತ್ರಿ. ಮನರೇಗಾದ ರೂಪಾಂತರವಾದ 'ವಿಬಿ ಜಿ ರಾಮ್ ಜಿ' ಯೋಜನೆಯನ್ನು ಹೇಗೆ ಅನುಷ್ಠಾನಗೊಳಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಿಲ್ಲ. ರಾಜ್ಯಕ್ಕೆ ಜಿಎಸ್‌ಟಿ ಬಾಬತ್ತಿನಿಂದ ಸಿಗುತ್ತಿದ್ದ ವರಮಾನದಲ್ಲಿ ಜಿಎಸ್‌ಟಿ ದರ ಸರಳೀಕರಣದ ಬಳಿಕ 15 ಸಾವಿರ ಕೋಟಿಯಷ್ಟು ಖೋತಾ ಆಗಿದೆ. ಈ ಕುರಿತು ಆಕ್ಷೇಪ ಎತ್ತಿರುವ ಮುಖ್ಯಮಂತ್ರಿ, 16ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶೇ 4.13ರಷ್ಟು ತೆರಿಗೆ ಪಾಲು ನಿಗದಿ ಮಾಡಿರುವುದಕ್ಕೆ ಅಲ್ಪತೃಪ್ತಿಯನ್ನೂ ವ್ಯಕ್ತಪಡಿಸಿದ್ದಾರೆ. ಗಣಿಗಾರಿಕೆಯಲ್ಲಿ ಅಕ್ರಮ-ಸಕ್ರಮದ ಮೂಲಕ ದೊಡ್ಡ ವರಮಾನವನ್ನು ಅವರು ನಿರೀಕ್ಷಿಸಿದ್ದಾರೆ. ಸಂಪನ್ಮೂಲದ ಕ್ರೋಡೀಕರಣಕ್ಕಾಗಿ ಪರಿಸರಕ್ಕೆ ಹಾನಿ ಮಾಡುವಂತಹ ಅಕ್ರಮ ಗಣಿಗಳನ್ನು ಸಕ್ರಮಗೊಳಿಸಬೇಕೇ ಎನ್ನುವ ಪ್ರಶ್ನೆಯೂ ಏಳುತ್ತದೆ. ಅಬಕಾರಿ ಸುಂಕ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಅವರ ಮಾತುಗಳಲ್ಲೇ ತೆರಿಗೆ ಹೆಚ್ಚಳ ಅಪಾಯದ ಸುಳಿವೂ ಇದೆ. ಹಾಗೆಯೇ ಆರ್ಥಿಕತೆಗೆ ಚೈತನ್ಯ ತುಂಬುವಂತಹ ಸಾಮರ್ಥ್ಯವಿರುವ ಸೇವಾವಲಯಕ್ಕೆ ಇನ್ನಷ್ಟು ಬಲ ತುಂಬುವ ಕೆಲಸ ಆಗಬೇಕಿತ್ತು ಎನ್ನುವುದು ಎದ್ದು ಕಾಣುತ್ತದೆ. 2004-05ರಲ್ಲಿ 'ಮಿಗತೆ ಬಜೆಟ್' ಮಂಡಿಸಿ, ದೇಶದ ಗಮನ ಸೆಳೆದಿದ್ದ ಸಿದ್ದರಾಮಯ್ಯನವರು ಕಳೆದ ಬಾರಿಯಂತೆ ಈ ಸಲವೂ ಕೊರತೆಯ ಬಜೆಟ್ ಕೊಟ್ಟಿದ್ದಾರೆ. ಸಾಲದ ಹೊರೆ ಮತ್ತೆ ಹೆಚ್ಚಿದೆ. ಅದು, ವಿತ್ತೀಯ ಕೊರತೆಯ ಮಿತಿಯೊಳಗೆ ಇದೆ ಎಂದು ಮುಖ್ಯಮಂತ್ರಿ ಸಮಾಧಾನ ವ್ಯಕ್ತಪಡಿಸಿದರೂ ಆ ಮಿತಿ ಅಂಚಿಗೆ ತಲಪಿಬಿಟ್ಟಿದೆ.

# ರಾಮಾಯಣ



## ಸುಗ್ರೀವನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ಸೇನೆಗಳನ್ನು ಕಳಿಸಿದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಆ ಸ್ಥಾನಗಳಲ್ಲಿ ಹುಡುಕಿರಿ. ಮುಂದೆ ಯವದ್ವೀಪ ಸಿಕ್ಕುವುದು. ಆಮೇಲೆ ಶಿಶಿರಪರ್ವತ, ಮುಂದೆ ಶೋಣನದಿಯನ್ನು ದಾಟಿದ ಮೇಲೆ ಸಮುದ್ರ ಸಿಗುತ್ತದೆ. ಅಲ್ಲೆಲ್ಲಾ ಹುಡುಕಿರಿ. ಮುಂದೆ ಕ್ಷೀರಸಮುದ್ರವನ್ನು ಹಾಯ್ದು ಹೋದರೆ ಋಷಭವೆಂಬ ಪರ್ವತವು ಕಾಣುತ್ತದೆ. ಅಲ್ಲಿಂದ ಮುಂದೆ ಸುವರ್ಣ ವಾನರರೆ, ಅಲ್ಲಿ ನೀವು ಸಹಸ್ರಶೀರ್ಷನಾದ ಅನಂತನೆಂಬ ಮಹಾಸರ್ಪವನ್ನು ನೋಡುವಿರಿ. ಆನಂತರ ಉದಯಪರ್ವತವಿದೆ. ನೀವು ಸೀತಾದೇವಿಯನ್ನು ಆ ಸ್ಥಳಗಳಲ್ಲಿ ಚೆನ್ನಾಗಿ ಶೋಧಿಸಿ ನೋಡಬೇಕು. ಆ ಉದಯಪರ್ವತದ ಶಿಖರವು ಸ್ವರ್ಗ ಪರ್ಯಂತವಾಗಿ ವ್ಯಾಪಿಸಿದೆ. ಹಿಂದೆ ವಾಮನಾವತಾರದಲ್ಲಿ ಶ್ರೀಮನ್ನಾರಾಯಣನು ಒಂದು ಪಾದವನ್ನು ಈ ಪರ್ವತದ ಶಿಖರದ ಮೇಲಿಟ್ಟು ಇನ್ನೊಂದನ್ನು ಮೇರುಪರ್ವತದ ಶಿಖರದ ಮೇಲೆ ಇಟ್ಟನು. ಉದಯಪರ್ವತದ ಉತ್ತರದ ಕಡೆಯಿಂದ ಸೂರ್ಯನು ಜಂಬೂದ್ವೀಪವನ್ನು ಸುತ್ತುವರಿಯುತ್ತಾನೆ. ಅಲ್ಲಿ ವೈಖಾನಸ ವಾಲಖಿಲ್ಯರೆಂಬ ಮಹರ್ಷಿಗಳಿರುವರು. ಅವರು ಸೂರ್ಯಪ್ರಭೆಯಂತೆ ಪ್ರಕಾಶಮಾನವಾಗಿ ಬೆಳಗುತ್ತಿರುವರು. ಅಲ್ಲಿಂದ ಮುಂದೆ ಸುದರ್ಶನವೆಂಬ ದ್ವೀಪವಿರುವುದು. ಆ ಸ್ಥಳಗಳಲ್ಲಿ ರಾವಣನನ್ನೂ ಸೀತಾದೇವಿಯನ್ನೂ ಹುಡುಕಿ ನೋಡಿರಿ. ಅಲ್ಲಿಂದ ಪೂರ್ವದಿಕ್ಕಿಗೆ ಮುಂದೆ ಹೋಗಲು ಸಾಧ್ಯವಿಲ್ಲ. ಸೂರ್ಯಚಂದ್ರರು ಅಲ್ಲಿ ಉದಯಿಸುವುದಿಲ್ಲ. ಯಾವಾಗಲೂ ಕತ್ತಲೆ ತುಂಬಿರುತ್ತದೆ. ಅಲ್ಲಿಂದ ಮುಂದೆ ಏನಿದೆಯೋ ನಮಗೆ ತಿಳಿಯದು. ಎಲ್ಲೆ ವಾನರರೆ, ಉದಯಪರ್ವತದವರೆಗೂ ನೀವು ಹೋಗಿ ಸೀತಾದೇವಿಯನ್ನು ಅರಸಬೇಕು. ಒಂದು ತಿಂಗಳೊಳಗೆ ನೀವು ಹಿಂದಿರುಗಬೇಕು. ಹಿಂದಿರುಗದಿದ್ದರೆ ನಿಮಗೆ ಮರಣದಂಡನೆಯನ್ನು ವಿಧಿಸುತ್ತೇನೆ. ರಘುನಾಥನ ಪತ್ನಿಯನ್ನು ಹುಡುಕಿ ಕಾರ್ಯಸಿದ್ಧಿಯನ್ನು ಪಡೆಯಿರಿ. ಆನಂತರ ನೀವು ಸುಖದಿಂದ ಬಾಳುತ್ತಿರಬಹುದು ಎಂದು ಸುಗ್ರೀವನು ವಿನತಾದಿ ಕಪಿನಾಯಕರಿಗೆ ಆಜ್ಞಾಪಿಸಿದನು.

### ಸುಗ್ರೀವನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ಕಪಿಗಳನ್ನು ತೆಂಕಣ ದಿಕ್ಕಿಗೆ ಕಳುಹಿಸಿದ್ದು

ನೋಡಿ, ಈ ಪ್ರಕಾರ ಸುಗ್ರೀವನು ಸೀತಾದೇವಿಯನ್ನರಸಿ ಬರುವ ನಿಮಿತ್ತವಾಗಿ ಕೆಲವು ವಾನರ ಬಲವನ್ನು ಮೂಡಣ ದಿಕ್ಕಿಗೆ ಹೋಗ ಹೇಳಿ ತೆಂಕಣ ದಿಕ್ಕಿನಲ್ಲಿ ಹುಡುಕುವುದಕ್ಕೆ ಅಗ್ನಿ ಪುತ್ರನಾದ ನೀಲ, ವಾಯುಪುತ್ರನಾದ ಹನುಮಂತ, ಬ್ರಹ್ಮದೇವನ ಮಗನಾದ ಜಾಂಬವಂತ, ಸುಹೋತ್ರ ಶರಾರಿ ಶರಗುಲ್ಮ ಗಜ ಗವಾಕ್ಷ ಸುಷೇಣ ಋಷಭ ಮೈಂದ ದ್ವಿವಿದ ವಿಜಯ ಗಂಧಮಾದನ ಉಲ್ಕಾಮುಖ ಆಸಂಗ ಮೊದಲಾದ ಮಹಾಪರಾಕ್ರಮಿಗಳಾದ ಕಪಿನಾಯಕರನ್ನು ಕೂಡಿಸಿ ಅವರೆಲ್ಲರಿಗೂ ಅಂಗದನನ್ನು ಅಧಿಪತಿಯನ್ನಾಗಿ ಮಾಡಿ ಅವರನ್ನು ಕುರಿತು ಹೀಗೆ ಹೇಳಿದನು : ಎಲೈ ಕಪಿನಾಯಕರುಗಳಿರಾ, ನೀವು ದಕ್ಷಿಣ ದಿಕ್ಕಿಗೆ ಹೋಗಬೇಕು. ವಿಂಧ್ಯಪರ್ವತದಲ್ಲಿ ಸೀತಾದೇವಿಯನ್ನೂ ರಾವಣನನ್ನೂ ಅರಸಿನೋಡಿ. ಅಲ್ಲಿಂದ ಮುಂದೆ ದೊಡ್ಡ ಪರ್ವತಗಳಿಂದ ದಾಟುವುದಕ್ಕೆ ದುರ್ಘಟವಾಗಿರುವ ನರ್ಮದಾತೀರಕ್ಕೆ ಹೋಗಿ ಗೋದಾವರಿ ಕೃಷ್ಣವೇಣಿ ಮಹಾನದಿ ವರದ ಮುಂತಾದ ನದಿಗಳ ಬಳಿ ಸೀತಾದೇವಿಯನ್ನು ಹುಡುಕಬೇಕು. ಅನಂತರ ವಿದರ್ಭದೇಶ ಮಾಹಿಷಕದೇಶ ಕಳಿಂಗದೇಶಗಳಲ್ಲಿಯೂ ದಂಡಕಾರಣ್ಯದಲ್ಲಿರುವ ಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ನದೀತೀರಗಳಲ್ಲಿಯೂ ನೋಡಿ.

ಮುಂದುವರಿಯುವುದು...

# ಮಹಿಳೆಯರ ನಿಜವಾದ ಸಬಲೀಕರಣಕ್ಕೆ ಆಧ್ಯಾತ್ಮಿಕ ಸಾಧನೆ ಧರ್ಮಾಚರಣೆ ಅಗತ್ಯ

• ಸೌ. ಭವ್ಯ ಗೌಡ
• ಉದಯವಾಹಿನಿ ವಿಶೇಷ



ಕಳೆದ ಕೆಲವು ವರ್ಷಗಳಿಂದ 'ಸ್ತ್ರೀ-ಮುಕ್ತಿ' ಅಥವಾ 'ಮಹಿಳಾ ಸಬಲೀಕರಣ' ಎಂಬ ವಿಷಯಗಳು ಹೆಚ್ಚು ಚರ್ಚೆಗೆ ಬರುತ್ತಿವೆ. ಹೆಚ್ಚಿನ ಸಂದರ್ಭಗಳಲ್ಲಿ ಈ ಚರ್ಚೆಗಳು ಆಧುನಿಕತೆ ಅಥವಾ ಪಾಶ್ಚಾತ್ಯ ಹಾಗೂ ಭಾರತೀಯ ಸಂಸ್ಕೃತಿ ವಿರೋಧಿ ವಿಚಾರಧಾರೆಗಳ ಪ್ರಭಾವದಿಂದ ನಡೆಯುತ್ತಿರುವುದು ಕಾಣುತ್ತದೆ. 'ಅಸೀಮ ಸ್ವಾತಂತ್ರ್ಯವೇ ನಿಜವಾದ ಮುಕ್ತಿ' ಎಂಬ ತಪ್ಪು ಕಲ್ಪನೆಯನ್ನು ಕೆಲವು ಪ್ರಗತಿಪರರು, ಸಂಸ್ಕೃತಿ ವಿರೋಧಿಗಳು ಹರಡುತ್ತಿರುವುದರಿಂದ ಇಂದು ಅನೇಕ ಮಹಿಳೆಯರು, ಯುವತಿಯರು ದಾರಿತಪ್ಪುವ ಪರಿಸ್ಥಿತಿ ಉಂಟಾಗಿದೆ. ಅವರನ್ನು ನಿಜವಾದ ಪ್ರಗತಿಯ ದಾರಿಯತ್ತ ಕೊಂಡೊಯ್ಯಬೇಕಾದರೆ, ಇಂತಹ ಅಯೋಗ್ಯ ವಿಚಾರಗಳನ್ನು ತಳ್ಳಿಹಾಕಿ ಅವರಿಗೆ ಯೋಗ್ಯ ದಿಕ್ಕು ತೋರಿಸುವ ಅಗತ್ಯವಿದೆ. ಆ ದಿಕ್ಕೇ ಭಾರತೀಯ ಸಂಸ್ಕೃತಿಯ ಅನುಸರಣೆ ಮತ್ತು ಧರ್ಮಾಚರಣೆ. ಸಾಧನೆಯ ಮೂಲಕ ದೊರಕುವ ಆತ್ಮತೇಜಸ್ಸು ವ್ಯಕ್ತಿಯ ವ್ಯಾವಹಾರಿಕ, ಆಧ್ಯಾತ್ಮಿಕ ಉನ್ನತಿಯ ಮಾರ್ಗವನ್ನು ಸುಗಮಗೊಳಿಸುತ್ತದೆ.

**ಹಿಂದೂ ಧರ್ಮದಲ್ಲಿ ಮಹಿಳೆಯ ಸ್ಥಾನ:** ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಮೇಲೆ ಅನೇಕ ನಿರ್ಬಂಧಗಳಿದ್ದವು; ಇತ್ತೀಚೆಗೆ ಶಿಕ್ಷಣ ಪಡೆದ ನಂತರವಷ್ಟೇ ಅವರಿಗೆ ಹಕ್ಕುಗಳು ಸಿಕ್ಕಿವೆ ಎಂಬ ಅಪಪ್ರಚಾರವನ್ನು ಕೆಲವರು ಮಾಡುತ್ತಾರೆ. ಆದರೆ ವಾಸ್ತವವಾಗಿ ಸನಾತನ ಹಿಂದೂ ಧರ್ಮವು ಯಾರಿಗೂ ಅನ್ಯಾಯ ಮಾಡುವುದನ್ನು ಕಲಿಸಿಲ್ಲ. ಬದಲಾಗಿ 'ವಸುಧೈವ ಕುಟುಂಬಕಮ್' ಹಾಗೂ 'ಸರ್ವೇ ಭವಂತು ಸುಖಿನಃ' ಎಂಬ ಮೌಲ್ಯಗಳನ್ನು ಸಾರಿದೆ. ಮನುಸ್ಮೃತಿಯಲ್ಲಿ 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂದು ಹೇಳಲಾಗಿದೆ, ಅಂದರೆ 'ಎಲ್ಲಿ ನಾರಿಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ' ಎಂಬುದು ಇದರ ಅರ್ಥ. ಹಿಂದೂ ಧರ್ಮವು ಸ್ತ್ರೀಯನ್ನು ಭೋಗದ ವಸ್ತುವೆಂದು ಪರಿಗಣಿಸದೆ 'ಆದಿಮಾಯೆ ಶಕ್ತಿ'ಯ ರೂಪವೆಂದು ಗೌರವಿಸಿದೆ. ದೇವತೆಗಳ ಹೆಸರನ್ನು ಉಚ್ಚರಿಸುವಾಗಲೂ ಲಕ್ಷ್ಮೀ-ನಾರಾಯಣ, ಸೀತಾ-ರಾಮ, ಗೌರಿ-ಶಂಕರ ಎಂದು ದೇವಿಯರ ಹೆಸರನ್ನು ಮೊದಲಿಗೆ ಉಚ್ಚರಿಸುವುದು ಇದರ ಉದಾಹರಣೆ. ಹೀಗಾಗಿ ಸ್ತ್ರೀಯರಿಗೆ ಉನ್ನತ ಸ್ಥಾನ ನೀಡಿದ ಧರ್ಮದಲ್ಲಿ 'ಸ್ತ್ರೀ-ಪುರುಷ ಸಮಾನತೆ'ಯ ಬಗ್ಗೆ ಮಾತನಾಡುವುದು ಕೆಲವೊಮ್ಮೆ ಸ್ತ್ರೀಯರ ಮಹತ್ವವನ್ನು ಕಡಿಮೆ ಮಾಡುವಂತಾಗುತ್ತದೆ.

> **ವಿದ್ವಾಂಸರು ಶೂರ ಹಾಗೂ ಕರ್ತವ್ಯನಿಷ್ಠ ಮಹಿಳೆಯರು**
> **ಭಾರತೀಯ ಸಂಸ್ಕೃತಿಯಲ್ಲಿ ಅನೇಕ ವಿದ್ವಾಂಸರು ಮತ್ತು ಶೂರ ಮಹಿಳೆಯರು ಜನಿಸಿದ್ದಾರೆ. ಗಾರ್ಗಿ, ಮೈತ್ರೇಯಿ, ಲೋಪಾಮುದ್ರಾರಂತಹ ವಿದುಷಿಯರು ವೇದ ಮತ್ತು ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ರಾಜಮಾತಾ ಜಿಜಾಬಾಯಿ, ರಾಣಿ ಲಕ್ಷ್ಮೀಬಾಯಿ, ಅಹಲ್ಯಾಬಾಯಿ ಹೋಳ್ಕರ್ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಅವರ ಶೌರ್ಯ, ಧೈರ್ಯ ಮತ್ತು ಆಡಳಿತ ಕೌಶಲ್ಯ ಇತಿಹಾಸದಲ್ಲಿ ಅಜರಾಮರವಾಗಿದೆ. ಹಿಂದೂ ಧರ್ಮವು ಮಹಿಳೆಯರ ಸಾಮರ್ಥ್ಯವನ್ನು ಎಂದಿಗೂ ಕಡಿಮೆ ಮಾಡಿಲ್ಲ. ಇಂದು ಪಾಶ್ಚಾತ್ಯ ಉಡುಪು ಧರಿಸುವುದು ಅಥವಾ ಇಂಗ್ಲಿಷ್ ಮಾತನಾಡುವುದೇ ಪ್ರಗತಿಶೀಲತೆ ಎಂಬ ತಪ್ಪು ಕಲ್ಪನೆ ಬೆಳೆದುಬರುತ್ತಿದೆ. ಆದರೆ ಕುಟುಂಬ ವ್ಯವಸ್ಥೆಯೇ ಭಾರತದ ಶಕ್ತಿಯಾಗಿದ್ದು, ಸ್ತ್ರೀಯು ಅದರ ಬೆನ್ನೆಲುಬಾಗಿದೆ.**

**ಮಹಿಳೆಯರ ಸುರಕ್ಷತೆ:** ಇಂದಿನ ಸಮಾಜದಲ್ಲಿ ಮಹಿಳೆಯರ ಸುರಕ್ಷತೆ ಒಂದು ಪ್ರಮುಖ ಪ್ರಶ್ನೆಯಾಗಿದೆ. 'ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ' ಅಂಕಿಅಂಶಗಳ ಪ್ರಕಾರ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಧರ್ಮಶಿಕ್ಷಣದ ಅಭಾವದಿಂದ ಅನೇಕ ಹಿಂದೂ ಯುವತಿಯರು 'ಲವ್ ಜಿಹಾದ್' ಮುಂತಾದ ಕುಯುಕ್ತಿಗಳಿಗೆ ಬಲಿಯಾಗುತ್ತಿರುವುದು ಕಾಣುತ್ತಿದೆ. ರಾಮರಾಜ್ಯದಲ್ಲಿ ಮಹಿಳೆಯರು ಮಧ್ಯರಾತ್ರಿಯಲ್ಲೂ ನಿರ್ಭಯವಾಗಿ ಸಂಚರಿಸಬಹುದಿತ್ತು. ಛತ್ರಪತಿ ಶಿವಾಜಿ ಮಹಾರಾಜರ ಕಾಲದಲ್ಲಿ ಮಹಿಳೆಯರ ಮೇಲೆ ಕೆಟ್ಟ ದೃಷ್ಟಿ ಬೀರುವವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. ಕೇವಲ ಕಾನೂನುಗಳಿಂದ ಮಾತ್ರ ಸಮಸ್ಯೆಗಳು ಪರಿಹಾರವಾಗುವುದಿಲ್ಲ; ಸಮಾಜದಲ್ಲಿ ಧರ್ಮ ಮತ್ತು ನೈತಿಕ ಮೌಲ್ಯಗಳ ಪ್ರಭಾವ ಹೆಚ್ಚಾಗಬೇಕಾಗಿದೆ. ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಬಲೀಕರಣ ಮಹಿಳೆಯರನ್ನು ನಿಜವಾದ ಅರ್ಥದಲ್ಲಿ ಸಬಲರನ್ನಾಗಿ ಮಾಡಲು ಮೂರು ಮಟ್ಟಗಳಲ್ಲಿ ಪ್ರಯತ್ನಗಳ ಅಗತ್ಯವಿದೆ.

**ದೈಹಿಕ:** ಸ್ವರಕ್ಷಣೆಗಾಗಿ ಕರಾಟೆ ಅಥವಾ ಇತರ ಆತ್ಮರಕ್ಷಣಾ ತರಬೇತಿಗಳನ್ನು ಪಡೆಯುವುದು.

**ಮಾನಸಿಕ:** ಸಂಕಷ್ಟದ ಸಂದರ್ಭಗಳಲ್ಲಿ ಧೈರ್ಯ ಕಳೆದುಕೊಳ್ಳದೆ ಮನೋಬಲವನ್ನು ಬೆಳೆಸಿಕೊಳ್ಳುವುದು.

**ಆಧ್ಯಾತ್ಮಿಕ:** ಸಾಧನೆ ಮತ್ತು ಧರ್ಮಾಚರಣೆಯ ಮೂಲಕ ಆತ್ಮಬಲವನ್ನು ವೃದ್ಧಿಸಿಕೊಳ್ಳುವುದು. ಆಧುನಿಕತೆಯ ಹೆಸರಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಕಡೆಗಣಿಸದೆ, ಕುಂಕುಮ ಧರಿಸುವುದು ಮತ್ತು ಸಾತ್ತ್ವಿಕ ಉಡುಪುಗಳನ್ನು ಧರಿಸುವುದರಿಂದ ಸಾತ್ತ್ವಿಕತೆ ಹೆಚ್ಚುತ್ತದೆ. ಭಕ್ತಿ ಮತ್ತು ಸಾಧನೆಯ ಬಲದಿಂದಲೇ ಸಂತ ಮೀರಾಬಾಯಿಯವರನ್ನು ಶ್ರೀಕೃಷ್ಣನು ರಕ್ಷಿಸಿದನು ಎಂಬುದು ನಮ್ಮ ಸಂಸ್ಕೃತಿಯ ಸಂದೇಶವಾಗಿದೆ. ಆದ್ದರಿಂದ 'ಸಾಧನೆಯ ಮೂಲಕ ಆತ್ಮತೇಜಸ್ಸನ್ನು ಜಾಗೃತಗೊಳಿಸುವುದೇ ನಿಜವಾದ ಸಬಲೀಕರಣ' ಎಂಬುದನ್ನು ಅರಿತು ನಮ್ಮ ಭಕ್ತಿ ಮತ್ತು ಧರ್ಮಾಚರಣೆಯನ್ನು ಹೆಚ್ಚಿಸಿಕೊಳ್ಳೋಣ. ರಾಜಮಾತಾ ಜಿಜಾಬಾಯಿ, ರಾಣಿ ಲಕ್ಷ್ಮೀಬಾಯಿ ಮತ್ತು ಅಹಲ್ಯಾಬಾಯಿ ಹೋಳ್ಕರ್ ಅವರ ಆದರ್ಶಗಳನ್ನು ಅನುಸರಿಸುವುದೇ ಮಹಿಳೆಯರ ನಿಜವಾದ ಉನ್ನತಿಯ ಮಾರ್ಗವಾಗಿದೆ.

## ವಿಜಯದ ಹಾದಿಯಲ್ಲಿ ಭಾರತ
# ವಿಶ್ವಕಪ್ ಕಿರೀಟದತ್ತ ಆತ್ಮವಿಶ್ವಾಸದ ಹೆಜ್ಜೆ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಕ್ರಿಕೆಟ್ ಭಾರತದಲ್ಲಿ ಕೇವಲ ಆಟವಲ್ಲ; ಅದು ಭಾವನೆ, ಅಭಿಮಾನ ಮತ್ತು ರಾಷ್ಟ್ರೀಯ ಹೆಮ್ಮೆಯ ಸಂಕೇತ. ಇತ್ತೀಚೆಗೆ ನಡೆಯುತ್ತಿರುವ ICC Men's T20 World Cup ಟೂರ್ನಿಯಲ್ಲಿ ಭಾರತದ ತಂಡ ಅದ್ಭುತ ಪ್ರದರ್ಶನ ನೀಡುತ್ತಾ ಫೈನಲ್ ಹಂತವನ್ನು ತಲುಪಿರುವುದು ದೇಶದ ಪ್ರತಿಯೊಬ್ಬ ಕ್ರಿಕೆಟ್ ಅಭಿಮಾನಿಗೂ ಅಪಾರ ಸಂತೋಷವನ್ನು ತಂದಿದೆ. ವಿಶೇಷವಾಗಿ ಮೊನ್ನೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ India national cricket team, England cricket team ನಡುವಿನ ಕಾದಾಟ ಕ್ರಿಕೆಟ್ ಪ್ರೇಮಿಗಳ ಹೃದಯವನ್ನು ರೋಮಾಂಚನಗೊಳಿಸಿತು.

ಸೆಮಿಫೈನಲ್ ಪಂದ್ಯವು ಆರಂಭದಿಂದಲೇ ಉತ್ಕಂಠೆಯಿಂದ ಕೂಡಿತ್ತು. ಇಂಗ್ಲೆಂಡ್ ತಂಡವು ಸದಾ ಬಲಿಷ್ಠ ತಂಡವೆಂದು ಪರಿಗಣಿಸಲಾಗುತ್ತದೆ. ವೇಗದ ಬೌಲಿಂಗ್, ಶಕ್ತಿಶಾಲಿ ಬ್ಯಾಟಿಂಗ್ ಮತ್ತು ಅನುಭವಿಗಳಾದ ಆಟಗಾರರೊಂದಿಗೆ ಅವರು ಯಾವುದೇ ತಂಡಕ್ಕೂ ಸವಾಲಾಗುತ್ತಾರೆ. ಆದರೆ ಈ ಬಾರಿ ಭಾರತ ತಂಡವು ಅದ್ಭುತ ಯೋಜನೆ, ಆತ್ಮವಿಶ್ವಾಸದೊಂದಿಗೆ ಮೈದಾನಕ್ಕಿಳಿದಿತು. ಭಾರತದ ಬೌಲರ್‌ಗಳು ಶಿಸ್ತುಬದ್ಧ ಬೌಲಿಂಗ್ ಮಾಡಿ ಇಂಗ್ಲೆಂಡ್ ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳನ್ನು ಬೇಗನೇ ಪೆವಿಲಿಯನ್‌ಗೆ ಕಳುಹಿಸಿದರು. ಇದರಿಂದ ಪಂದ್ಯದಲ್ಲಿ ಭಾರತದ ಹಿಡಿತ ಗಟ್ಟಿಯಾಗಿ ಕಂಡುಬಂತು.

ಬ್ಯಾಟಿಂಗ್‌ನಲ್ಲಿ ಭಾರತೀಯ ಆಟಗಾರರು ಸಮಾಧಾನದಿಂದ ಹಾಗೂ ಜವಾಬ್ದಾರಿಯಿಂದ ಆಟವಾಡಿದರು. ಆರಂಭಿಕ ಆಟಗಾರರು ತಂಡಕ್ಕೆ ಉತ್ತಮ ಆರಂಭವನ್ನು ನೀಡಿದರೆ, ಮಧ್ಯಮ ಕ್ರಮದ ಬ್ಯಾಟ್ಸ್‌ಮನ್‌ಗಳು ತಂಡದ ಮೊತ್ತವನ್ನು ಬಲಪಡಿಸಿದರು. ಪ್ರತಿಯೊಂದು ರನ್ ಕೂಡ ಅಭಿಮಾನಿಗಳಿಗೆ ಹರ್ಷದ ಕ್ಷಣವಾಗಿತ್ತು. ಆಟಗಾರರ ನಡುವಿನ ಒಗ್ಗಟ್ಟು ಮತ್ತು ಆತ್ಮವಿಶ್ವಾಸ ಭಾರತ ತಂಡವನ್ನು ಗೆಲುವಿನತ್ತ ಕೊಂಡೊಯ್ದಿತು. ಅಂತಿಮವಾಗಿ ಭಾರತ ತಂಡವು ಭರ್ಜರಿ ಜಯ ಸಾಧಿಸಿ ಫೈನಲ್‌ಗೆ ಪ್ರವೇಶಿಸಿತು. ಈ ವಿಜಯವು ಕೇವಲ ಒಂದು ಪಂದ್ಯದಲ್ಲಿ ಪಡೆದ ಜಯವಲ್ಲ; ಅದು ಭಾರತೀಯ ಕ್ರಿಕೆಟ್ ತಂಡದ ಶ್ರಮ, ಪರಿಶ್ರಮ ಮತ್ತು ದೃಢ ಸಂಕಲ್ಪದ ಪ್ರತಿಫಲವಾಗಿದೆ.

ಈ ಗೆಲುವಿನ ನಂತರ ದೇಶದಾದ್ಯಂತ ವಿಜಯೋತ್ಸವದ ವಾತಾವರಣ ನಿರ್ಮಾಣವಾಯಿತು. ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ, ಮನೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಂತೋಷವನ್ನು ಹಂಚಿಕೊಂಡರು. ಕ್ರಿಕೆಟ್ ಅಭಿಮಾನಿಗಳು ತಮ್ಮ ತಂಡದ ಮೇಲೆ ಅಪಾರ ಪ್ರೀತಿ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದರು. ಈ ಜಯವು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಹೆಮ್ಮೆಯ ಭಾವನೆ ಮೂಡಿಸಿತು.



ಇದೀಗ ಎಲ್ಲರ ಕಣ್ಣುಗಳು ಇಂದು ನಡೆಯಲಿರುವ ಫೈನಲ್ ಪಂದ್ಯತ್ತ ಕೇಂದ್ರೀಕರಿಸಿವೆ. ಭಾನುವಾರ ನಡೆಯಲಿರುವ ಈ ಮಹತ್ವದ ಪಂದ್ಯದಲ್ಲಿ ಭಾರತ ತಂಡ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಬೇಕಾಗಿದೆ. ಫೈನಲ್ ಪಂದ್ಯ ಎಂದರೆ ಒತ್ತಡ ಮತ್ತು ಸವಾಲಿನ ಸಮರ. ಆದರೆ ಭಾರತೀಯ ಆಟಗಾರರ ಪ್ರತಿಭೆ, ಅನುಭವ ಮತ್ತು ಸಮನ್ವಯತೆಯನ್ನು ಗಮನಿಸಿದರೆ ಭಾರತ ತಂಡ ಮತ್ತೊಂದು ಐತಿಹಾಸಿಕ ಸಾಧನೆ ಮಾಡಲು ಸಂಪೂರ್ಣ ಸಿದ್ಧವಾಗಿದೆ ಎಂಬ ವಿಶ್ವಾಸ ಎಲ್ಲರಲ್ಲೂ ಇದೆ.

ಭಾರತೀಯ ಕ್ರಿಕೆಟ್ ತಂಡದ ಆಟಗಾರರು ಕೇವಲ ತಮ್ಮಿಗಾಗಿ ಮಾತ್ರವಲ್ಲ, ಕೋಟಿ ಕೋಟಿ ಅಭಿಮಾನಿಗಳ ಕನಸಿಗಾಗಿ ಮೈದಾನಕ್ಕಿಳಿಯುತ್ತಾರೆ. ಅವರ ಪ್ರತಿಯೊಂದು ರನ್, ಪ್ರತಿಯೊಂದು ವಿಕೆಟ್ ದೇಶದ ಹೆಮ್ಮೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಫೈನಲ್ ಪಂದ್ಯದಲ್ಲಿ ಅವರು ಧೈರ್ಯ, ಏಕಾಗ್ರತೆ ಮತ್ತು ತಂಡದ ಒಗ್ಗಟ್ಟಿನೊಂದಿಗೆ ಆಡಿದರೆ ಜಯ ಖಂಡಿತವಾಗಿ ಭಾರತದ ಪಾಲಾಗಲಿದೆ. ಇಂದು ಫೈನಲ್ ಪಂದ್ಯದಲ್ಲಿ ಭಾರತ ತಂಡ ಅದ್ಭುತ ಪ್ರದರ್ಶನ ನೀಡಿ ವಿಶ್ವಕಪ್ ಕಿರೀಟವನ್ನು ತಮ್ಮದಾಗಿಸಲಿ ಎಂಬುದು ಪ್ರತಿಯೊಬ್ಬ ಭಾರತೀಯನ ಹಾರೈಕೆ. ದೇಶದ ಪ್ರತಿಯೊಬ್ಬ ಅಭಿಮಾನಿಯ ಆಶೀರ್ವಾದ ಮತ್ತು ಬೆಂಬಲ ಭಾರತೀಯ ತಂಡದ ಜೊತೆ ಇದೆ.

**ಭಾರತ ತಂಡಕ್ಕೆ ಹಾರ್ದಿಕ ಶುಭಾಶಯಗಳು ಜಯ ಭಾರತ**

# ಸ್ತ್ರೀ ಶಕ್ತಿ

• ಡಾ|| ರಶ್ಮಿ ಚಂದ್ರಶೇಖರ್

ವಿಶ್ವ ಮಹಿಳಾ ದಿನ ಮಾರ್ಚ್ 8 ಪ್ರತಿ ವರ್ಷ ಎಲ್ಲೆಲ್ಲೂ ಸಂಭ್ರಮದ ವಾತಾವರಣ ಮಹಿಳೆಯರಿಗೆ ಎಲ್ಲಿಲ್ಲದ ಮಾನ್ಯತೆ ತಾಯಿ, ಮಡದಿ, ಮಗಳು, ಅಕ್ಕ-ತಂಗಿ , ಸಹೋದ್ಯೋಗಿ, ಸ್ನೇಹಿತೆ ಹೀಗೆ ಎಲ್ಲಾ ಪಾತ್ರದಲ್ಲಿಯೂ ಮಹಿಳೆಯರಿಗೆ ಶುಭಾಶಯಗಳು ಮಹಾಪೂರ...! 2026ರ ವಿಶ್ವ ಮಹಿಳಾ ದಿನಾಚರಣೆಯ ವಿಷಯ ಮಹಿಳಾ ಹಕ್ಕು ನ್ಯಾಯ ಹಾಗೂ ಕ್ರಮ ಮಹಿಳೆಯರ ವಿರುದ್ಧ ನಡೆಯುವ ಅನ್ಯಾಯ, ಅತ್ಯಾಚಾರ, ಅಕ್ರಮ, ದ್ರೋಹ ಇವೆಲ್ಲವುಗಳ ವಿರುದ್ಧ ಧ್ವನಿ ಎತ್ತಲು ಮತ್ತೊಂದು ಸಂದರ್ಭ ನಿತ್ಯ ದಿನಪತ್ರಿಕೆಗಳಲ್ಲಿ ದೂರದರ್ಶನದಲ್ಲಿ ನೆರೆಹೊರೆಯಲ್ಲಿ ಪರಿಚಯದವರಲ್ಲಿ ಕೇಳಿ ಬರುವ ಮಹಿಳೆಯರ ವಿರುದ್ಧದ ದೌರ್ಜನ್ಯ, ದಬ್ಬಾಳಿಕೆ ಪ್ರಕರಣಗಳನ್ನು ನಾವು ಕಾಣುತ್ತಲೇ ಬಂದಿದ್ದೇವೆ, ಆದರೆ ಮಹಿಳೆ ಅಬಲೆಯಲ್ಲ ಸಬಲೆ ಎಂದು ಘೋಷಿಸಿಕೊಳ್ಳುವ ನಾವು ಇಂತಹ ಪ್ರಕರಣಗಳಲ್ಲಿ ಸಿಲುಕಿಕೊಳ್ಳಲು ಕಾರಣವೇನು ಇದು ನಮ್ಮ ಅರಿವಿನ ಕೊರತೆಯೇ? ಭಾವನಾತ್ಮಕತೆಯ ಫಲವೇ? ಆತುರದ ನಿರ್ಧಾರಗಳ ಪ್ರತಿಫಲವೇ? ಭಯ,ಆತಂಕ ಇದಕ್ಕೆ ಕಾರಣವೇ? ಅಂಜುಬುರುಕುತನ ಹಿಂಜರಿಕೆ? ಹೆಣ್ಣೆಂದರೆ ಹೀಗೆ ಇರಬೇಕು ಎಂದು ನಾವೇ ನಂಬಿಕೊಂಡಿರುವ ನಮ್ಮ ಗ್ರಹಿಕೆಯೇ? ಕಾನೂನು, ಸಂವಿಧಾನ,ನ್ಯಾಯಾಂಗ ಎಲ್ಲವೂ ಮಹಿಳೆ ಹಾಗೂ ಪುರುಷರಿಗೆ ಸಮಾನವಾದ ಹಕ್ಕು, ಭದ್ರತೆಯನ್ನು ಸಾರಿವೆ. ಆದರೆ ಅದನ್ನು ಅನುಷ್ಠಾನಗೊಳಿಸುವಲ್ಲಿ ನಮ್ಮ ಸಮಾಜ ವ್ಯವಸ್ಥೆ ತಪ್ಪಿದಾಗ ನಿಗದಿತವಾಗಿ ಶಿಕ್ಷಿಸಬೇಕೆ ಹೊರತು ಸಮಗ್ರವಾಗಿ ದೂರುವುದು ಸಮಂಜಸವಲ್ಲ. ಮಹಿಳೆ ತಾನು ಇರುವ ಸ್ಥಳವನ್ನು ತನ್ನವರನ್ನು ಇತರರನ್ನು ಬಹಳ ಕೌಶಲ್ಯದಿಂದ ಸರಿದೂಗಿಸಬಲ್ಲಳು, ಇರುವ ನೋವನ್ನು ಮರೆಮಾಚಿ ಮಂದಹಾಸ ಬೀರುವ ಶಕ್ತಿ ಅವಳಿಗೆ ಅಲ್ಲದೆ ಇನ್ಯಾರಿಗಿದೆ. ಸ್ತ್ರೀಯರು ತಮ್ಮ ಮೇಲಾಗುವ ದೌರ್ಜನ್ಯದ ವಿರುದ್ಧ ಎಂದು ಸ್ವತಹ ಧ್ವನಿ ಎತ್ತಿ ನಿಲ್ಲುವರೂ, ಸ್ವಾಭಿಮಾನದ ಬದುಕು ಕಟ್ಟಿಕೊಂಡು ಸಂವೇಗಾತ್ಮಕ ಸಮತೋಲನ ಕಾಯ್ದುಕೊಳ್ಳುವರೂ, ತನ್ನ ಒಳಿತಿಗಾಗಿ ತನ್ನನ್ನು ತಾನು ಮೊದಲ ಆದ್ಯತೆಯನ್ನಾಗಿ ಪರಗಣಿಸುವವರೂ, ಅಂದು ಮಹಿಳಾ ಸಬಲೀಕರಣಕ್ಕೆ ನಿಜವಾದ ಅರ್ಥ ಬಂದಂತಾಗುವುದು. ವಿಶ್ವಮಹಿಳಾ ದಿನಾಚರಣೆಯಂದು ಎಲ್ಲಾ ಮಹಿಳೆಯರು ತಮ್ಮಲ್ಲಿರುವ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಜಾಗೃತಿಗೊಳಿಸಿಕೊಳ್ಳಲಿ ಎಂಬುದೇ ನಮ್ಮ ಸದಾಶಯ



ಉದಯವಾಹಿನಿ ಚಿತ್ರ

**ಅಪರೂಪಕ್ಕೆ ಕೂದಲು ಉದುರುವಿಕೆ ಸಮಸ್ಯೆ ಕಾಣಿಸಿಕೊಂಡರೆ, ಅದು ಸಾಮಾನ್ಯ. ಆದಾಗ್ಯೂ, ದಿನಕ್ಕೆ 100ಕ್ಕೂ ಹೆಚ್ಚು ಕೂದಲುಗಳು ಉದುರುತ್ತಿದ್ದರೆ, ಅದು ಕಳವಳಕ್ಕೆ ಕಾರಣವಾಗ ಬಹುದು. ನಿರಂತರ ಕೂದಲು ಉದುರುವಿಕೆ ಕ್ಯಾಲ್ಸಿಯಂ ಕೊರತೆಯಿಂದಾಗಿರಬಹುದು ಎಂದು ತಜ್ಞರು ಹೇಳುತ್ತಾರೆ.**

# ಮೂಳೆ ಮತ್ತು ಹಲ್ಲುಗಳಿಗೆ ಅಗತ್ಯವಾದ ಕ್ಯಾಲ್ಸಿಯಂ ಕೊರತೆಯಾದರೂ ಕೂದಲು ಉದುರುತ್ತಾ?

ಇಂದಿನ ದಿನಗಳಲ್ಲಿ ಬಹಳಷ್ಟು ಜನರಲ್ಲಿ ಕೂದಲು ಉದುರುವಿಕೆ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅತಿಯಾದ ಒತ್ತಡ, ಹಾರ್ಮೋನ್ ಬದಲಾವಣೆಗಳು, ಪೌಷ್ಟಿಕಾಂಶದ ಕೊರತೆ ಉದಾಹರಣೆಗೆ ಬಯೋಟಿನ್, ಸತು, ವಿಟಮಿನ್ ಡಿ, ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಕೊರತೆ ಅಥವಾ ಆನುವಂಶಿಕ ಕಾರಣಗಳಿಂದ ಉಂಟಾಗುತ್ತದೆ. ಇನ್ನು ನಮ್ಮಲ್ಲಿ ಬಹುತೇಕ ಜನರ ಅಭಿಪ್ರಾಯಗಳು ಏನೆಂದರೆ, ಕೂದಲು ಉದುರುವಿಕೆಗೆ ಬಯೋಟಿನ್ ಅಥವಾ ವಿಟಮಿನ್ ಬಿ 12 ಕೊರತೆಯೇ ಕಾರಣ ಎಂದು ಅಂದುಕೊಂಡಿರುತ್ತಾರೆ. ಆದರೆ ತಜ್ಞರ ಅಭಿಪ್ರಾಯ ಏನೆಂದರೆ ಮೂಳೆಗಳು ಮತ್ತು ಹಲ್ಲುಗಳಿಗೆ ಅಗತ್ಯವಾದ ಕ್ಯಾಲ್ಸಿಯಂ ಕೊರತೆಯು ಕೂಡ ಕೂದಲು ಉದುರುವಿಕೆಗೆ ಕಾರಣವಾಗುವ ಸಾಧ್ಯತೆಗಳು ಇರುತ್ತವೆ ಯಂತೆ ಆದ್ದರಿಂದ, ದೇಹದಲ್ಲಿ ಕ್ಯಾಲ್ಸಿಯಂ ಮಟ್ಟ ಕೂಡ ಕಡಿಮೆಯಾಗದಂತೆ ನೋಡಿಕೊಳ್ಳಬೇಕು.

**ಈ ಬಗ್ಗೆ ಆಯುರ್ವೇದ ತಜ್ಞರು ಹೇಳುವುದೇನು?:** ಅಪೊಲೊ ಆಯುರ್ವೈಡ್ ಡಾ. ಪಿ. ಸರಿತಾ ನಾಯರ್ ಅವರು ಹೇಳುವ ಪ್ರಕಾರ, ದೇಹದಲ್ಲಿ ಕ್ಯಾಲ್ಸಿಯಂ ಕೊರತೆ ಕಾಣಿಸಿಕೊಂಡರೂ ಕೂಡ ಕೂದಲು ಉದುರುವಿಕೆಗೆ ಕಾರಣವಾಗಬಹುದು, ಆದರೂ ಇದು ವಿರಳವಾಗಿ ಪ್ರಾಥಮಿಕ ಕಾರಣವಾಗಿದೆ. ಕೂದಲು ಕೋಶಕ ಕೋಶ ವಿಭಜನೆ, ಹಾರ್ಮೋನು ಗಳ ನಿಯಂತ್ರಣ ಮತ್ತು ವಿಟಮಿನ್ ಡಿ ಚಯಾಪಚಯ ಕ್ರಿಯೆಯಲ್ಲಿ ಕ್ಯಾಲ್ಸಿಯಂ ಪ್ರಮುಖ ಪಾತ್ರ ವಹಿಸುತ್ತದೆ, ಇವೆಲ್ಲವೂ ಆರೋಗ್ಯಕರ ಕೂದಲು ಬೆಳವಣಿಗೆಗೆ ಅವಶ್ಯಕವಾಗಿದೆ. ತೀವ್ರ ಕೊರತೆಯು ಕೂದಲಿನ ಬೇರುಗಳನ್ನು ದುರ್ಬಲಗೊಳಿಸುತ್ತದೆ, ಕೂದಲು ಉದುರುವಿಕೆಯನ್ನು ವೇಗಗೊಳಿಸುತ್ತದೆ ಮತ್ತು ಸುಲಭವಾಗಿ ಉಗುರುಗಳನ್ನು





ಉಂಟುಮಾಡುತ್ತದೆ.

ಸ್ನಾಯು ಸೆಳೆತ, ಮೂಳೆ ನೋವು ಮತ್ತು ಸುಲಭವಾಗಿ ಉಗುರುಗಳಂತಹ ಲಕ್ಷಣಗಳು ಮುಂದುವರಿದಾಗ, ಕ್ಯಾಲ್ಸಿಯಂ ಕೊರತೆಯನ್ನು ಬಲವಾಗಿ ಶಂಕಿಸಬೇಕು, ಈ ಕೊರತೆಯನ್ನು ಸರಿಪಡಿಸದೆ ಬಿಟ್ಟರೆ, ಅಂತಿಮವಾಗಿ ಕೂದಲಿನ ಬೇರಿನ ಬಲವನ್ನು ದುರ್ಬಲಗೊಳಿಸುತ್ತದೆ ಮತ್ತು ಕೂದಲು ಉದುರುವಿಕೆಯನ್ನು ವೇಗಗೊಳಿಸುತ್ತದೆ.

**ಆಯುರ್ವೇದದ ಪ್ರಕಾರ:** ಆಯುರ್ವೇದದಲ್ಲಿ, ಈ ಸ್ಥಿತಿಯು ಅಸ್ಥಿಧಾತು ಕ್ಷಯದೊಂದಿಗೆ ಸಂಬಂಧ ಹೊಂದಿದೆ, ಅಸ್ಥಿಧಾತು ಎಂದರೆ ಆಯುರ್ವೇದದ ಸಪ್ತ ಧಾತು ಗಳಲ್ಲಿ ಐದನೆಯದಾಗಿದ್ದು, ಶರೀರಕ್ಕೆ ಆಧಾರವಾಗಿರುವ ಮೂಳೆಗಳು ಮತ್ತು ಕಾರ್ಟಿಲೆಜ್‌ಗಳನ್ನು ಸೂಚಿಸುತ್ತದೆ.

ಅಂದರೆ ಮೂಳೆ ಅಂಗಾಂಶಗಳ ಸವಕಳಿ. ಈ ಅಸಮತೋಲನವನ್ನು ಪರಿಣಾಮ ಕಾರಿಯಾಗಿ ಪುನಃಸ್ಥಾಪಿಸಲು ಅಸ್ಥಿ-ಪೋಷಕ ಸೂತ್ರೀಕರಣಗಳಾದ ಕ್ಷೀರಪಾಕ ಸಿದ್ಧತೆಗಳು, ಚ್ಯವನಪ್ರಾಶಂ, ಪ್ರವಾಲ ಭಸ್ಮ ಮತ್ತು ಭೃಂಗರಾಜಸವವನ್ನು ಸಾಂಪ್ರದಾಯಿಕವಾಗಿ ಶಿಫಾರಸು ಮಾಡಲಾಗುತ್ತದೆ.

ತಿಲ ಅಭ್ಯಂಗಂ, ನಸ್ಯ, ಶಿರೋ ಅಭ್ಯಂಗ ಮತ್ತು ಕ್ಷೀರಧಾರ ಸೇರಿದಂತೆ ಚಿಕಿತ್ಸಕ ಚಿಕಿತ್ಸೆಗಳು ಕೂದಲಿನ ಬೇರುಗಳನ್ನು ಬಲಪಡಿಸಲು, ನೆತ್ತಿಯನ್ನು ಪೋಷಿಸಲು ಮತ್ತು ಕೂದಲು ಉದುರುವಿಕೆಯಲ್ಲಿ ಒಳಗೊಂಡಿರುವ ದೋಷಗಳನ್ನು ಸಮ ತೋಲನಗೊಳಿಸಲು ಸಹಾಯ ಮಾಡುತ್ತದೆ.

> **ಕ್ಯಾಲ್ಸಿಯಂ ಸಮೃದ್ಧ ಆಹಾರವನ್ನು ಸೇವಿಸಿ**
> **ವಯಸ್ಕರಿಗೆ ಪ್ರತಿದಿನ 700 ಮಿಗ್ರಾಂ ಕ್ಯಾಲ್ಸಿಯಂ ಅಗತ್ಯವಿದೆ ಎಂದು ತಜ್ಞರು ಹೇಳುತ್ತಾರೆ. ಆದಾಗ್ಯೂ, ಕೊರತೆಯಿದ್ದರೆ, ಆರೋಗ್ಯ ತಜ್ಞರು ಪೂರಕಗಳನ್ನು ಸೂಚಿಸಬಹುದು. ಈ ಕ್ಯಾಲ್ಸಿಯಂ ಕೊರತೆಯನ್ನು ನೀಗಿಸಲು ಯಾವ ಆಹಾರ ವನ್ನು ಸೇವಿಸಬೇಕೆಂದು ನೋಡುವುದಾದರೆ...ಡೈರಿ ಉತ್ಪನ್ನಗಳು - ದೇಹದಲ್ಲಿನ ಕ್ಯಾಲ್ಸಿಯಂ ಕೊರತೆಯನ್ನು ನೀಗಿಸಲು, ಹಾಲು, ಮೊಸರು, ಚೀಸ್ ಮತ್ತು ಮಜ್ಜಿಗೆಯಂತಹ ಡೈರಿ ಉತ್ಪನ್ನಗಳನ್ನು ನಿಮ್ಮ ಆಹಾರದಲ್ಲಿ ಸೇರಿಸಿ. ಹಸಿರು ತರಕಾರಿಗಳು - ಹಸಿರು ಎಲೆಗಳ ತರಕಾರಿಗಳು ಕ್ಯಾಲ್ಸಿಯಂನಲ್ಲಿ ಸಮೃದ್ಧ ವಾಗಿವೆ. ಪಾಲಕ್, ಮೆಂತ್ಯ ಮತ್ತು ಬಾತುವಾ ಮುಂತಾದ ಹಸಿರು ತರಕಾರಿಗಳನ್ನು ನಿಮ್ಮ ಆಹಾರದಲ್ಲಿ ಸೇರಿಸಿ. ಇದು ಕ್ಯಾಲ್ಸಿಯಂ ಕೊರತೆಯನ್ನು ಸಹ ತಡೆಯುತ್ತದೆ.**

ರಸಾಯನ ಸಿದ್ಧತೆಗಳು ಆಳವಾದ ಅಂಗಾಂಶ ಪುನರ್ಯೌವನಗೊಳಿಸುವಿಕೆ ಮತ್ತು ದೀರ್ಘಕಾಲೀನ ಕೂದಲಿನ ಆರೋಗ್ಯವನ್ನು ಬೆಂಬಲಿಸುತ್ತವೆ. ಸಾಕಷ್ಟು, ಗುಣಮಟ್ಟದ ನಿದ್ರೆ ಒಟ್ಟಾರೆ ಕೂದಲಿನ ಆರೋಗ್ಯಕ್ಕೆ ಅಡಿಪಾಯದ ಆಧಾರಸ್ತಂಭವಾಗಿದೆ, ಇದು ಹಾರ್ಮೋನುಗಳ ಸಾಮರಸ್ಯವನ್ನು ನಿಯಂತ್ರಿಸುತ್ತದೆ ಮತ್ತು ಕ್ಯಾಲ್ಸಿಯಂ ಚಯಾಪಚಯವನ್ನು ಉತ್ತಮ ಗೊಳಿಸುತ್ತದೆ, ಇವೆರಡೂ ಬಲವಾದ ಕೂದಲು ಬೇರುಗಳನ್ನು ಕಾಪಾಡಿಕೊಳ್ಳಲು ಮತ್ತು ಅತಿಯಾದ ಕೂದಲು ಉದುರುವಿಕೆಯನ್ನು ತಡೆಯಲು ನಿರ್ಣಾಯಕವಾಗಿವೆ.

**ಕ್ಯಾಲ್ಸಿಯಂ ಬಗ್ಗೆ ಹೇಳುವುದಾದರೆ:** ಕ್ಯಾಲ್ಸಿಯಂ ನಮ್ಮ ಕೂದಲಿನ ಕೋಶಗಳನ್ನು ಪೋಷಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಕ್ಯಾಲ್ಸಿಯಂ ಕೊರತೆಯು ಕೂದಲಿನ ಬೇರುಗಳನ್ನು ದುರ್ಬಲ ಗೊಳಿಸುತ್ತದೆ.

ಕ್ಯಾಲ್ಸಿಯಂ ದೇಹವು ಕಾಲಜನ್ ಉತ್ಪಾದಿಸಲು ಸಹಾಯ ಮಾಡುತ್ತದೆ ಎಂದು ತಜ್ಞರು ಹೇಳುತ್ತಾರೆ. ಕ್ಯಾಲ್ಸಿಯಂ ಕೊರತೆಯು ನೆತ್ತಿಯ ಚರ್ಮವನ್ನು ಒಣಗಿಸಲು ಕಾರಣವಾಗಬಹುದು.

ಈ ಬಗ್ಗೆ ತಜ್ಞರು ಕೂಡ ಹೇಳುವ ಪ್ರಕಾರ ಕ್ಯಾಲ್ಸಿಯಂ ಕೂದಲಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಪೋಷಕಾಂಶಗಳಲ್ಲಿ ಒಂದಾಗಿದೆ. ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯಿದ್ದಾಗ, ಕೂದಲು ಕಿರುಚೀಲಗಳು ಪರಿಣಾಮ ಬೀರುತ್ತವೆ. ಇದು ಕೂದಲಿನ ಬೆಳವಣಿಗೆ ಮತ್ತು ಕೂದಲು ಉದುರುವಿಕೆ ನಿಧಾನಕ್ಕೆ ಕಾರಣವಾಗಬಹುದು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಕಿರಿಕಿರಿ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತಂದರೂ ಒಬ್ಬ ಸ್ನೇಹಿತರು ನಿಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಪಾರವಾದ ಸಹಾಯ ಮಾಡುತ್ತಾರೆ. ಒತ್ತಡ ತೊಡೆದುಹಾಕಲು ಹಿತವಾದ ಸಂಗೀತವನ್ನು ಆಲಿಸಿ.

**ವೃಷಭ** ನೀವು ಇತರರೊಡನೆ ನಿಮ್ಮ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ.

**ಮಿಥುನ** ಕೆಲಸದಲ್ಲಿ ಹಿರಿಯರಿಂದ ಒತ್ತಡ, ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.

**ಕರ್ಕಾಟಕ** ಜಾಗ್ರತೆಯ ನಡವಳಿಕೆಗಳಿರಬಹುದಾದ ಒಂದು ದಿನ - ಇಲ್ಲಿ ನಿಮ್ಮ ಮನಸ್ಸಿಗಿಂತ ನಿಮ್ಮ ಹೃದಯದ ಅಗತ್ಯ ಹೆಚ್ಚಿರುತ್ತದೆ. ನಿಮ್ಮ ಸಂಗಾತಿಯ ಒರಟು ವರ್ತನೆ ನಿಮ್ಮ ಮೇಲೆ ಒತ್ತಡ ಹಾಕಬಹುದು.

**ಸಿಂಹ** ಮನರಂಜನೆ ಮತ್ತು ಮೋಜಿನ ಒಂದು ದಿನ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಕುಟುಂಬದ ಸದಸ್ಯರೊಂದಿಗೆ ಸಾಮಾಜಿಕ ಕೂಟ ಎಲ್ಲರನ್ನೂ ಒಳ್ಳೆಯ ಚಿತ್ತದಲ್ಲಿಡುತ್ತದೆ.

**ಕನ್ಯಾ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು.

**ತುಲಾ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು.

**ವೃಶ್ಚಿಕ** ನಿಮ್ಮ ಪ್ರೀತಿಪಾತ್ರರೊಡನೆ ವೈಯಕ್ತಿಕ ಭಾವನೆಗಳು / ರಹಸ್ಯಗಳನ್ನು ಹಂಚಿಕೊಳ್ಳಲು ಇದು ಸರಿಯಾದ ಸಮಯವಲ್ಲ. ಜೀವನದ ಪ್ರಕ್ಷುಬ್ಧತೆಯ ಮಧ್ಯೆ, ನಿಮ್ಮ ಮಕ್ಕಳಿಗಾಗಿ ಸಮಯವನ್ನು ತೆಗೆದುಕೊಳ್ಳುತ್ತೀರಿ.

**ಧನಸ್ಸು** ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ನಿಮ್ಮ ಸ್ನೇಹಿತರೊಬ್ಬರು ಇಂದು ದೊಡ್ಡ ಸಾಲವನ್ನು ಕೇಳಬಹುದು.

**ಮಕರ** ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.

**ಕುಂಭ** ನಿಮ್ಮನ್ನು ಫಿಟ್ ಆಗಿ, ಚೆನ್ನಾಗಿರಿಸಿಕೊಳ್ಳಲು ಹೆಚ್ಚಿನ ಕ್ಯಾಲೊರಿಯ ಆಹಾರವನ್ನು ತಪ್ಪಿಸಿ ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಕುಟುಂಬದ ಸಲುವಾಗಿ ಏನಾದರೂ ಉಪಯುಕ್ತವಾದದ್ದರ ಸಲುವಾಗಿ ಶ್ರಮಪಡಿ.

**ಮೀನ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಇಂದು ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ ಇದೆ.

● ಸಿದ್ದು ಸರಕಾರ ಕರಾವಳಿ ಜಿಲ್ಲೆಗಳ ಮೇಲೆ ರಾಜಕೀಯ ಮುನಿಸನ್ನು ಬಜೆಟ್‌ನಲ್ಲಿ ತೋರಿಸುವಂತಿದೆ

# ಬಜೆಟ್‌ನಲ್ಲಿ ಗ್ರೇಟರ್ ಮಂಗಳೂರು ಕನಸುಗಳೇ ಇಲ್ಲ!

• ಉದಯವಾಹಿನಿ ಮಂಗಳೂರು

ರಾಜ್ಯದ 2026-27ನೇ ಸಾಲಿನ ಬಜೆಟ್‌ನ್ನು ಸಿಎಂ ಸಿದ್ದರಾಮಯ್ಯ ಮಂಡನೆ ಮಾಡಿದ್ದು, ಇಡೀ ಬಜೆಟ್‌ನಲ್ಲಿ ರಾಜ್ಯದ ಬೊಕ್ಕಸಕ್ಕೆ 2ನೇ ಅತೀ ದೊಡ್ಡ ತೆರಿಗೆ ಸಂದಾಯ ಮಾಡುವ ಮಂಗಳೂರನ್ನು ನಿರ್ಲಕ್ಷ್ಯ ಮಾಡಲಾಗಿದೆ. ಗ್ರೇಟರ್ ಬೆಂಗಳೂರು ಮಾದರಿಯ ಯೋಜನೆ ಮಂಗಳೂರಿಗಿಲ್ಲ. ಈ ಮೂಲಕ ಪರೋಕ್ಷವಾಗಿ ಸಿದ್ದು ಸರಕಾರ ಕರಾವಳಿ ಜಿಲ್ಲೆಗಳ ಮೇಲೆ ರಾಜಕೀಯ ಮುನಿಸನ್ನು ಬಜೆಟ್‌ನಲ್ಲಿ ತೋರಿಸುವಂತಿದೆ.

**ರಾಜ್ಯದ 2ನೇ ಹಂತದ ನಗರದ ನಿರ್ಲಕ್ಷ್ಯ**

ಕೇಂದ್ರ ಬಜೆಟ್‌ನಲ್ಲಿ ನಿರೀಕ್ಷೆಯ ಯೋಜನೆಗಳು ಘೋಷಣೆಯಾದ ಕಾರಣ ಕರಾವಳಿ ಜನತೆಗೆ ರಾಜ್ಯ ಬಜೆಟ್ ಮೇಲೆ ಭಾರಿ ನಿರೀಕ್ಷೆಗಳಿದ್ದವು. ಅದರಲ್ಲೂ ಐಟಿ ಕ್ಷೇತ್ರದಲ್ಲಿ ಹೂಡಿಕೆ, ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೊಸ ಹೊಸ ಯೋಜನೆಗಳು, ಮೀನುಗಾರಿಕೆ, ಕೃಷಿ ಕ್ಷೇತ್ರಕ್ಕೆ ಉತ್ತೇಜನ, ಆರೋಗ್ಯ ಕ್ಷೇತ್ರದಲ್ಲಿ ಭಾರಿ ನಿರೀಕ್ಷೆಯನ್ನು ಇಡಲಾಗಿತ್ತು. ಆದರೆ ಕರಾವಳಿಗೆ ಅನಿವಾರ್ಯವಾಗಿ ನೀಡಲೇಬೇಕಾದ ಮೀನುಗಾರಿಕೆ, ಪ್ರವಾಸೋದ್ಯಮಕ್ಕೆ ಯೋಜನೆಗಳನ್ನು ಘೋಷಣೆ ಮಾಡಿದ್ದೂ ಬಿಟ್ಟರೆ ಮತ್ತೇನು ಕಾಣುತ್ತಿಲ್ಲ. ಕರಾವಳಿಯಲ್ಲಿ ಐಟಿ ಪಾರ್ಕ್‌ಗೆ ವಿಶೇಷ ಆದ್ಯತೆ ನೀಡುತ್ತೇವೆ ಎಂದು ಸರಕಾರ ಪದೇ ಪದೆ ಘೋಷಿಸುತ್ತಿದ್ದರೂ ಬಜೆಟ್‌ನಲ್ಲಿ ಆ ಬಗ್ಗೆ ಉಲ್ಲೇಖವೇ ಇಲ್ಲ.

ರಾಜ್ಯದ 2ನೇ ಮತ್ತು 3ನೇ ಹಂತದ ನಗರಗಳಾದ ಹುಬ್ಬಳ್ಳಿ, ಕಲಬುರಗಿ, ಹೊಸಕೋಟೆ ಮತ್ತು ಮೈಸೂರಿನಲ್ಲಿ ಉದ್ಯಮಿಗಳಿಗೆ ಇನ್‌ಕ್ಯುಬೇಶನ್ ಸೌಲಭ್ಯಗಳನ್ನು ಒದಗಿಸಲು ಕಿಯೋನಿಕ್ಸ್ ಸಂಸ್ಥೆಯ ಮೂಲಕ ಪ್ಲಗ್-ಆ್ಯಂಡ್-ಪ್ಲೇ ಸೌಲಭ್ಯದ ಲೀಪ್ ಲ್ಯಾಬ್‌ಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ. ಇಲ್ಲೂ ಮಂಗಳೂರನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಂತಿದೆ. ಪ್ರವಾಸೋದ್ಯಮ ಹಿನ್ನೆಲೆಯಲ್ಲಿ ಕಡಲ ತೀರದ ಸುಮಾರು 350ಕಿ.ಮೀ. ವ್ಯಾಪ್ತಿ ಕೇಂದ್ರೀಕರಿಸಿ ಪ್ರವಾಸೋದ್ಯಮ ಬಗ್ಗೆ ಯೋಜನೆ ರೂಪಿಸಲಾಗಿದ್ದರೂ ಬಜೆಟ್‌ನಲ್ಲಿ ಆ ವಿಚಾರದ ಪ್ರಸ್ತಾಪವೇ ಇಲ್ಲ.

**ಸರಕಾರ ಮರೆತ ಪ್ರಮುಖ ಯೋಜನೆಗಳು:** ವೆನ್ಲಾಕ್ ಆಸ್ಪತ್ರೆಯಲ್ಲಿ 15ಕ್ಕೂ ಹೆಚ್ಚು ಜಿಲ್ಲೆಯ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, ಪ್ರಾದೇಶಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕು ಎಂಬ ಬೇಡಿಕೆ ಈಡೇರಿಲ್ಲ. ಹರೇಕಳ ಡ್ಯಾಂ ಪಕ್ಕದಲ್ಲಿ ನೀರು ಶುದ್ಧೀಕರಣ ಕೇಂದ್ರಕ್ಕೆ ಅನುದಾನ ಮೀಸಲಿಟ್ಟಿಲ್ಲ. ಮಂಗಳೂರಿಗೆ ನೀರು ಸರಬರಾಜು ಹಾಗೂ ಹಳೆಯ ಕೊಳವೆಗಳ ಬದಲಾವಣೆಗೆ ಸುಮಾರು 150 ಕೋಟಿ ರೂ. ಅಗತ್ಯವಿದ್ದು, ಬಿಡುಗಡೆಯಾಗಿಲ್ಲ. ಪಿಲಿಕುಳ ಜೈವಿಕ ಉದ್ಯಾನವನದ ಅಭಿವೃದ್ಧಿಗೆ ಯೋಜನೆಯೇ ಇಲ್ಲ. ಜಯದೇವ ಮತ್ತು ಕಿದ್ವಾಯಿ ಆಸತ್ರೆ ಘಟಕಗಳು ಚರ್ಚೆಯಲ್ಲಿದ್ದರೂ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ.



ಉದಯವಾಹಿನಿ ಚಿತ್ರ

- ಅನಿವಾರ್ಯವಾಗಿ ನೀಡಲೇಬೇಕಾದ ಮೀನುಗಾರಿಕೆ, ಪ್ರವಾಸೋದ್ಯಮಕ್ಕೆ ಯೋಜನೆಗಳನ್ನು ಘೋಷಣೆ ಮಾಡಿದ್ದೂ ಬಿಟ್ಟರೆ ಮತ್ತೇನು ಕಾಣುತ್ತಿಲ್ಲ.
- ಕರಾವಳಿಯಲ್ಲಿ ಐಟಿ ಪಾರ್ಕ್‌ಗೆ ವಿಶೇಷ ಆದ್ಯತೆ ನೀಡುತ್ತೇವೆ ಎಂದು ಸರಕಾರ ಪದೇ ಪದೆ ಘೋಷಿಸುತ್ತಿದ್ದರೂ ಬಜೆಟ್‌ನಲ್ಲಿ ಆ ಬಗ್ಗೆ ಉಲ್ಲೇಖವೇ ಇಲ್ಲ.
- ವೆನ್ಲಾಕ್ ಆಸ್ಪತ್ರೆಯಲ್ಲಿ 15ಕ್ಕೂ ಹೆಚ್ಚು ಜಿಲ್ಲೆಯ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, ಪ್ರಾದೇಶಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕು ಎಂಬ ಬೇಡಿಕೆ ಈಡೇರಿಲ್ಲ

### ಕರಾವಳಿಗೆ ಬಜೆಟ್‌ನಲ್ಲಿ ಏನೇನಿದೆ ?:

- ಜೈವಿಕ ತಂತ್ರಜ್ಞಾನದ ಉದ್ಯಮಗಳು, ನವೀನ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸಮುದ್ರ ಕೃಷಿಯನ್ನು ಪ್ರೋತ್ಸಾಹಿಸಲು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸುವುದು.
- ಮೀನು ಮಾರಾಟ ಮಾಡಲು ಸುಸಜ್ಜಿತ ಮೀನು ಮಾರುಕಟ್ಟೆಗಳ ಅವಶ್ಯಕತೆ ಇರುವುದರಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಮೀನು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು.
- ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಾರ್ವಜನಿಕರ ಮತ್ತು ಶಾಲಾ ವಿದ್ಯಾರ್ಥಿಗಳ ಸುರಕ್ಷತೆಗಾಗಿ 300 ಕಾಲುಸಂಕಗಳನ್ನು ನಿರ್ಮಿಸಲಾಗುವುದು.
- ಬಂದರುಗಳು ಮತ್ತು ಸರಕು ಸಾಗಾಣಿಕೆ ವಲಯದ ಅಭಿವೃದ್ಧಿಗಾಗಿ ಸಮಗ್ರ ಮಲ್ಟಿಮೋಡಲ್ ಲಾಜಿಸ್ಟಿಕ್ಸ್ ನೀತಿ ರೂಪಿಸುವುದು.
- ಪಂಜರ ಮೀನು ಸಾಕಾಣಿಕೆ, ನವೀಕರಿಸಬಹುದಾದ ಇಂಧನ ಉತ್ಪಾದನೆಗೆಸಂಬಂಧಿತ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಯೋಜನೆ ರೂಪಿಸುವುದು.
- ಕರಾವಳಿ ಪ್ರವಾಸೋದ್ಯಮಕ್ಕೆ ವೇಗ ನೀಡಲು ಸೀ ಪ್ಲೇನ್ ಮತ್ತು ಹೆಲಿ ಟ್ಯಾಕ್ಸಿಗಳಂತಹ ಆಧುನಿಕ ಸಾರಿಗೆ ಸೌಲಭ್ಯಗಳನ್ನು ಯೋಜನೆ ರೂಪಿಸಲಾಗಿದೆ. ಜತೆಗೆ ಜಾಯ್ ರೈಡರ್ ಹಾಗೂ ರಿವರ್ ಕ್ರೂಸ್ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗುವುದು.
- ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಾಲಯ ಮತ್ತು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯಗಳಿಗೆ ಮೂಲಭೂತ ಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿ ಧಿಕೈಗೊಳ್ಳಲು ಅಭಿಧಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ಉದ್ದೇಶಿಸಲಾಗಿದೆ.
- ಮಂಗಳೂರು ಕೇಂದ್ರ ಕಾರಾಗೃಹದ ಎರಡನೇ ಹಂತದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.
- ಮಾಣಿ ಮತ್ತು ಸಜಿಪನಡುವಿನಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಕರಾವಳಿಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ.
- ಪುತ್ತೂರಿನಲ್ಲಿ 300 ಹಾಸಿಗೆ ಆಸ್ಪತ್ರೆಗೆ ನಿರ್ಮಾಣ ಯೋಜನೆಗೆ ಅನುಮೋದನೆ.
- ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯದ ದರವನ್ನು 10,000 ರೂ.ಗಳಿಂದ 20,000 ರೂ.ಗಳಿಗೆ ಹೆಚ್ಚಿಸಿ ಮೀನುಗಾರಿಕೆ ಚಟುವಟಿಕೆಗಳನ್ನು ಉತ್ತೇಜಿಸಲಾಗುವುದು.

# ಎಲ್ಲಾ ಧರ್ಮಗಳ ಹಬ್ಬಗಳೊಂದಿಗೆ ಆಚರಿಸುವ ಹಬ್ಬ ರಂಜಾನ್: ಶಾಸಕ ಸಿ.ಎಸ್. ನಾಡಗೌಡ

• ಉದಯವಾಹಿನಿ ಮುದ್ದೇಬಿಹಾಳ

ಜಗತ್ತಿನಲ್ಲಿ ರಂಜಾನ್ ಹಬ್ಬವು ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ, ಭಾರತದ ಯುಗಾದಿ, ಹೋಳಿ, ದೀಪಾವಳಿ ಹಬ್ಬಗಳೊಂದಿಗೆ ಎಲ್ಲಾ ಧರ್ಮದ ಧಾರ್ಮಿಕ ಹಬ್ಬಗಳ ಜೊತೆಗೂಡಿ ಆಚರಿಸುವ ಮಾನವೀಯತೆಯ ಹಬ್ಬ ರಂಜಾನ್ ಆಗಿದೆ, ಎಂದು ಶಾಸಕರು ಹಾಗೂ ಕೆಎಸ್ಡಿಎಲ್ ನಿಗಮದ ಅಧ್ಯಕ್ಷರಾದ ಸಿ.ಎಸ್. ನಾಡಗೌಡ (ಅಪ್ಪಾಜಿ) ಹೇಳಿದರು.

ಪಟ್ಟಣದ ಮಹಿಬೂಬ ನಗರದಲ್ಲಿ ದೇವಿಕಾ ಸುಬ್ಬರಾವ್ ಫೌಂಡೇಶನ್ ವತಿಯಿಂದ ಪವಿತ್ರ ರಂಜಾನ್ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ ಸೌಹಾರ್ದ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇವರು ನೀಡಿದ ಈ ಜನ್ಮದಲ್ಲಿ ಎಲ್ಲವೂ ಭಗವಂತನ ಇಚ್ಛೆಯಂತೆ ನಡೆಯುತ್ತವೆ. ಉಪವಾಸಿಗರ ಸೇವೆ ಮಾಡುವ ಭಾಗ್ಯ ಸಿಕ್ಕಿರುವುದು ಕೂಡ ಭಗವಂತನ ಕೃಪೆಯೇ ಆಗಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಇಸ್ರೇಲ್, ಅಮೆರಿಕಾ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವು ಅತ್ಯಂತ ಖಂಡನೀಯ. ಇಡೀ ವಿಶ್ವವೇ ಈ ಯುದ್ಧವನ್ನು ಖಂಡಿಸಬೇಕು ಮತ್ತು ಜಗತ್ತಿನಲ್ಲಿ ಶಾಂತಿ ನೆಲಸಬೇಕು, ಎಂದು ವಿಶ್ವಶಾಂತಿಗಾಗಿ ಆಶಿಸಿದರು.



ಉದಯವಾಹಿನಿ ಚಿತ್ರ

**ದೇವಿಕಾ ಸುಬ್ಬರಾವ್ ಫೌಂಡೇಶನ್ ವತಿಯಿಂದ ಸೌಹಾರ್ದ ಇಫ್ತಿಯಾರ್ ಕೂಟ**

> **ದೇವಿಕಾ ಸುಬ್ಬರಾವ್ ಫೌಂಡೇಶನ್ ಆಯೋಜಿಸಿರುವ ಈ ಇಫ್ತಿಯಾರ್ ಕೂಟವು ಸೌಹಾರ್ದ ಸೇವೆಯ ಸಂಕೇತವಾಗಿದೆ. ಹಸಿದವನೇ ಇನ್ನೊಬ್ಬ ಹಸಿದವನ ಹಸಿವನ್ನು ಗುರುತಿಸಬಲ್ಲ. ಅಂತಹ ಔದಾರ್ಯ ಮತ್ತು ಇನ್ನೊಂದು ಧರ್ಮವನ್ನು ಗೌರವಿಸುವ ಹೃದಯ ವೈಶಾಲ್ಯತೆಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ರಂಜಾನ್ ಉಪವಾಸದ ಮೂಲಕ ದೇವ ಭಯ ಬೆಳೆಸಿಕೊಂಡಂತೆ, ಮನುಷ್ಯನು ಕೆಡುಕು ಮಾಡುವಾಗ, ಮೋಸ, ವಂಚನೆ ಅಥವಾ ಅನ್ಯಾಯ ಮಾಡುವಾಗಲೂ ದೇವ ಭಯ ಕಾಡುವಂತಾಗಬೇಕು. -ಲಾಲಹುಸೇನ ಕಂದಗಲ್, ಖ್ಯಾತ ಮುಸ್ಲಿಂ ಪ್ರವಚನಕಾರ**

ಮೌಲಾನಾ ನಿಸಾರ ಅಹ್ಮದ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ರಂಜಾನ್ ತಿಂಗಳ ಪವಿತ್ರತೆ ಹಾಗೂ ಸೌಹಾರ್ದತೆಯ ಮಹತ್ವವನ್ನು ವಿವರಿಸಿದರು.

ಈ ಸೌಹಾರ್ದ ಕೂಟದಲ್ಲಿ ಖಾರಿಸಾಬ ಮಾಗಿ, ಮಹ್ಮದಶಕೀಲ್ ಖಾಜಿ, ಗಣ್ಯರಾದ ಎಂ.ಬಿ. ನಾವದಗಿ, ವೈ.ಎಚ್. ವಿಜಯಕರ, ಅಬ್ದುಲ್ ಗಫೂರ ಮಕಾನದಾರ, ಪುರಸಭೆ ನಿಕಟಪೂರ್ವ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಹುಸೇನ್ ಮುಲ್ಲಾ, ಅಲ್ಲಾಭಕ್ಷ ದೇಸಾಯಿ, ಎನ್.ಬಿ. ಮುದ್ನಾಳ, ಸಂಗನಗೌಡ ಬಿರಾದಾರ, ಸಿ.ಪಿ. ಸಜ್ಜನ, ಗಣೇಶ ಅನ್ನಗೌನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ವಿರೇಶ ಹಡಲಗೇರಿ, ಶಿವು ಶಿವಪೂರ, ಮಹ್ಮದರಫಿಕ ಶಿರೋಳ, ಬಿ.ಕೆ. ಬಿರಾದಾರ, ಅಶೋಕ ನಾಡಗೌಡ, ಎಂ.ಎಚ್. ಹಾಲಣ್ಣನವರ, ಶಶಿಕಾಂತ ಮಾಲಗತ್ತಿ ಹಾಗೂ ಬಾಬುರಾವ್ ದೇಸಾಯಿ ಸೇರಿದಂತೆ ಹಿಂದೂ-ಮುಸ್ಲಿಂ ಧರ್ಮದ ಹಲವಾರು ಮುಖಂಡರು, ಗಣ್ಯರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅಲ್ಲಾಭಕ್ಷ ಖಾಜಿ ಅವರು ನಿರೂಪಿಸಿ, ವಂದಿಸಿದರು.

# ರೈತರಿಗೆ ವಂಚಿಸಿ ಪಂಗನಾಮ ಹಾಕಿದ ದಲ್ಲಾಳಿಗಳು..

• ಉದಯವಾಹಿನಿ ಕೆಂಭಾವಿ

ರೈತರು ಬೆಳೆದ ಸುಮಾರು 1.93 ಕೋಟಿ ರೂಪಾಯಿ ಮೌಲ್ಯದ ಭತ್ತವನ್ನು ಖರೀದಿಸಿ, ಹಣ ನೀಡದೆ ಏಳು ಮಂದಿ ದಲ್ಲಾಳಿಗಳು ಪರಾರಿಯಾಗಿರುವ ಘಟನೆ ಹುಣಸಗಿ ತಾಲ್ಲೂಕಿನ ಬೈಚಬಾಳ ಗ್ರಾಮದಲ್ಲಿ ನಡೆದಿದೆ. ಬೈಚಬಾಳ ಗ್ರಾಮದ ರೈತರು ಕಷ್ಟಪಟ್ಟು ಬೆಳೆದಿದ್ದ ಭತ್ತವನ್ನು ಏಳು ಮಂದಿ ದಲ್ಲಾಳಿಗಳು ಖರೀದಿಸಿದ್ದರು. ಭತ್ತವನ್ನು ಪಡೆದುಕೊಂಡ ನಂತರ ರೈತರಿಗೆ ನೀಡಬೇಕಿದ್ದ ಹಣವನ್ನು ಪಾವತಿಸದೆ, ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಆರೋಪಿಗಳು ನಾಪತ್ತೆಯಾಗಿದ್ದಾರೆ. ಇದರಿಂದ ಕಂಗಾಲಾದ ರೈತರು ನ್ಯಾಯಕ್ಕಾಗಿ ಕೆಂಭಾವಿ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾರೆ.

ಪ್ರಕರಣ ದಾಖಲಾದರೂ ಆರೋಪಿಗಳ ಬಂಧನ ವಿಳಂಬವಾಗುತ್ತಿದೆ ಎಂದು ಆರೋಪಿಸಿ, ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ನರಸಿಂಹ ನಾಯಕ (ರಾಜುಗೌಡ) ಅವರು ಸಂತ್ರಸ್ತ ರೈತರೊಂದಿಗೆ ಶನಿವಾರದಂದು ಕೆಂಭಾವಿ ಪೊಲೀಸ್ ಠಾಣೆಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಪೊಲೀಸರೊಂದಿಗೆ ಸುದೀರ್ಘ ಚರ್ಚೆ ನಡೆಸಿದ ಅವರು, ರೈತರಿಗೆ ಆಗಿರುವ ಅನ್ಯಾಯವನ್ನು ವಿವರಿಸಿದರು. ಸದ್ಯ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಈ ಕುರಿತು ದೂರು ದಾಖಲಾಗಿದ್ದು ತನಿಖೆ ಪ್ರಗತಿಯಲ್ಲಿದೆ. ದಲ್ಲಾಳಿಗಳನ್ನು ಆದಷ್ಟು ಬೇಗ ಬಂದಿಸುವದಾಗಿ ಪೊಲೀಸರು ಭರವಸೆ ನೀಡಿದರು.





ಉದಯವಾಹಿನಿ ಚಿತ್ರ

> **ರೈತರು ಹಗಲಿರುಳು ಬೆವರು ಸುರಿಸಿ ಬೆಳೆದ ಬೆಳೆಗೆ ಈ ರೀತಿ ಮೋಸ ಮಾಡಿರುವುದು ಅತ್ಯಂತ ಖಂಡನೀಯ. ಪೊಲೀಸರು ಕೂಡಲೇ ಕಾರ್ಯಪ್ರವೃತ್ತರಾಗಿ ಆ 7 ಮಂದಿ ದಲ್ಲಾಳಿಗಳನ್ನು ಪತ್ತೆ ಹಚ್ಚಬೇಕು ಹಾಗೂ ರೈತರ ಹಣವನ್ನು ಕೊಡಿಸುವ ಮೂಲಕ ಅವರಿಗೆ ನ್ಯಾಯ ಒದಗಿಸಬೇಕು.**
> -ರಾಜುಗೌಡ ನರಸಿಂಹ ನಾಯಕ (ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷರು)

> **ರೈತರು ಕಷ್ಟ ಪಟ್ಟು ಬೆಳೆದ ಭತ್ತವನ್ನು ಕೈಗೆ ಬರುವ ತುತ್ತು ಬಾಯಿಗೆ ಬರದಂಗೆ ಮೋಸ ಮಾಡಿರುವ ದಲ್ಲಾಳಿಗಳು, ರೈತರು ಭತ್ತವನ್ನೇ ನಂಬಿಕೊಂಡು ಜೀವನ ಸಾಗುತ್ತಿರುವುದು, ಆದರೆ ರೈತರಿಗೆ ಇತರಹ ಮೋಸ ಮಾಡಿರುವುದು ವಿಷಾದ ಅನಿಸುತ್ತೆ, ಅನ್ಯಾಯ ಆದ ರೈತರಿಗೆ ಆದಷ್ಟು ಬೇಗ ನ್ಯಾಯ ಸಿಗಬೇಕು ಹಾಗೂ ಬೆಳೆದ ಬೆಳೆಯ ಮೊತ್ತದ ಹಣವನ್ನು ಸಿಗುವಂತೆ ಆಗಬೇಕು.**
> -ಕ್ರಷ್ಣರೆಡ್ಡಿ ಮುದನೂರ್ (ಬಿಜೆಪಿ ಯುವ ಮುಖಂಡ)

# ಬಲಗೈ ಸಮುದಾಯಕ್ಕೆ ಅನ್ಯಾಯ ಖಂಡಿಸಿ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಔರಾದ್

ಪರಿಶಿಷ್ಟ ಜಾತಿ ಒಳಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ (ಹೊಲೆಯ) ಆಗಿರುವ ಅನ್ಯಾಯವನ್ನು ಖಂಡಿಸಿ ಔರಾದ್ ಪಟ್ಟಣದಲ್ಲಿ ಎಸ್ಸಿ ಬಲಗೈ ಒಳಮೀಸಲಾತಿ ಹೋರಾಟ ಸಮಿತಿಯಿಂದ ಔರಾದ್ ಬಂದ್ ಯಶಸ್ವಿಯಾಗಿ ನೆರವೇರಿತು.

ಪಟ್ಟಣದ ಕನ್ನಡಾಂಬೆ ವೃತ್ತದಿಂದ ಬಸ್ ನಿಲ್ದಾಣದ ವರೆಗೆ ನಡೆದ ಪ್ರತಿಭಟನೆಯಲ್ಲು ನೂರಾರು ಜನ ಪಾಲ್ಗೊಂಡಿದ್ದರು. ಬಸ್ ನಿಲ್ದಾಣದ ಹತ್ತಿರ ಸೇರಿದ ಪ್ರತಿಭಟನಾಕಾರರು ಸಾಂವಿಧಾನಿಕ ನ್ಯಾಯಕ್ಕಾಗಿ ಘೋಷಣೆಗಳು ಕೂಗಿದರು. ಬಳಿಕ ರಾಜ್ಯಪಾಲರಿಗೆ ಬರೆದ ಮನವಿ ಪತ್ರ ತಹಶೀಲ್ದಾರ್ ಮಹೇಶ ಪಾಟೀಲ್ ಅವರಿಗೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಂಕುಶ ಗೋಖಲೆ, ರೋಸ್ಟರ್ ಬಿಂದುವಿನಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಬೇಕು, ಪ್ರವರ್ಗ ಎ.ಬಿ.ಸಿ ಅವರಿಗೆ ಸಮಾನ ಅವಕಾಶಗಳು ಕಲ್ಪಿಸಬೇಕು, ಒಳಮೀಸಲಾತಿ ದೋಷಗಳು ಪರಿಷ್ಕರಿಸುವವರೆಗೂ ಶಿಕ್ಷಣ ಮತ್ತು ಉದ್ಯೋಗದ ನೇಮಕಾತಿ ತಡೆ ಹಿಡಿಯಬೇಕು ಎಂದರು.

ಹೋರಾಟ ಸಮಿತಿ ಅಧ್ಯಕ್ಷ ಪ್ರವೀಣ ಕಾರಂಜೆ ಮಾತನಾಡಿ, ಒಳಮೀಸಲಾತಿಯಂತೆ ಹೊಸ ಜಾತಿ ಪ್ರಮಾಣ ಪತ್ರಗಳು ನೀಡುವುದು ತುರ್ತಾಗಿ ನಿಲ್ಲಿಸಬೇಕು. ಅಲ್ಲದೇ ಗೊಂದಲ ಬಗೆಹರಿಯುವವರೆಗೂ ಹಳೆ ಮೀಸಲಾತಿ ನಿಯಮಗಳು ಪಾಲಿಸಬೇಕು ಎಂದು ಆಗ್ರಹಿಸಿದರು.

# ಸಾರ್ವಜನಕ ಸಮಸ್ಯೆಗಳಿಗೆ ಸ್ಪಂದಿಸುವುದೇ ನಮ್ಮ ಗುರಿ : ಬಾಬು

• ಉದಯವಾಹಿನಿ ಬಳ್ಳಾರಿ

ದೇಶದಲ್ಲಿ 1500ಕ್ಕೂ ಹೆಚ್ಚು ಮಾನವ ಹಕ್ಕುಗಳ ಸಂಘಟನೆಗಳಿವೆ ಅದರಲ್ಲಿ ನಮ್ಮ ದಕ್ಷಿಣ ಏಷ್ಯಾ ಮಾನವ ಹಕ್ಕುಗಳ ವೇದಿಕೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಜನಪರ ಸಂಘಟನೆಯಾಗಿದೆಂದು ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಎಸ್ ಬಾಬು ಹೇಳಿದರು. ಅವರು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಸಂಘಟನೆ ಭಾರತ ಸರ್ಕಾರದ ಗ್ರಾಹಕರ ಸಚಿವಾಲಯದಲ್ಲಿ ನೊಂದಾಯಿಸಿಕೊಂಡಿರುವ 80 ಸಾವಿರ ಸದಸ್ಯರುಳ್ಳ ಬೃಹತ್ ಸಂಘಟನೆಯಾಗಿದೆ, ಸಂಘಟನೆಯ ಮೂಲ ಉದ್ದೇಶ ಸಮಾಜದ ಬಲಹೀನ ಮತ್ತು ಅನ್ಯಾಯಕ್ಕೊಳಗಾದ ವ್ಯಕ್ತಿಗಳಿಗೆ ನ್ಯಾಯ ಕೊಡಿಸುವುದಾಗಿದೆಂದರು. ಸದಸ್ಯರು ವೇದಿಕೆಯ ಹೆಸರನ್ನು ದುರ್ಬಳಕೆ ಮಾಡಿಕೊಂಡಲ್ಲಿ ದೂರು ನೀಡಿದಲ್ಲಿ ಅವರನ್ನು ತಕ್ಷಣ ಸಂಘಟನೆಯಿಂದ ವಜಾಗೊಳಿಸಲಾಗುವುದು ಎಂದರು.

# ಅನ್ನದಾತನ ಬದುಕು ಬದಲಿಸುವ ಬಜೆಟ್-ಸಚಿವ ಶಿವಾನಂದ ಪಾಟೀಲ

• ಉದಯವಾಹಿನಿ ವಿಜಯಪುರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಪ್ರಸಕ್ತ ಸಾಲಿನ ಬಜೆಟ್ ಅನ್ನು ಸಚಿವ ಶಿವಾನಂದ ಪಾಟೀಲ ಸ್ವಾಗತಿಸಿದ್ದಾರೆ. ಮಾರುಕಟ್ಟೆ ಸಂಪರ್ಕಗಳನ್ನು ಸಮರ್ಪಕವಾಗಿ ಬಲಪಡಿಸುವುದೂ ಸೇರಿ ರೂಪಿಸಲಾಗುವ ಸಮಗ್ರ ಕೃಷಿ ವಿಸ್ತಾರ ಯೋಜನೆ, ಎಐ ತಂತ್ರಜ್ಞಾನದಿಂದ ರೈತ ಕರೆ ಕೇಂದ್ರ ಉನ್ನತಿ, ಎಪಿಎಂಸಿಗಳ ಸಂಪೂರ್ಣ ಡಿಜಿಟಲೀಕರಣ ಯೋಜನೆಗಳು ಕೃಷಿಕರ ಬದುಕಿನ ಬದಲಾವಣೆಗೆ ಪೂರಕವಾಗಲಿವೆ. ಕಳಪೆ ಬಿತ್ತನೆ ಬೀಜ, ಕೀಟನಾಶಕ ಪೂರೈಕೆ ತಡೆ ಅತ್ಯಗತ್ಯವಾಗಿದ್ದು, ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯಮಟ್ಟದ ಸಲಹಾ ಸಮಿತಿ ರಚನೆ ಘೋಷಣೆ ಸ್ವಾಗತಾರ್ಹ ಎಂದು ಸಚಿವ ಶಿವಾನಂದ ಪಾಟೀಲ ಪ್ರತಿಕ್ರಿಯಿಸಿದ್ದಾರೆ.

# ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ: ಶಾಸಕ ಆರ್.ವಿ. ದೇಶಪಾಂಡೆ

• ಉದಯವಾಹಿನಿ ಹಳಿಯಾಳ

ಸರ್ಕಾರ ರೈತರು ಸೇರಿದಂತೆ ಎಲ್ಲಾ ವರ್ಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದು ಅಭಿವೃದ್ಧಿ ಪಡಿಸುತ್ತಿದೆ. ಯೋಜನೆಗಳ ಸದುಪಯೋಗ ಪ್ರತಿಯೊಬ್ಬರೂ ಪಡೆಯಿರಿ ಎಂದು ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.

ಇಲ್ಲಿನ ಪುರ ಭವನದಲ್ಲಿ ಈಚೆಗೆ ತೋಟಗಾರಿಕೆ ಇಲಾಖೆಯಿಂದ ಅರ್ಹ ಫಲಾನುಭವಿಗಳಿಗೆ ತರಕಾರಿ ಬೀಜಗಳ ಕಿಟ್ ವಿತರಣೆ ಹಾಗೂ ಪ್ರೋತ್ಸಾಹ ಧನದಲ್ಲಿ ಟ್ರ್ಯಾಕ್ಟರ್ ವಿತರಣೆ ಮತ್ತು ಪಶು ಸಂಗೋಪನಾ ಇಲಾಖೆಯಿಂದ ಅರ್ಹ ಫಲಾನುಭವಿಗಳಿಗೆ ಕೌ-ಮ್ಯಾಟ್ (ನೆಲಹಾಸು) ವಿತರಿಸಿ ಮಾತನಾಡಿದರು.

ತರಕಾರಿ ಕಿಟ್‌ಗಳಲ್ಲಿ ಸುಮಾರು 12 ತರಹದ ತರಕಾರಿ ಬೀಜಗಳಿದ್ದು ಪ್ರತಿಯೊಂದು ಕಿಟ್ ಗೆ ಸುಮಾರು ರೂ.5 ಸಾವಿರ ಬೆಲೆ ಇದ್ದು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ತರಬೇಡಿ. ತೋಟಗಾರಿಕೆ ಬೆಳೆ ಉತ್ತೇಜಿಸಿ ಆರ್ಥಿಕ ಸಂಪನ್ನರಾಗಿರಿ. ತಾವು ಯಾವುದೇ ಪಕ್ಷಪಾತ ಜಾತಿ ಭೇದವಿಲ್ಲದೆ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇನೆ.

ಜನರು ಯಾರಿಂದ ಯಾವ ಸರ್ಕಾರದಿಂದ ಅಭಿವೃದ್ಧಿ ಕಾರ್ಯವಾಗುತ್ತದೆ ಎಂಬುದನ್ನು ಅರಿತುಕೊಳ್ಳಬೇಕು. ದುಸಗಿ ಗ್ರಾಮದಲ್ಲಿ ಜಿಲ್ಲಾ ಗೋಶಾಲೆ ಇದ್ದು 183 ದನ ಕರುಗಳು ಗೋಶಾಲೆಯಲ್ಲಿ ದಾಖಲಾಗಿವೆ. ಆರ್ಥಿಕ ಸಂಪನ್ನವುಳ್ಳವರು ಗೋಶಾಲೆಗೆ ಮೇವು, ಮತ್ತಿತರ ದನ, ಕರುಗಳಿಗೆ ಬೇಕಾಗುವ ಸಾಮಗ್ರಿ ಹಾಗೂ ಆರ್ಥಿಕ ಸಹಾಯ ಮಾಡಿ ಎಂದರು. ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ಆರ್. ಹೆರಿಯಲ್ ಮಾತನಾಡಿ, ಇಲಾಖೆಯಿಂದ ಒಟ್ಟು ರೂ.10 ಲಕ್ಷ ಮೌಲ್ಯದ ತರಕಾರಿ ಕಿಟ್‌ಗಳನ್ನು ಹಾಗೂ ಸಹಾಯಧನ ಅಡಿಯಲ್ಲಿ 6 ಫಲಾನುಭವಿಗಳಿಗೆ ಟ್ರ್ಯಾಕ್ಟರ್ ವಿತರಿಸಲಾಗಿದೆ ಎಂದರು.

# ಧೈರ್ಯದಿಂದ ಪರೀಕ್ಷೆ ಎದುರಿಸಿ: ಶಿಕ್ಷಕ ಈರಣ್ಣ ಕಡಕೋಳ

• ಉದಯವಾಹಿನಿ ಗೋಕಾಕ

ಗುರುಗಳ ಮಾರ್ಗದರ್ಶನದಲ್ಲಿ ಕಠಿಣ ಪರಿಶ್ರಮದಿಂದ ವಿದ್ಯಾರ್ಥಿ ಜೀವನ ಸದುಪಯೋಗಪಡಿಸಿಕೊಳ್ಳಿ. ಧೈರ್ಯದಿಂದ ಪರೀಕ್ಷೆಗಳನ್ನು ಎದುರಿಸಿ ಎಂದು ಮೆಳವಂಕಿಯ ಪಿ.ಎಂ.ಸಿ. ಸಿದ್ದಾರೂಢ ಮಠದ ಶಾಲೆಯ ಮುಖ್ಯಶಿಕ್ಷಕ ಈರಣ್ಣ ಕಡಕೋಳ ಹೇಳಿದರು.

ಕೆಎಲ್‌ಇ ಸಂಸ್ಥೆಯ ಇಲ್ಲಿನ ಸಿ.ಎಸ್.ಅಂಗಡಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹೆಚ್ಚಿನ ಅವಕಾಶಗಳಿವೆ. ಉನ್ನತ ಶಿಕ್ಷಣ ಪಡೆದು ಉತ್ತಮ ಬದುಕು ರೂಪಿಸಿಕೊಳ್ಳಿ ಎಂದರು. ಸಂಸ್ಥೆಯ ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಮಲ್ಲಿಕಾರ್ಜುನ ಚುನಮರಿ, ಮುಖ್ಯಶಿಕ್ಷಕ ಜಿ.ಎಂ.ಬಿರಾದಾರ, ಶಿಕ್ಷಕಿ ಎಸ್.ಓ.ಅಂಗಡಿ, ಶಿಕ್ಷಕಿ ವೀಣಾ ಬಿಳ್ಳೂರ ಇದ್ದರು.



ಉದಯವಾಹಿನಿ ಚಿತ್ರ

# ಕಲುಷಿತ ನೀರು ಪೂರೈಕೆಗೆ ನ್ಯಾಯಾಧೀಶ ಆಕ್ರೋಶ


## ಸಾರ್ವಜನಿಕರ ಆರೋಗ್ಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು

• ಉದಯವಾಹಿನಿ ಔರಾದ್

ಪಟ್ಟಣಕ್ಕೆ ಪೂರೈಕೆಯಾಗುತ್ತಿರುವ ಹಾಲಹಳ್ಳಿ ಸಮೀಪದ ನೀರು ಶುದ್ಧೀಕರಣ ಘಟಕಕ್ಕೆ ಔರಾದ ಸಿವಿಲ್ ಕೋರ್ಟ್ ಹಿರಿಯ ನ್ಯಾಯಾಧೀಶ ಹಾಜಿ ಹುಸೇನಸಾಬ್ ಯಾದವಾಡ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಶುದ್ಧೀಕರಣದ ಪ್ರಕ್ರಿಯೆ ಸರಿಯಾಗಿ ನಡೆಯದೆ ಅಶುದ್ಧ ನೀರು ಪೂರೈಕೆ ಮಾಡಲಾಗುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಪುರಸಭೆ ಅಧಿಕಾರಿಗಳ ವಿರುದ್ಧ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳದಲ್ಲಿದ್ದ ಸಿಬ್ಬಂದಿಯೊಂದಿಗೆ ಮಾತನಾಡಿದ ನ್ಯಾಯಾಧೀಶರು, ಪಟ್ಟಣದ ಜನರು ಕುಡಿಯುವ ನೀರಿನ ಬಗ್ಗೆ ಇಷ್ಟು ನಿರ್ಲಕ್ಷ್ಯ ಯಾಕೆ ತೋರಿಸುತ್ತಿದ್ದೀರಿ? ಇಂತಹ ಅಶುದ್ಧ ನೀರನ್ನು ಪೂರೈಕೆ ಮಾಡಿದರೆ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ? ಎಂದು ಪ್ರಶ್ನಿಸಿದರು. ಸಾರ್ವಜನಿಕರ ಆರೋಗ್ಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಅವರು ಸೂಚಿಸಿದರು. ಬಾಟಲ್‌ನಲ್ಲಿ ನೀರು ತಪಾಸಣೆಗೆ ಮಾಡಿರುವುದು. ಇದಕ್ಕೆ ಪ್ರತಿಕ್ರಿಯಿಸಿದ ಘಟಕದ ಸಿಬ್ಬಂದಿಗಳು ತಮ್ಮ ಸಮಸ್ಯೆಯನ್ನು ವಿವರಿಸಿ, ನೀರನ್ನು ಶುದ್ಧೀಕರಿಸಲು ಬೀಚಿಂಗ್ ಪೌಡರ್ ಸೇರಿ ಕೆಲವು ಅಗತ್ಯ ರಾಸಾಯನಿಕಗಳನ್ನು ಬಳಸಬೇಕಾಗಿದೆ. ಆದರೆ ಅವುಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಸರಿಯಾದ ಸಮಯಕ್ಕೆ ಪೂರೈಸಿಲ್ಲ. ಅವುಗಳಿಲ್ಲದೆ ನೀರು ಸಂಪೂರ್ಣವಾಗಿ ಶುದ್ಧೀಕರಿಸಲು ಸಾಧ್ಯವಾಗುತ್ತಿಲ್ಲ.

ಆದ್ದರಿಂದ ಅನಿವಾರ್ಯವಾಗಿ ಇದೇ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ನಂತರ ಈ ವಿಷಯವನ್ನು ಪರಿಶೀಲಿಸಿದಾಗ, ಬೀಚಿಂಗ್ ಪೌಡರ್ ಖರೀದಿಗೆ ಸಂಬಂಧಿಸಿದ ಹಣ ಪಾವತಿಸದಿರುವುದರಿಂದ ಅದರ ಪೂರೈಕೆ ಸ್ಥಗಿತಗೊಂಡಿರುವುದು ತಿಳಿದುಬಂದಿದೆ. ಈ ಕಾರಣದಿಂದ ನೀರು ಶುದ್ಧೀಕರಣ ಪ್ರಕ್ರಿಯೆ ಸರಿಯಾಗಿ ನಡೆಯದೆ ಇರುವುದಾಗಿ ಮೂಲಗಳಿಂದ ಮಾಹಿತಿ ಪಡೆದರು. ಈ ಘಟನೆ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಪಟ್ಟಣದ ಜನರಲ್ಲಿ ಆತಂಕ ಉಂಟಾಗಿದ್ದು, ಶುದ್ಧ ಕುಡಿಯುವ ನೀರಿನ ಪೂರೈಕೆಯನ್ನು ತಕ್ಷಣ ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಸೂಚಿಸಿದರು.



ಉದಯವಾಹಿನಿ ಚಿತ್ರ

**ಅಧಿಕಾರಿಗಳ ವಿರುದ್ಧ ಆಕ್ರೋಶ**

### ನೀರು ತಪಾಸಣೆ ಅಸಮಧಾನ

**ಈ ವೇಳೆ ನ್ಯಾಯಾಧೀಶ ಹಾಜಿ ಹುಸೇನ್ ಸಾಬ್ ಯಾದವಾಡ ಅವರು ನೀರು ಸಂಗ್ರಹಿಸಿ ತಪಾಸಣೆ ನಡೆಸಿದರು. ಇದು ಜನರಲ್ಲ ಜಾನುವಾರುಗಳಿಗೂ ಕುಡಿಯಲು ಯೋಗ್ಯವಲ್ಲ. ಇಂತಹ ನೀರು ಜನರಿಗೆ ಹೇಗೆ ಕುಡಿಸುತ್ತೀರಿ ಎಂದು ಪುರಸಭೆಯ ಸಿಬ್ಬಂದಿಗೆ ಕೋರ್ಟ್ ನಲ್ಲಿ ನಡೆದ ಸಭೆಯಲ್ಲಿ ದೂರಿದರು. ಕೂಡಲೇ ಜನರಿಗೆ ಶುದ್ಧ ನೀರು ಕುಡಿಸಲು ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.**


### ಮೇಲಾಧಿಕಾರಿಗಳಿಗೆ ಪತ್ರ

**ಔರಾದ್ ಪಟ್ಟಣದಲ್ಲಿ ಆಶುದ್ಧ ನೀರು ಸರಬರಾಜು ಆಗುತ್ತಿರುವುದನ್ನು ಪರಿಶೀಲಿಸಿದ ಹಿರಿಯ ನ್ಯಾಯಾಧೀಶ ಹಾಜಿ ಹುಸೇನಸಾಬ್ ಯಾದವಾಡ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಈ ಸಂಬಂಧ ಪತ್ರ ಬರೆಯಲಾಗುತ್ತದೆ. ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವಂತೆ ತಿಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.**

# ಪಾರ್ಕಿಂಗ್‌ಗೆ ಹಣ ಕೊಡಬೇಕಿಲ್ಲ

ಚಿತ್ರಮಂದಿರದಲ್ಲಿ ಸಿಗುವ ಪಾಪ್‌ಕಾರ್ನ್, ಪೆಟ್ರೋಲ್-ಡೀಸೆಲ್ ದರ ಹೆಚ್ಚಾಗಿ ಪ್ರಯಾಣದ ಮೊತ್ತ ಹೆಚ್ಚಾಗಿದೆ. ಇದೆಲ್ಲದರ ಜೊತೆಗೆ ಸಿನಿಮಾ ನೋಡಲು ಹೋದರೆ ಪಾರ್ಕಿಂಗ್ ಶುಲ್ಕ ಸಹ ನೀಡಬೇಕಿದೆ. ಆದರೆ ಈ ಪಾರ್ಕಿಂಗ್ ಶುಲ್ಕ ವಿಧಿಸುವ ಬಗ್ಗೆ ಹಲವು ವರ್ಷಗಳಿಂದಲೂ ವಾದ-ಪ್ರತಿವಾದಗಳು ನಡೆಯುತ್ತಲೇ ಇದ್ದವು.

ಸಿನಿಮಾ ಟಿಕೆಟ್ ಖರೀದಿ ಮಾಡಿದಾಗಲೇ ಚಿತ್ರಮಂದಿರದ ಅಥವಾ ಮಲ್ಟಿಪ್ಲೆಕ್ಸ್‌ನ ಗ್ರಾಹಕ ಆಗಿರುವ ಪ್ರೇಕ್ಷಕನಿಗೆ ಪಾರ್ಕಿಂಗ್ ಅನ್ನು ಉಚಿತವಾಗಿ ಅಥವಾ ಸೇವೆಯ ರೂಪದಲ್ಲಿ ಕೊಡಬೇಕು ಎಂಬ ವಾದ ಇತ್ತು. ಇದೀಗ ಈ ಬಗ್ಗೆ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಇನ್ನು ಮುಂದೆ ಸಿನಿಮಾ ನೋಡಲು ಹೋದ ಪ್ರೇಕ್ಷಕನಿಗೆ ಸಿಂಗಲ್ ಸ್ಕ್ರೀನ್ ಚಿತ್ರಮಂದಿರ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಯಾವುದೇ ಪಾರ್ಕಿಂಗ್ ಶುಲ್ಕ ಪಡೆಯುವಂತಿಲ್ಲ.



ಆದರೆ ಇದು ಸದ್ಯಕ್ಕೆ ಕರ್ನಾಟಕದಲ್ಲಿ ಜಾರಿಯಲ್ಲಿಲ್ಲ. ಇದು ಜಾರಿಯಲ್ಲಿ ಇರುವುದು ತೆಲಂಗಾಣದಲ್ಲಿ ಮಾತ್ರ. ಆರಂಭದಲ್ಲಿ ತೆಲಂಗಾಣದಲ್ಲಿ ಸಿಂಗಲ್ ಸ್ಕ್ರೀನ್ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಪಾರ್ಕಿಂಗ್ ಶುಲ್ಕ ಪಡೆಯಲಾಗುತ್ತಿತ್ತು.

ಸರ್ಕಾರವು ಸಿಂಗಲ್ ಸ್ಕ್ರೀನ್, ಮಲ್ಟಿಪ್ಲೆಕ್ಸ್‌ಗಳೆರಡರಲ್ಲೂ ಸಹ ಸಿನಿಮಾ ನೋಡಲು ಬಂದವರಿಂದ ಪಾರ್ಕಿಂಗ್ ಶುಲ್ಕ ಪಡೆಯುವಂತಿಲ್ಲ ಎಂದು ಆದೇಶಿಸಿತು.

ಆದರೆ ಕೋವಿಡ್ ಬಳಿಕ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳ ಮಾಲೀಕರು ಸರ್ಕಾರವನ್ನು ಮನವಿ ಮಾಡಿ, ಆದೇಶದಿಂದ ವಿನಾಯಿತಿ ಪಡೆದರು. ಆದರೆ ಮಲ್ಟಿಪ್ಲೆಕ್ಸ್‌ಗಳಲ್ಲಿ ಪಾರ್ಕಿಂಗ್ ಶುಲ್ಕ ವಿನಾಯಿತಿ ಚಾಲ್ತಿಯಲ್ಲಿತ್ತು. ಆದರೆ ಇತ್ತೀಚೆಗೆ ತೆಲಂಗಾಣ ಹೈಕೋರ್ಟ್ ಈ ಸಂಬಂಧ ಸಲ್ಲಿಕೆ ಆಗಿದ್ದ ಅರ್ಜಿಯ ವಿಚಾರಣೆ ನಡೆಸಿ, ಸಿಂಗಲ್ ಸ್ಕ್ರೀನ್ ಹಾಗೂ ಮಲ್ಟಿಪ್ಲೆಕ್ಸ್ ಎರಡರಲ್ಲೂ ಸಿನಿಮಾ ನೋಡಲು ಬಂದ ಪ್ರೇಕ್ಷಕನಿಂದ ಕಡ್ಡಾಯವಾಗಿ ಪಾರ್ಕಿಂಗ್ ಶುಲ್ಕ ತೆಗೆದುಕೊಳ್ಳುವಂತಿಲ್ಲ ಎಂದಿದೆ.



# ರಾಧಿಕಾ ಹುಟ್ಟುಹಬ್ಬಕ್ಕೆ ಯಶ್ ಕೊಟ್ಟ ಉಡುಗೊರೆ

ಯಶ್ ತಮಗೆ ಕೊಟ್ಟ ಉಡುಗೊರೆ ಏನು ಎಂಬುದನ್ನು ಸಹ ಹೇಳಿಕೊಂಡರು.

'ನನಗೆ ವೈಯಕ್ತಿಕವಾಗಿ ಬಹಳ ಖುಷಿಯಾಗುತ್ತದೆ. ಇಷ್ಟು ವರ್ಷಗಳಾದ ಬಳಿಕವೂ ಕರ್ನಾಟಕದ ಹಲವು ಮೂಲೆಗಳಿಂದ ಜನ ಬಂದು ನನಗೆ ಜನ್ಮದಿನದ ಶುಭಾಶಯ ತಿಳಿಸುತ್ತಾರೆ. ಇದು ನಿಜಕ್ಕೂ ಖುಷಿಯ ವಿಷಯ. ಇವತ್ತಿನ ಒಂದು ದಿನ ನಾನು ಅವರೊಟ್ಟಿಗೆ ಹುಟ್ಟುಹಬ್ಬ ಆಚರಿಸಿಕೊಳ್ಳಲು ಇಷ್ಟಪಡುತ್ತೇನೆ. ಜನರಿಂದ ಇಷ್ಟೊಂದು ಪ್ರೀತಿ ಪಡೆಯುತ್ತಿರುವ ನಾನು ಅದೃಷ್ಟವಂತೆ ಎಂದೇ ಭಾವಿಸುತ್ತೇನೆ. ಕೆಲವರು ಜನರಿಗಷ್ಟೆ ಈ ರೀತಿಯ ಜನ ಪ್ರೀತಿ ಸಿಗುತ್ತದೆ. ಅದು ನನಗೆ ಸಿಕ್ಕಿರುವುದಕ್ಕೆ ನಾನು ಧನ್ಯ' ಎಂದರು ರಾಧಿಕಾ.

'ನಿಮ್ಮ ನಟನೆ ಇಷ್ಟವಾಗುತ್ತೆ, ನಿಮ್ಮ ಸಿನಿಮಾ ಇಷ್ಟವಾಗುತ್ತೆ ಎಂದು ಅಭಿಮಾನಿಗಳು ಹೇಳಿದಾಗ ಸಹಜವಾಗಿಯೇ ಖುಷಿ ಆಗುತ್ತದೆ. ಆದರೆ ನಿಮ್ಮ ವ್ಯಕ್ತಿತ್ವ ಇಷ್ಟ, ನೀವು ನನಗೆ ಸ್ಫೂರ್ತಿ, ನೀವು ನನಗೆ ಆದರ್ಶ ಎಂದು ಜನರು ಹೇಳಿದಾಗ ನಿಜಕ್ಕೂ ಹೆಮ್ಮೆ ಆಗುತ್ತದೆ.

ಪ್ರತಿ ವರ್ಷವೂ ನಾನು ತಪ್ಪದೇ ಅಭಿಮಾನಿಗಳನ್ನು ಭೇಟಿ ಮಾಡುತ್ತೇನೆ. ಆ ಒಂದು ದಿನ ಅವರೊಟ್ಟಿಗೆ ಕಳೆಯುವುದು ನನಗೆ ಇಷ್ಟ. ಇದು ನನಗೆ ಕಷ್ಟ, ಮುಜುಗರ ಎಂದೆಲ್ಲ ಎನಿಸುವುದಿಲ್ಲ, ಅಭಿಮಾನಿಗಳನ್ನು ಭೇಟಿ ಮಾಡುವುದನ್ನು ನಾನು ಎಂಜಾಯ್ ಮಾಡುತ್ತೇನೆ' ಎಂದಿದ್ದಾರೆ ರಾಧಿಕಾ.

ಯಶ್ ಅವರು ಹುಟ್ಟುಹಬ್ಬಕ್ಕೆ ಏನು ಉಡುಗೊರೆ ಕೊಟ್ಟರು ಎಂಬ ಪ್ರಶ್ನೆಗೆ ಉತ್ತರಿಸಿದ ರಾಧಿಕಾ, 'ನಾವು ವಸ್ತುಗಳನ್ನು ಉಡುಗೊರೆಯಾಗಿ ಕೊಡುವುದಿಲ್ಲ. ಪರಸ್ಪರರಿಗೆ ಸಮಯ ಕೊಡುವುದೇ ನಮ್ಮ ಪಾಲಿಗೆ ಉಡುಗೊರೆ. ನಾವು ಯಾವುದೇ ರೀತಿಯ ವಸ್ತುಗಳನ್ನು ಪರಸ್ಪರ ಕೊಡು-ಕೊಳ್ಳುವುದು ಮಾಡುವುದಿಲ್ಲ. ಇಬ್ಬರೂ ಜೊತೆಗಿರುವುದೇ ನಮಗೆ ಉಡುಗೊರೆ, ಸಣ್ಣ ಪುಟ್ಟ ವಿಷಯಗಳೇ ನಮಗೆ ಹೆಚ್ಚು ಪರಿಣಾಮಕಾರಿ ಎನಿಸುತ್ತವೆ' ಎಂದಿದ್ದಾರೆ ನಟಿ ರಾಧಿಕಾ.

# ಒಂದೇ ಚಿತ್ರದಲ್ಲಿ ಶಿವಣ್ಣ, ಶಾರುಖ್, ರಜನಿ, ಮೋಹನ್

**ಜೈಲರ್ 2 ಅತಿಥಿ ಪಾತ್ರ**

ಶಾರುಖ್ ಖಾನ್ 'ಜೈಲರ್ 2' ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸುವ ಮೂಲಕ ರಜನಿಕಾಂತ್ ಅವರ ಋಣ ತೀರಿಸಿದ್ದಾರೆ. ಶಾರುಖ್ ಅವರ 'ರಾ ಒನ್' ಚಿತ್ರದಲ್ಲಿ ರಜನಿಕಾಂತ್ ಕಾಣಿಸಿಕೊಂಡಿದ್ದರು. ಮೋಹನ್ ಲಾಲ್ ಸ್ಟೈಲಿಸ್ಟ್ ಜಿಶಾದ್ ಈ ಮಾಹಿತಿಯನ್ನು ಖಚಿತಪಡಿಸಿದ್ದಾರೆ. ರಜನಿಕಾಂತ್, ಶಿವಣ್ಣ, ಮೋಹನ್ ಲಾಲ್ ಸೇರಿದಂತೆ ಹಲವು ಸ್ಟಾರ್ ನಟರು 'ಜೈಲರ್ 2'ರಲ್ಲಿ ನಟಿಸಿದ್ದಾರೆ, ಇದು ಭಾರಿ ನಿರೀಕ್ಷೆ ಹುಟ್ಟಿಸಿದೆ.

ಶಾರುಖ್ ಖಾನ್ ಕಮಲ್ ಹಾಸನ್ ಅವರ ದೊಡ್ಡ ಅಭಿಮಾನಿ. ಅವರಿಗೆ ರಜನಿಕಾಂತ್ ಬಗ್ಗೆ ಅಷ್ಟೇ ಗೌರವ ಇದೆ. ಕಮಲ್ ಹಾಸನ್ ನಿರ್ದೇಶನದ 'ಹೇ ರಾಮ್' ಚಿತ್ರದಲ್ಲಿ ಶಾರುಖ್ ಒಂದು ರೂಪಾಯಿ ಸಂಭಾವನೆ ಪಡೆಯದೆ ನಟಿಸಿದರು. ಅದಾದ ನಂತರ, ಕಿಂಗ್ ಖಾನ್ ನಿರ್ಮಿಸಿ ನಟಿಸಿದ 'ರಾ ಒನ್' ಚಿತ್ರದಲ್ಲಿ ರಜನಿಕಾಂತ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡರು.



ಈಗ ಕಿಂಗ್ ಖಾನ್ ಆ ಸಾಲವನ್ನು ತೀರಿಸಿದ್ದಾರೆ. ತಮಿಳು ಸೂಪರ್ ಸ್ಟಾರ್ ರಜನಿಕಾಂತ್ ನಾಯಕನಾಗಿ ಮತ್ತು ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶನದ 'ಜೈಲರ್' ಭಾರಿ ಯಶಸ್ಸನ್ನು ಕಂಡಿತು. ಶಿವಣ್ಣ, ಮೋಹನ್ ಲಾಲ್, ಜಾಕಿ ಶ್ರಾಫ್ ಮತ್ತು ಇತರ ಕೆಲವು ತಾರೆಯರು ಆ ಚಿತ್ರದಲ್ಲಿ ಅತಿಥಿ ಪಾತ್ರಗಳಲ್ಲಿ ನಟಿಸಿದ್ದಾರೆ. ಪ್ರಸ್ತುತ, 'ಜೈಲರ್ 2' ಚಿತ್ರೀಕರಣ ನಡೆಯುತ್ತಿದೆ, ಈ ಬಾರಿ ಶಾರುಖ್ ಖಾನ್ 'ಜೈಲರ್ 2'ನಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. 15 ವರ್ಷಗಳ ನಂತರ, ಶಾರುಖ್ ಖಾನ್ ರಜನಿಕಾಂತ್ ಅವರ ಋಣವನ್ನು ತೀರಿಸಿದ್ದಾರೆ. ಮಲಯಾಳಂ ಸೂಪರ್ ಸ್ಟಾರ್ ಮೋಹನ್ ಲಾಲ್ ಅವರ ವೈಯಕ್ತಿಕ ಸ್ಟೈಲಿಸ್ಟ್ ಜಿಶಾದ್ ಶಂಶುದ್ದೀನ್ ತಮ್ಮ ಇನ್ಸ್ಟಾಗ್ರಾಮ್ ಸ್ಟೋರಿಯಲ್ಲಿ ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಶಾರುಖ್ ಖಾನ್ ಕಾರು ಚಾಲನೆ ಮಾಡುತ್ತಿರುವಾಗ ಮೋಹನ್ ಲಾಲ್ ಅವರ ಪಕ್ಕದಲ್ಲಿ ಮತ್ತು ರಜನಿಕಾಂತ್ ಮತ್ತು ಶಿವರಾಜ್ ಕುಮಾರ್ ಹಿಂದಿನ ಸೀಟಿನಲ್ಲಿ ಕುಳಿತಿರುವ ಎಐ ಫೋಟೋವನ್ನು ಜಿಶಾದ್ ಹಂಚಿಕೊಂಡಿದ್ದಾರೆ. 'ಇದು ಖಂಡಿತವಾಗಿಯೂ ನಡೆಯಲಿದೆ'.

# ಜಗನ್ನಾಥನ ದರ್ಶನ ಪಡೆದ ಶೋಭಿತಾ



**ಸಾಮಾಜಿಕ ಮಾಧ್ಯಮದಲ್ಲಿ ವೈರಲ್**

ಅಕ್ಕಿನೇನಿ ನಾಗ ಚೈತನ್ಯ ಹಾಗೂ ಅವರ ಪತ್ನಿ ಸಿನಿಮಾ ರಂಗದಲ್ಲಿ ತೊಡಗಿಕೊಂಡಿದ್ದಾರೆ. ನಾಗ ಚೈತನ್ಯ ಅವರು 'ಯೆ ಮಾಯ ಚೇಸಾವೆ' ಚಿತ್ರದ ಮೂಲಕ ಸೂಪರ್ ಹಿಟ್ ಆದರು.

ಇದಾದ ಬಳಿಕ ಹಲವು ಸಿನಿಮಾಗಳಲ್ಲಿ ನಟಿಸಿ ಮೆಚ್ಚುಗೆ ಪಡೆದಿದ್ದಾರೆ. ಈಗ ಅವರು 'ವೃಷಕರ್ಮ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಈ ಚಿತ್ರದ ಗ್ಲಿಂಪ್ಸ್ ಚಿತ್ರದ ಮೇಲಿನ ನಿರೀಕ್ಷೆಗಳನ್ನು ಹೆಚ್ಚಿಸಿದೆ. ಕಾರ್ತಿಕ್ ದಂಡು ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಚೈತನ್ಯಗೆ ನಾಯಕಿಯಾಗಿ ಮೀನಾಕ್ಷಿ ಚೌಧರಿ ನಟಿಸುತ್ತಿದ್ದಾರೆ.

ಈ ಸಿನಿಮಾದ ಗ್ಲಿಂಪ್ಸ್ ರಿಲೀಸ್ ಆದ ಬಳಿಕ ನಾಗ ಚೈತನ್ಯ ಅವರು ದೇವರ ದರ್ಶನ ಪಡೆದಿದ್ದಾರೆ.

ಇತ್ತೀಚೆಗೆ, ನಾಗ ಚೈತನ್ಯ ಮತ್ತು ಶೋಭಿತಾ ಧುಲಿಪಾಲ ಅವರು ಒಡಿಶಾದ ಪುರಿಯಲ್ಲಿರುವ ಜಗನ್ನಾಥ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ದಂಪತಿ ಭಗವಂತನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ, ಅವರಿಬ್ಬರೂ ಸಾಂಪ್ರದಾಯಿಕ ಉಡುಗೆಯಲ್ಲಿ ಗಮನ ಸೆಳೆದಿದ್ದಾರೆ. ಈ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ.

ನಾಗ ಚೈತನ್ಯ ಹಾಗೂ ಶೋಭಿತಾ 2024ರಲ್ಲಿ ವಿವಾಹ ಆದರು. ಸಮಂತಾ ಜೊತೆ ಬೇರೆ ಆದ ಬಳಿಕ ನಾಗ ಚೈತನ್ಯ ಅವರು ಒಂಟಿಯಾಗಿದ್ದರು. ಆಗ ಅವರಿಗೆ ಶೋಭಿತಾ ಪರಿಚಯ ಆಯಿತು. ಇಬ್ಬರ ಮಧ್ಯೆ ಪ್ರೀತಿ ಮೂಡಿ, ವಿವಾಹ ಆದರು. ಅತ್ತ ಸಮಂತಾ ಕೂಡ ನಿರ್ದೇಶಕ ರಾಜ್ ಜೊತೆ ಹಸೆಮಣೆ ಏರಿದರು. ಇತ್ತೀಚೆಗೆ ಬಿಡುಗಡೆಯಾದ 'ವೃಷಕರ್ಮ' ಗ್ಲಿಂಪ್ಸ್ ವಿಷಯಕ್ಕೆ ಬಂದರೆ, 'ಅಲೌಕಿಕ ಶಕ್ತಿ ಜಾಗೃತವಾದಾಗ, ಸೃಷ್ಟಿ ನಿಯಮ ಉಲ್ಲಂಘಿಸಿದಾಗ, ವಿಧಿ ವೃಷಕರ್ಮನನ್ನು ಆಯ್ಕೆ ಮಾಡಿದಾಗ' ಎಂಬ ಡೈಲಾಗ್ ಗಮನ ಸೆಳೆದಿದೆ. ನಾಗ ಚೈತನ್ಯ ಅವರು ಸಿನಿಮಾ ಮೂಲಕ ಆಕ್ಷನ್ ಮೆರೆಯಲು ರೆಡಿ ಆಗಿದ್ದಾರೆ.

# ರಶ್ಮಿಕಾಗೆ ಸಿಕ್ತು ಅವಾರ್ಡ್



ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಮದುವೆಯಾದ ಕೆಲವೇ ದಿನಗಳಲ್ಲಿ ರಶ್ಮಿಕಾಗೆ 'ಗದ್ದರ್ ಫಿಲ್ಮ್ ಅವಾರ್ಡ್ 2025' ಪ್ರಶಸ್ತಿ ಲಭಿಸಿದೆ. 'ಗರ್ಲ್‌ಫ್ರೆಂಡ್' ಚಿತ್ರದ ಅತ್ಯುತ್ತಮ ನಟನೆಗಾಗಿ ತೆಲಂಗಾಣ ಸರ್ಕಾರ ನೀಡಿದ ಈ ರಾಜ್ಯ ಪ್ರಶಸ್ತಿಯು ಅಭಿಮಾನಿಗಳಲ್ಲಿ ಸಂತಸ ತಂದಿದೆ. ನವೆಂಬರ್ 7ರಂದು ಬಿಡುಗಡೆಯಾದ 'ಗರ್ಲ್‌ಫ್ರೆಂಡ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ 29 ಕೋಟಿ ಗಳಿಸಿತ್ತು.

ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಇತ್ತೀಚೆಗೆ ಮದುವೆ ಆದರು. ಈ ವಿವಾಹದ ಬಳಿಕ ಅವರು ವಿವಿಧ ರೀತಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈಗ ಮದುವೆ ಆದ ಬಳಿಕ ರಶ್ಮಿಕಾ ಮಂದಣ್ಣಗೆ ಗುಡ್ ನ್ಯೂಸ್ ಸಿಕ್ಕಿದೆ. ತೆಲಂಗಾಣ ಸರ್ಕಾರ '2025ರ ಗದ್ದರ್ ಫಿಲ್ಮ್ ಅವಾರ್ಡ್' ಸಿಕ್ಕಿದೆ. 'ಗರ್ಲ್‌ಫ್ರೆಂಡ್' ಚಿತ್ರದ ನಟನೆಗೆ ಈ ಅವಾರ್ಡ್ ಸಿಕ್ಕಿದೆ. ಇದು ಅಭಿಮಾನಿಗಳ ಖುಷಿ ಹೆಚ್ಚಿಸಿದೆ.

ರಶ್ಮಿಕಾ ಮಂದಣ್ಣ ಅವರು ಫೆಬ್ರವರಿ 26ರಂದು ಮದುವೆ ಆದರು. ಉದಯಪುರದಲ್ಲಿ ಈ ವಿವಾಹ ನಡೆಯಿತು. ಫೆಬ್ರವರಿ 4ರಂದು ಇವರ ಆರತಕ್ಷತೆ ನಡೆದಿದೆ. ವಿವಾಹ ಆದ ಒಂದೇ ವಾರಕ್ಕೆ ರಶ್ಮಿಕಾಗೆ ಗುಡ್ ನ್ಯೂಸ್ ಸಿಕ್ಕಿದೆ. ಅವರಿಗೆ ತೆಲಂಗಾಣ ರಾಜ್ಯ ಪ್ರಶಸ್ತಿ ಸಿಕ್ಕಿದ್ದು ಅಭಿಮಾನಿಗಳ ಖುಷಿ ಹೆಚ್ಚಿಸಿದೆ. 'ಗರ್ಲ್‌ಫ್ರೆಂಡ್' ಚಿತ್ರವನ್ನು ರಾಹುಲ್ ರವೀಂದ್ರನ್ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾ ನವೆಂಬರ್ 7ರಂದು ರಿಲೀಸ್ ಆಯಿತು. ಈ ಚಿತ್ರ ಗಮನ ಸೆಳೆಯಿತು. ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ 29 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ ಎನ್ನಲಾಗಿದೆ. 'ಥಂಡೇಲ್' ಸಿನಿಮಾದ ನಟನೆಗೆ ನಾಗ ಚೈತನ್ಯ ಅವರಿಗೆ ಅತ್ಯುತ್ತಮ ಅವಾರ್ಡ್ ಸಿಕ್ಕಿದೆ. 'ರಾಜು ವೆಡ್ಸ್ ರಾಂಬಾಯಿ' ಸಿನಿಮಾಗೆ ಅತ್ಯುತ್ತಮ ಸಿನಿಮಾ ಅವಾರ್ಡ್ ಸಿಕ್ಕಿದೆ. ಶಿವಾಜಿ ಅವರು ಅತ್ಯುತ್ತಮ ಪೋಷಕ ನಟನ ಪಾತ್ರ ಮಾಡಿದ್ದಾರೆ. ಭೂಮಿಕಾ ಅವರು ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಪಡೆದರು. ಎನ್‌ಟಿಆರ್ ನ್ಯಾಷನಲ್ ಫಿಲ್ಮ್ ಅವಾರ್ಡ್ ಪ್ರಶಸ್ತಿ ಚಿರಂಜೀವಿಗೆ ಸಿಕ್ಕಿದೆ.

# ಸಂಜು 26 ರನ್ ಬಾರಿಸಿದರೆ ಭಾರತಕ್ಕೆ ಗೆಲುವು ಖಚಿತ

2026ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿ ಆಗಲಿವೆ. ಈ ಪ್ರಶಸ್ತಿ ಕದನದಲ್ಲಿ ಸಂಜು ಸ್ಯಾಮ್ಸನ್ ಪ್ರದರ್ಶನವು ಭಾರತದ ಗೆಲುವಿಗೆ ನಿರ್ಣಾಯಕವಾಗಿದೆ. ಸಂಜು 26 ಅಥವಾ ಅದಕ್ಕಿಂತ ಹೆಚ್ಚು ರನ್ ಗಳಿಸಿದರೆ ಭಾರತವು ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಗೆಲ್ಲುತ್ತದೆ ಎಂಬ ದಾಖಲೆ ಇದೆ. ಪ್ರಸ್ತುತ ವಿಶ್ವಕಪ್‌ನಲ್ಲಿ ಅವರ ಉತ್ತಮ ಫಾರ್ಮ್ ಭಾರತಕ್ಕೆ ಮತ್ತಷ್ಟು ಬಲ ತುಂಬಿದೆ. ಹೀಗಾಗಿ ಅವರ ಇನ್ನಿಂಗ್ಸ್ ಮೇಲೆ ಎಲ್ಲರ ಕಣ್ಣು. 2026 ರ ಮಾರ್ಚ್ 8 ರಂದು ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಟಿ20 ವಿಶ್ವಕಪ್ ಫೈನಲ್ ಪಂದ್ಯ ನಡೆಯಲಿದೆ.



ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪ್ರಶಸ್ತಿ ಹಣಾಹಣಿಗೆ ಇಡೀ ವಿಶ್ವವೇ ಕಾದುಕುಳಿತಿದೆ. ಹಾಲಿ ಚಾಂಪಿಯನ್ ಭಾರತವೇ ಗೆಲುವಿನ ಫೇವರೇಟ್ ಎನಿಸಿಕೊಂಡಿದ್ದರೂ ನ್ಯೂಜಿಲೆಂಡ್ ಕೂಡ ತನ್ನ ಚೊಚ್ಚಲ ಟಿ20 ವಿಶ್ವಕಪ್‌ಗಾಗಿ ಎದುರು ನೋಡುತ್ತಿದೆ. ಹೀಗಾಗಿ ಈ ಪಂದ್ಯವನ್ನು ಗೆಲ್ಲಬೇಕೆಂದರೆ ಸಾಂಘಿಕ ಪ್ರದರ್ಶನ ನೀಡಬೇಕಾಗುತ್ತದೆ.

ಅದರಲ್ಲೂ ಟೀಂ ಇಂಡಿಯಾ ಪರ ಕಳೆದೆರಡು ಪಂದ್ಯಗಳಲ್ಲಿ ಅಮೋಘ ಪ್ರದರ್ಶನ ನೀಡಿ ತಂಡದ ಗೆಲುವಿನ ಪ್ರಮುಖ ರೂವಾರಿ ಎನಿಸಿಕೊಂಡಿರುವ ಸಂಜು ಸ್ಯಾಮ್ಸನ್ ಅವರಿಂದ ಫೈನಲ್ ಪಂದ್ಯದಲ್ಲೂ ಮತ್ತೊಂದು ಒಳ್ಳೆಯ ಇನ್ನಿಂಗ್ಸ್‌ನ ನಿರೀಕ್ಷೆ ಇಡಲಾಗಿದೆ.

ಇದಕ್ಕೆ ಪೂರಕವಾಗಿ ಕಾಕತಾಳಿಯವೆಂಬಂತೆ ಫೈನಲ್ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ 25 ಕ್ಕೂ ಹೆಚ್ಚು ರನ್‌ಗಳ ಇನ್ನಿಂಗ್ಸ್ ಆಡಿದರೆ, ಭಾರತಕ್ಕೆ ಗೆಲುವು ಖಚಿತ ಎನ್ನಲಾಗುತ್ತಿದೆ. ಸಂಜು ಸ್ಯಾಮ್ಸನ್ ಇದುವರೆಗೆ ತಮ್ಮ ವೃತ್ತಿಜೀವನದಲ್ಲಿ 61 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದಾರೆ. ಆ 61 ಪಂದ್ಯಗಳಲ್ಲಿ, ಅವರು 53 ಇನ್ನಿಂಗ್ಸ್‌ಗಳನ್ನು ಆಡಿದ್ದು, 3 ಶತಕಗಳೊಂದಿಗೆ 1310 ರನ್ ಕಲೆಹಾಕಿದ್ದಾರೆ. ಈ 61 ಪಂದ್ಯಗಳಲ್ಲಿ ಸಂಜು ಸ್ಯಾಮ್ಸನ್ 16 ಪಂದ್ಯಗಳಲ್ಲಿ 25 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಪ್ರಮುಖ ವಿಷಯವೆಂದರೆ ಸಂಜು ಸ್ಯಾಮ್ಸನ್ 25 ಕ್ಕೂ ಹೆಚ್ಚು ರನ್ ಗಳಿಸಿದ ಎಲ್ಲಾ 16 ಪಂದ್ಯಗಳನ್ನು ಭಾರತ ಗೆದ್ದಿದೆ. ಇದರರ್ಥ ಅಂತರರಾಷ್ಟ್ರೀಯ ಟಿ20 ಪಂದ್ಯದಲ್ಲಿ ಸಂಜು ಸ್ಯಾಮ್ಸನ್ 26 ರನ್‌ಗಳ ಇನ್ನಿಂಗ್ಸ್ ಆಡಿದರೆ ಭಾರತಕ್ಕೆ ಗೆಲುವು ಎಂಬುದು ಸ್ಪಷ್ಟವಾಗಿದೆ. ಹೀಗಾಗಿ ಸಂಜು ಸ್ಯಾಮ್ಸನ್ 2026 ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ 26 ಅಥವಾ ಅದಕ್ಕಿಂತ ಹೆಚ್ಚು ರನ್‌ಗಳ ಇನ್ನಿಂಗ್ಸ್ ಆಡಿದರೆ, ಟೀಂ ಇಂಡಿಯಾಕ್ಕೆ ಗೆಲುವು ಖಚಿತವಾದಂತೆ. 2026 ರ ಟಿ20 ವಿಶ್ವಕಪ್‌ನಲ್ಲಿ ಸಂಜು ಸ್ಯಾಮ್ಸನ್ ಇಲ್ಲಿಯವರೆಗೆ ನಾಲ್ಕು ಪಂದ್ಯಗಳನ್ನು ಆಡಿದ್ದಾರೆ. ಆ ನಾಲ್ಕು ಪಂದ್ಯಗಳಲ್ಲಿ, ಅವರು 77 ಕ್ಕಿಂತ ಹೆಚ್ಚು ಸರಾಸರಿ ಮತ್ತು 201 ಕ್ಕಿಂತ ಹೆಚ್ಚು ಸ್ಟ್ರೈಕ್ ರೇಟ್‌ನಲ್ಲಿ 232 ರನ್ ಗಳಿಸಿದ್ದಾರೆ. ಈ ಅವಧಿಯಲ್ಲಿ, ಅವರು 16 ಸಿಕ್ಸರ್ ಬಾರಿಸಿದ್ದಾರೆ. ಇದು ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ಆಟಗಾರ ಬಾರಿಸಿದ ಅತ್ಯಧಿಕ ಸಿಕ್ಸರ್‌ಗಳ ದಾಖಲೆಯಾಗಿದೆ. ಅಲ್ಲದೆ ಕಳೆದ ವಿಶ್ವಕಪ್‌ನಲ್ಲಿ ರೋಹಿತ್ ಶರ್ಮಾ ಬಾರಿಸಿದ್ದ 15 ಸಿಕ್ಸರ್‌ಗಳ ದಾಖಲೆಯನ್ನು ಸಂಜು ಮುರಿದಿದ್ದಾರೆ.

# ಭಾರತ- ಕಿವೀಸ್ ಎಷ್ಟು ಬಾರಿ ಮುಖಾಮುಖಿ

2026ರ ಟಿ20 ವಿಶ್ವಕಪ್ ಫೈನಲ್ ಪಂದ್ಯವು ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಅಹಮದಾಬಾದ್‌ನಲ್ಲಿ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತಕ್ಕೆ ಇದು ಸತತ ಎರಡನೇ ಪ್ರಶಸ್ತಿ ಗೆಲ್ಲುವ ಅವಕಾಶ. ಆದರೆ, ಐಸಿಸಿ ನಾಕೌಟ್ ಪಂದ್ಯಗಳಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತದ ಇತಿಹಾಸ ಸವಾಲಿನಿಂದ ಕೂಡಿದೆ. ಈ ಹಿಂದಿನ ಐದು ನಾಕೌಟ್‌ಗಳಲ್ಲಿ ಭಾರತ 2 ಪಂದ್ಯಗಳನ್ನು ಗೆದ್ದಿದ್ದರೆ, ನ್ಯೂಜಿಲೆಂಡ್ 3 ಪಂದ್ಯಗಳನ್ನು ಗೆದ್ದಿದೆ. ಈ ಮಹತ್ವದ ಪಂದ್ಯ ರೋಮಾಂಚನಕಾರಿ ಸೆಣಸಾಟಕ್ಕೆ ವೇದಿಕೆ ಕಲ್ಪಿಸಲಿದೆ.



2026 ರ ಟಿ20 ವಿಶ್ವಕಪ್‌ನ ಫೈನಲ್ ಪಂದ್ಯ ಆತಿಥೇಯ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಈ ಪಂದ್ಯಾವಳಿಯಲ್ಲಿ ಹಾಲಿ ಚಾಂಪಿಯನ್ ಆಗಿರುವ ಟೀಂ ಇಂಡಿಯಾ ಸತತ ಎರಡನೇ ಬಾರಿಗೆ ಟ್ರೋಫಿ ಎತ್ತಿಹಿಡಿಯುವ ಇರಾದೆಯಲ್ಲಿದೆ. ಆದಾಗ್ಯೂ, ಕಿವೀಸ್ ನಂತಹ ಬಲಿಷ್ಠ ತಂಡವನ್ನು ಮಣಿಸುವುದು ಅಷ್ಟು ಸುಲಭದ ಮಾತಲ್ಲ. ಅದರಲ್ಲೂ ಐಸಿಸಿ ನಾಕೌಟ್‌ಗಳಲ್ಲಿ ಭಾರತದ ವಿರುದ್ಧ ಕಿವೀಸ್ ಮೇಲುಗೈ ಸಾಧಿಸಿರುವುದರಿಂದ ಭಾರತ ಗೆಲುವಿಗಾಗಿ ಸಾಕಷ್ಟು ಬೆವರು ಹರಿಸಬೇಕಿದೆ. ಐಸಿಸಿ ಟೂರ್ನಮೆಂಟ್‌ಗಳ ನಾಕೌಟ್ ಸುತ್ತಿನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಐದು ಬಾರಿ ಮುಖಾಮುಖಿಯಾಗಿವೆ. ಇವುಗಳಲ್ಲಿ, ಕಿವೀಸ್ ಮೂರು ಪಂದ್ಯಗಳನ್ನು ಗೆದ್ದಿದ್ದರೆ, ಭಾರತ ಎರಡರಲ್ಲಿ ಗೆಲುವು ಸಾಧಿಸಿದೆ. ಆದಾಗ್ಯೂ, ಟಿ20 ವಿಶ್ವಕಪ್‌ನ ನಾಕೌಟ್ ಹಂತಗಳಲ್ಲಿ ಉಭಯ ತಂಡಗಳು ಪರಸ್ಪರ ಎದುರಾಗುತ್ತಿರುವುದು ಇದೇ ಮೊದಲು. ಇದಕ್ಕೂ ಮೊದಲು ಉಭಯ ತಂಡಗಳು ಏಕದಿನ ಅಥವಾ ಟೆಸ್ಟ್ ಚಾಂಪಿಯನ್‌ಶಿಪ್‌ಗಳ ನಾಕೌಟ್ ಹಂತಗಳಲ್ಲಿ ಮಾತ್ರ ಮುಖಾಮುಖಿಯಾಗಿದ್ದರು.

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಐಸಿಸಿ ಟೂರ್ನಮೆಂಟ್‌ನ ನಾಕೌಟ್ ಹಂತದಲ್ಲಿ ಮೊದಲ ಬಾರಿಗೆ ಮುಖಾಮುಖಿಯಾಗಿದ್ದು 2000ದ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ. ಸ್ಟೀಫನ್ ಫ್ಲೆಮಿಂಗ್ ನೇತೃತ್ವದ ನ್ಯೂಜಿಲೆಂಡ್ ತಂಡವು ಸೌರವ್ ಗಂಗೂಲಿ ನೇತೃತ್ವದ ಭಾರತ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 264 ರನ್ ಗಳಿಸಿತು. ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ 49.4 ಓವರ್‌ಗಳಲ್ಲಿ ಆರು ವಿಕೆಟ್‌ಗಳನ್ನು ಕಳೆದುಕೊಂಡು ಜಯದ ನಗೆಬೀರಿತ್ತು. 2019ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಎರಡೂ ತಂಡಗಳು ಎರಡನೇ ಬಾರಿಗೆ ಐಸಿಸಿ ನಾಕೌಟ್ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಗೆಲುವಿನ ಸಮೀಪ ಬಂದಿದ್ದ ಟೀಂ ಇಂಡಿಯಾ ಸೋಲಿನ ಆಘಾತಕ್ಕೆ ಒಳಗಾಯಿತು. ಎರಡು ದಿನ ನಡೆದ ಈ ಸೆಮಿಫೈನಲ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ ಎಂಟು ವಿಕೆಟ್‌ಗಳಿಗೆ 239 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ, ಭಾರತ 49.3 ಓವರ್‌ಗಳಲ್ಲಿ 221 ರನ್‌ಗಳಿಗೆ ಆಲೌಟ್ ಆಗಿ 18 ರನ್‌ಗಳಿಂದ ಸೋತಿತು.

2019 ರ ನಂತರ, 2021 ರಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಿದ್ದವು. ಗೆಲುವಿಗೆ ಕೇವಲ 139 ರನ್‌ಗಳ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ಎರಡು ವಿಕೆಟ್‌ಗಳನ್ನು ಕಳೆದುಕೊಂಡು ಪಂದ್ಯವನ್ನು ಗೆದ್ದುಕೊಂಡಿದಲ್ಲದೆ ಚಾಂಪಿಯನ್ ಆಗಿಯೂ ಹೊರಹೊಮ್ಮಿತು.

2021 ರ ನಂತರ, ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು 2023 ರ ಏಕದಿನ ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ ನಾಲ್ಕನೇ ಬಾರಿಗೆ ಪರಸ್ಪರ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ರೋಹಿತ್ ನೇತೃತ್ವದ ಟೀಂ ಇಂಡಿಯಾ, ಕೇನ್ ವಿಲಿಯಮ್ಸನ್ ನೇತೃತ್ವದ ನ್ಯೂಜಿಲೆಂಡ್ ತಂಡವನ್ನು 70 ರನ್‌ಗಳಿಂದ ಸೋಲಿಸಿತು. ವಾಂಖೆಡೆಯಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 50 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗಳಿಗೆ 397 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ 48.5 ಓವರ್‌ಗಳಲ್ಲಿ 327 ರನ್‌ಗಳಿಗೆ ಆಲೌಟ್ ಆಯಿತು. ಆ ಬಳಿಕ ಕಳೆದ ವರ್ಷ ನಡೆದಿದ್ದ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಉಭಯ ತಂಡಗಳು ಐದನೇ ಬಾರಿಗೆ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸುವ ಮೂಲಕ ಭಾರತ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ ಏಳು ವಿಕೆಟ್‌ಗಳ ನಷ್ಟಕ್ಕೆ 251 ರನ್ ಕಲೆಹಾಕಿತು.

# ನನ್ನ ಹೃದಯ ಮತ್ತು ಮನಸ್ಸು ಆ ತಂಡ ಗೆಲ್ಲುತ್ತದೆ ಎಂದು ಹೇಳುತ್ತಿದೆ!



**ಫೈನಲ್ ಬಗ್ಗೆ ಡಿವಿಲಿಯರ್ಸ್ ಭವಿಷ್ಯ**

ಡಿವಿಲಿಯರ್ಸ್ ಅವರ ಪ್ರಸ್ತುತ ಫಾರ್ಮ್ ಮತ್ತು ತವರಿನ ಪರಿಸ್ಥಿತಿಗಳನ್ನು ಗಮನಿಸಿದರೆ, ಟೀಮ್ ಇಂಡಿಯಾ ವಿಶ್ವ ಚಾಂಪಿಯನ್ ಆಗಲು ಸುವರ್ಣಾವಕಾಶವನ್ನು ಹೊಂದಿದೆ. ನ್ಯೂಜಿಲೆಂಡ್ ಭಾರತದಂತಹ ಬಲಿಷ್ಠ ತಂಡದ ವಿರುದ್ಧ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ ಎಂದು ಅವರು ಹೇಳಿದರು.

ಭಾರತ ಹಾಗೂ ನ್ಯೂಜಿಲೆಂಡ್ ಟಿ20 ವಿಶ್ವಕಪ್ ಫೈನಲ್ ಪಂದ್ಯಕ್ಕೆ ಕ್ಷಣಗಣನೆ ಶುರುವಾಗಿದೆ. ಈ ಮಹತ್ವದ ಪಂದ್ಯಕ್ಕೂ ಮುನ್ನ ಕ್ರಿಕೆಟ್ ಪಂಡಿತರು ಮತ್ತು ಪ್ರೇಕ್ಷಕರಲ್ಲಿ ಚಾಂಪಿಯನ್ ತಂಡದ ಬಗ್ಗೆ ಚರ್ಚೆಗಳು ಬಿಸಿಯಾಗುತ್ತಿವೆ. ದಕ್ಷಿಣ ಆಫ್ರಿಕಾದ ಬ್ಯಾಟಿಂಗ್ ದಂತಕಥೆ ಎಬಿ ಡಿವಿಲಿಯರ್ಸ್ ಈ ಮಹಾ ಪಂದ್ಯಕ್ಕೂ ಮುನ್ನ ತಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಈ ಐತಿಹಾಸಿಕ ಪಂದ್ಯದಲ್ಲಿ ಭಾರತ ಗೆಲುವಿನ ಪ್ರಬಲ ಸ್ಪರ್ಧಿ ಎಂದು ಡಿವಿಲಿಯರ್ಸ್ ಘೋಷಿಸಿದ್ದಾರೆ. ಭಾರತ ಮತ್ತು ನ್ಯೂಜಿಲೆಂಡ್ 2026 ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಮಾರ್ಚ್ 8 ರ ಭಾನುವಾರದಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಲಿವೆ.

**ಭಾರತವನ್ನ ಕಿವೀಶ್ ಮಣಿಸಲು ಅಸಾಧ್ಯ:** ಡಿವಿಲಿಯರ್ಸ್ ಅವರ ಪ್ರಸ್ತುತ ಫಾರ್ಮ್ ಮತ್ತು ತವರಿನ ಪರಿಸ್ಥಿತಿಗಳನ್ನು ಗಮನಿಸಿದರೆ, ಟೀಮ್ ಇಂಡಿಯಾ ವಿಶ್ವ ಚಾಂಪಿಯನ್ ಆಗಲು ಸುವರ್ಣಾವಕಾಶವನ್ನು ಹೊಂದಿದೆ. ನ್ಯೂಜಿಲೆಂಡ್ ಭಾರತದಂತಹ ಬಲಿಷ್ಠ ತಂಡದ ವಿರುದ್ಧ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ ಎಂದು ಅವರು ಹೇಳಿದರು. ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಕಿವೀಸ್‌ನ ಅವಕಾಶಗಳನ್ನು ಚರ್ಚಿಸುತ್ತಾ, ಪ್ರಾಮಾಣಿಕವಾಗಿ ಹೇಳುವುದಾದರೆ, ನ್ಯೂಜಿಲೆಂಡ್ ಗೆಲ್ಲುವ ಸಾಧ್ಯತೆ ಕೇವಲ 10 ರಿಂದ 20 ಪ್ರತಿಶತ ಮಾತ್ರ. ಭಾರತವನ್ನು ಸೋಲಿಸಲು ಅವರು ತಮ್ಮ ಜೀವನದ ಅತ್ಯುತ್ತಮ ಕ್ರಿಕೆಟ್ ಆಡಬೇಕಾಗುತ್ತದೆ ಎಂದು ಹೇಳಿದ್ದಾರೆ.

# ಭಾರತೀಯರ ಹೃದಯ ಒಡೆದು ಟ್ರೋಫಿ ಗೆಲ್ಲುತ್ತೇವೆ



2026 ರ ಟಿ20 ವಿಶ್ವಕಪ್ ಫೈನಲ್ ಪಂದ್ಯ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಮಾರ್ಚ್ 8 ರಂದು ನಡೆಯುವ ಫೈನಲ್ ಪಂದ್ಯಕ್ಕೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಪರ್ತಕರ್ತರ ಪ್ರಶ್ನೆಗಳಿಗೆ ಉತ್ತರಿಸಿದ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್, ಟ್ರೋಫಿಗಾಗಿ ಕೆಲವು ಹೃದಯಗಳನ್ನು ಒಡೆಯುವುದಕ್ಕೆ ನನಗೆ ಯಾವುದೇ ಅಭ್ಯಂತರವಿಲ್ಲ ಎಂದಿದ್ದಾರೆ. ಅಂದರೆ ಟಿ20 ವಿಶ್ವಕಪ್ ಗೆದ್ದು ಟೀಂ ಇಂಡಿಯಾ ಅಭಿಮಾನಿಗಳ ಹೃದಯ ಒಡೆಯುವುದಕ್ಕೆ ನಾವು ಸಿದ್ಧ ಎಂಬುದು ಕಿವೀಸ್ ನಾಯಕನ ಹೇಳಿಕೆಯಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಿವೀಸ್ ನಾಯಕ ಮಿಚೆಲ್ ಸ್ಯಾಂಟ್ನರ್, 2023 ರ ಏಕದಿನ ವಿಶ್ವಕಪ್ ಫೈನಲ್‌ಗೂ ಮುನ್ನ ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮ್ಮಿನ್ಸ್ ನೀಡಿದ್ದ ಹೇಳಿಕೆಯನ್ನೇ ಪುನಾರವರ್ತಿಸಿದ್ದಾರೆ. ವಾಸ್ತವವಾಗಿ 2023 ರ ಏಕದಿನ ವಿಶ್ವಕಪ್ ಫೈನಲ್‌ಗೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಕಮ್ಮಿನ್ಸ್, 'ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪ್ರೇಕ್ಷಕರನ್ನು ಮೌನಗೊಳಿಸುವುದಾಗಿ' ಹೇಳಿದ್ದರು. ಕಮ್ಮಿನ್ಸ್ ಹೇಳಿದಂತೆಯೇ ಫೈನಲ್ ಪಂದ್ಯದಲ್ಲಿ ಸೋತಿದ್ದ ಟೀಂ ಇಂಡಿಯಾ ಅಭಿಮಾನಿಗಳನ್ನು ಮೌನಕ್ಕೆ ತಳ್ಳಿತ್ತು. ಇದೀಗ ಮಿಚೆಲ್ ಸ್ಯಾಂಟ್ನರ್ ಕೂಡ ಅದೇ ರೀತಿಯ ಹೇಳಿಕೆಯನ್ನು ನೀಡಿದ್ದು, 'ಈ ಫೈನಲ್ ಗೆಲ್ಲಲು ತಮ್ಮ ತಂಡವನ್ನು ಪ್ರಬಲ ಸ್ಪರ್ಧಿ ಎಂದು ಪರಿಗಣಿಸದಿದ್ದರೂ, ಸಣ್ಣ ವಿವರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಪ್ರದರ್ಶನವನ್ನು ಸುಧಾರಿಸಲು ಪ್ರಯತ್ನಿಸುತ್ತೇವೆ. 'ನಮ್ಮ ಗೆಲುವು ಕೆಲವು ಅಭಿಮಾನಿಗಳ ಹೃದಯವನ್ನು ಒಡೆದರೆ, ನಮ್ಮ ಮೊದಲ ಟಿ20 ವಿಶ್ವಕಪ್ ಪ್ರಶಸ್ತಿಯನ್ನು ಗೆಲ್ಲಲು ನಾವು ಬಯಸುವುದರಿಂದ ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ' ಎಂದಿದ್ದಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**